ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 17 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 92 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಅನಧಿಕೃತ ಬಡಾವಣೆಯ ನಿವೇಶನ, ಕಟ್ಟಡಕ್ಕೆ ನಮೂನೆ-3

ವಿಧಾನಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಒತ್ತಾಯ




ಮೈಸೂರು, ಜು.16– ಅನಧಿಕೃತ ಬಡಾವಣೆಗಳ ಕಟ್ಟಡ ಹಾಗೂ ನಿವೇಶನಗಳಿಗೆ ನಮೂನೆ–3 ನೀಡುವಂತೆ ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ. ಹರೀಶ್‌ಗೌಡ, ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅಕ್ರಮ ಬಡಾವಣೆಗಳಲ್ಲಿ ನಿರ್ಮಿಸಿರುವ ಕಟ್ಟಡಗಳು ಹಾಗೂ ನಿವೇಶನಗಳಿಗೆ ನಮೂನೆ 3 ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಜಿ.ಡಿ.ಹರೀಶ್‌ಗೌಡರ ಪ್ರಶ್ನೆಗೆ ಉತ್ತರ ನೀಡಲಾಗಿದೆ ಎಂದು ಪೌರಾಡಳಿತ ಸಚಿವ ರಹೀಂ ಖಾನ್ ತಿಳಿಸಿದರು. ಈ ಬಗ್ಗೆ ಮಾತು ಮುಂದುವರೆಸಿದ ಹರೀಶ್‌ಗೌಡ, ಸಚಿವರು ಗ್ರಾಮ ಠಾಣಾ ಮತ್ತು ನಗರ ಯೋಜನಾ ಇಲಾಖೆಯಿಂದ ಅನುಮೋದನೆಗೊಂಡಿರುವ ಬಡಾವಣೆಗಳಿಗೆ ಮಾತ್ರ ನಮೂನೆ 3ನ್ನು ಕೊಡುತ್ತಿದ್ದೇವೆ. ಯೋಜನಾ ಇಲಾಖೆಯಿಂದ ಅನುಮೋದನೆಯಾಗದ ಬಡಾವಣೆಗಳಿಗೆ ನೀಡಲು ಅವಕಾಶ ಇರುವುದಿಲ್ಲ ಎಂದಿದ್ದಾರೆ. ಆದರೆ ಹುಣಸೂರು ಕ್ಷೇತ್ರದಲ್ಲಿ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. 1977ರಿಂದಲೂ ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿವೆ. ನಂತರವೂ ಸಾಕಷ್ಟು ವಹಿವಾಟು ನಡೆದಿದೆ ಎಂದರು.

ರಾಜ್ಯ ಸರ್ಕಾರ 31-12-2013ರಂದು ಹೊರಡಿಸಿದ ರಾಜ್ಯಪತ್ರದಲ್ಲಿ 19-10-2013ರ ಮುಂಚಿತವಾಗಿ ರಚಿತವಾಗಿರುವ ಅನಧಿಕೃತ ಬಡಾವಣೆಗಳನ್ನು ಸಕ್ರಮಗೊಳಿಸುವ ಕುರಿತು ನಿಯಮಗಳನ್ನು ರಚಿಸಲಾಗಿದ್ದು, ಜಾರಿಗೊಳಿಸಬೇಕಾಗಿರುತ್ತದೆ ಎಂದು ತಿಳಿಸಲಾಗಿದೆ. ನಂತರ 22-3-2017ರಲ್ಲಿ ಯಾವುದೇ ಕಾರಣಕ್ಕೂ ಅನಧಿಕೃತ ಬಡಾವಣೆಗಳ ನಿವೇಶನ ಹಾಗೂ ಕಟ್ಟಡಗಳಿಗೆ ನಮೂನೆ-3 ನೀಡಬಾರದು. ಒಂದು ವೇಳೆ ನೀಡಿದರೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ, ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸುತ್ತೋಲೆ ಹೊರಡಿಸಿದ್ದಾರೆ. 2013ರಲ್ಲಿ ಕಟ್ ಆಫ್ ಡೇಟ್ ನಿಗದಿ ಮಾಡಿ, ನಂತರ ಅವಕಾಶವಿಲ್ಲ ಎಂದು ಗೊಂದಲ ಸೃಷ್ಟಿಸಲಾಗಿದೆ. 2017ರ ನಂತರ ಅಧಿಕಾರಿಗಳು ಸ್ಥಳೀಯ ಸಂಸ್ಥೆಗಳಲ್ಲಿ ನಮೂನೆ-3 ನೀಡುತ್ತಿಲ್ಲ. ಈ ಮೂಲಕ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಟ್ಟಂತಾಗಿದೆ ಎಂದು ತಿಳಿಸಿದರು.

ಸ್ಪೀಕರ್ ಯು.ಟಿ.ಖಾದರ್ ಅವರು ಹರೀಶ್‌ಗೌಡರ ಮಾತಿಗೆ ಮಧ್ಯ ಪ್ರವೇಶಿಸಿದರಾದರೂ ಅವರ ವಿವರಣೆಯನ್ನು ಕೇಳಿ ಮಾತು ಮುಂದುವರೆಸಲು ಅವಕಾಶ ಮಾಡಿಕೊಟ್ಟರು.

ರಾಜ್ಯಾಧ್ಯಕ್ಷರ ಸ್ಥಾನ ನೀಡದಿದ್ದರೆ ಮುಂದಿನ ತೀರ್ಮಾನ: ವಿ.ಸೋಮಣ್ಣ



ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ನೀಡದೇ ಹೋದರೆ, ಕಾರ್ಯಕರ್ತರ ಅಭಿಪ್ರಾಯ ಪಡೆದು ಮುಂದಿನ ತೀರ್ಮಾನ ತೆಗೆದುಕೊಳ್ಳುವುದಾಗಿ ಮಾಜಿ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಪಕ್ಷವು ಅಧ್ಯಕ್ಷ ಸ್ಥಾನ ಕೊಟ್ಟರೆ ಹಗಲಿರುಳು ಶ್ರಮಿಸುವೆ. ಆದ್ದರಿಂದ, ಅಧ್ಯಕ್ಷ ಸ್ಥಾನ ಕೊಡಬೇಕು ಎಂದರು. ಕಳೆದ 40 ವರ್ಷಗಳಿಂದ ರಾಜ್ಯ ರಾಜಕಾರಣದ ಆಗುಹೋಗುಗಳ ಮಾಹಿತಿ ಗೊತ್ತು. 365 ದಿನಗಳೂ ಜನರ ನಡುವೆ ಇದ್ದು ಜನ ಸಂಘಟನೆ ಮಾಡಿದ ಅನುಭವವಿದೆ. ಆದ್ದರಿಂದ ರಾಜ್ಯಾಧ್ಯಕ್ಷ ಸ್ಥಾನ ಕೊಡಿ ಎಂದು ಕೇಳಿದ್ದೇನೆ ಎಂದರು.

ಚುನಾವಣೆಯಲ್ಲಿ ಸೋಲು– ಗೆಲುವು ಸಹಜ. ಪಕ್ಷದ ಕಾರ್ಯಕರ್ತರು ಮತ್ತು ಮತದಾರರು ನಮ್ಮ ಜೊತೆಯಲ್ಲಿ ಇದ್ದಾರೆ ಎಂಬುದಕ್ಕೆ ಕಳೆದ ಬಾರಿಗಿಂತ ಈ ಬಾರಿ ಶೇಕಡವಾರು ಹೆಚ್ಚು ಮತಗಳನ್ನು ಪಡೆದಿದ್ದೇವೆ. ಪಕ್ಷದ ವರಿಷ್ಠರ ಮಾತಿಗೆ ಗೌರವ ನೀಡಿ ಬೇರೆ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದೆ. ಅತ್ಯುತ್ತಮವಾಗಿ ಅಭಿವೃದ್ಧಿಪಡಿಸಿದ್ದ ಗೋವಿಂದರಾಜನಗರ ಕ್ಷೇತ್ರದಲ್ಲಿಯೇ ಸ್ಪರ್ಧಿಸಿದ್ದರೆ ಬಿಜೆಪಿ ಗೆಲುವು ಸುಲಭವಾಗುತ್ತಿತ್ತು ಎಂದರು. ಸಭೆಯಲ್ಲಿ ಪರಿಷತ್ ಸದಸ್ಯರಾದ ದೇವೇಗೌಡ, ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಬಿಬಿಎಂಪಿ ಮಾಜಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿ, ಮೋಹನ್‌ಕುಮಾರ್, ದಾಸೇಗೌಡ, ರಾಮಪ್ಪ, ರಾಜಪ್ಪ, ಕ್ರಾಂತಿರಾಜು, ಸಿದ್ದಾರ್ಥ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.7.2023 ಸೋಮವಾರ, ಮಳೆ ನಕ್ಷತ್ರ: ಭರಣಿ 06.07.2023ರಿಂದ 19.07.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಭಾರತೀಯ ಭಾಷಾ ಸಂಸ್ಥಾಪನ, ಮೈಸೂರು:** 55ನೇ ಸಂಸ್ಥಾನ ದಿನಾಚರಣೆ ಮುಖ್ಯ ಅತಿಥಿ: ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಭಾರತೀಯ ಭಾಷೆಗಳ ಪ್ರಚಾರದ ಉನ್ನತ ಅಧಿಕಾರ ಸಮಿತಿಯ ಮುಖ್ಯಸ್ಥ ಪದ್ಮಶ್ರೀ ಚಾಮಕೃಷ್ಣಶಾಸ್ತ್ರಿ, ಅಧ್ಯಕ್ಷತೆ: ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಸ್ಥಳ: ಸಂಸ್ಥೆಯ ಆವರಣ, ಬೆಳಗ್ಗೆ 10 ಗಂಟೆಗೆ.

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ಎರಡು ದಿನಗಳ ಮಹಾಮ್-2023 ರಾಷ್ಟ್ರೀಯ ಮಟ್ಟದ ಹಬ್ಬ, ಮುಖ್ಯ ಅತಿಥಿ: ಸಿಐಐ ಚೇರ್ಮನ್ ಸ್ಯಾಮ್ ಚೆರಿಯನ್, ಅಧ್ಯಕ್ಷತೆ: ಮಹಾಜನ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಸ್ಥಳ: ಎಪಿಜೆ ಅಬ್ದುಲ್ ಕಲಾಂ ಆಡಿಟೋರಿಯಂ, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಶ್ರೀ ಕೃಷ್ಣ ಟ್ರಸ್ಟ್ ಚಾತುರ್ಮಾಸ್ಯ ಸಮಿತಿ:** ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮಿಗಳ 34ನೇ ಚಾತುರ್ಮಾಸ್ಯ ವ್ರತ, ಭಜನೆ, ಭಾಗವತ ಪ್ರವಚನ, ರಾಮಾಯಣ ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 5ರಿಂದ ರಾತ್ರಿ 8ರವರೆಗೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 17 ಸೋಮವಾರ 2023

ಸಂಪುಟ: 44 | ಸಂಚಿಕೆ: 92 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಜೆಪಿ-ಜೆಡಿಎಸ್ ಮೈತ್ರಿ ಸನ್ನಿಹಿತ

ಹೆಚ್.ಡಿ.ದೇವೇಗೌಡರೊಂದಿಗೆ ಬಿಜೆಪಿ ವರಿಷ್ಠರ ಮಾತುಕತೆ

- ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಮಾಹಿತಿ
- ಲೋಕಸಭಾ ಚುನಾವಣೆಗೂ ಮುನ್ನ ಮೈತ್ರಿ ಸಾಧ್ಯತೆ



ಹುಬ್ಬಳ್ಳಿ,ಜು.16–ಬಿಜೆಪಿ ರಾಷ್ಟ್ರೀಯ ನಾಯಕರು ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದು, ಎನ್‌ಡಿಎ ಜೊತೆ ಜೆಡಿಎಸ್ ಸೇರುವ ಲಕ್ಷಣಗಳು ನಿಚ್ಚಳವಾಗಿ ಕಂಡುಬರುತ್ತಿವೆ.

ಭಾನುವಾರ ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಬಿಜೆಪಿ ವರಿಷ್ಠರು ಮತ್ತು ಜೆಡಿಎಸ್ ವರಿಷ್ಠರಾದ ದೇವೇಗೌಡರ ನಡುವೆ ಮಾತುಕತೆ ನಡೆಯುತ್ತಿದೆ. ಈಗಾಗಲೇ ಕುಮಾರಸ್ವಾಮಿ ಕೂಡ ಕೆಲವು ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಆ ದಿಕ್ಕಿನಲ್ಲಿ ಮಾತುಕತೆ ಮುಂದುವರಿಯುತ್ತದೆ. ಮಾತುಕತೆಯ ಫಲಶೃತಿ ಆಧಾರದ ಮೇಲೆ ಮುಂದಿನ ರಾಜಕೀಯ ಬೆಳವಣಿಗೆಯಿದೆ ಎಂದಿದ್ದಾರೆ. ಅಲ್ಲದೇ ಬಹುತೇಕವಾಗಿ ಜುಲೈ 18ರ ನಂತರ ವಿರೋಧ ಪಕ್ಷದ ನಾಯಕರ ಆಯ್ಕೆ ನಡೆಯಲಿದೆ ಎಂದು ಹೇಳಿದರು.

ಕರ್ನಾಟಕ ರಾಜಕೀಯ ಅಂಗಳದಲ್ಲಿ ಈಗ ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರ ಬಹಳ ಚರ್ಚೆಯಾಗುತ್ತಿದೆ. ಜುಲೈ 18ರಂದು ದೆಹಲಿಯಲ್ಲಿ ಎನ್‌ಡಿಎ ಸಭೆ ನಡೆಯಲಿದ್ದು ಅದಕ್ಕೂ ಮುನ್ನ ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ದೆಹಲಿಗೆ ಹೋಗಿ ಬಿಜೆಪಿ ವರಿಷ್ಠರ ಜೊತೆ ಮಾತುಕತೆ ನಡೆಸಲಿದ್ದಾರೆ. 2024ರ ಲೋಕಸಭೆ ಚುನಾವಣೆಗೆ ಮುನ್ನ ಬಿಜೆಪಿ–ಜೆಡಿಎಸ್ ಮೈತ್ರಿಗೆ ವೇದಿಕೆ ಸಿದ್ಧವಾಗುತ್ತಿದೆ ಎಂದು ಹೇಳಲಾಗುತ್ತಿದೆ. ಮೋದಿಯವರನ್ನು ಮುಂದಿನ ಲೋಕಸಭೆ ಚುನಾವಣೆಯಲ್ಲಿ ಮಣಿಸುವ ಏಕೈಕ ಉದ್ದೇಶದಿಂದ ಪ್ರತಿಪಕ್ಷಗಳು ಒಂದಾಗುತ್ತಿವೆ, ಸಭೆ ಸೇರುವುದರಲ್ಲಿ ವಿಪಕ್ಷಗಳ ಪ್ರಮುಖ ವಿಷಯವೇ ಇಲ್ಲ, ಬಿಜೆಪಿ ಸೋಲಿಸುವುದೊಂದೇ ಅವರ ಸಭೆಯ ಅಜೆಂಡಾವಾಗಿದೆ ಎಂದು ಟೀಕಿಸಿದರು. ಬೆಂಗಳೂರಿನಲ್ಲಿ 2 ದಿನ ಪ್ರತಿಪಕ್ಷ ನಾಯಕರು ಸಭೆ ಮಾಡುತ್ತಿದ್ದಾರೆ. ಆದರೆ, ದೇಶದಲ್ಲಿ ಪ್ರತಿಪಕ್ಷಗಳು ಶಕ್ತಿಯುತವಾಗಿಲ್ಲ. ಪ್ರತಿಪಕ್ಷಗಳ ಸಭೆಯಿಂದ ಯಾವುದೇ ರಾಜಕೀಯ ಲಾಭ ಆಗಲ್ಲ, ಮೋದಿ ಸೋಲಿಸಲು ಒಟ್ಟಾಗಿದ್ದಾರೆ, ಅದು ಸಾಧ್ಯವಿಲ್ಲದ ಮಾತು ಎಂದಿದ್ದಾರೆ. ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಾದ ಗೃಹ ಲಕ್ಷ್ಮಿ ಯೋಜನೆಗೆ ಸ್ಪಷ್ಟತೆಯಿಲ್ಲ, ಸಂಪೂರ್ಣವಾಗಿ ಅದನ್ನು ಅನುಷ್ಠಾನ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ. ಇದು ತಾಯಂದಿರಿಗೆ, ರಾಜ್ಯದ ಎಲ್ಲಾ ಹೆಣ್ಣುಮಕ್ಕಳಿಗೆ ಆಗಸ್ಟ್ 16ರಂದು ಭ್ರಮನಿರಸನವಾಗುತ್ತದೆ ಎಂದು ಟೀಕಿಸಿದರು.



ಇಂದಿನಿಂದ ಬೆಂಗಳೂರಲ್ಲಿ ಕೇಂದ್ರ ವಿಪಕ್ಷಗಳ ಸಭೆ

ಬೆಂಗಳೂರು,ಜು.16–ಬೆಂಗಳೂರಿನಲ್ಲಿ ನಾಳೆಯಿಂದ (ಸೋಮವಾರ) ಎರಡು ದಿನ ನಡೆಯಲಿರುವ ವಿಪಕ್ಷಗಳ ಸಭೆ ಹಿನ್ನೆಲೆಯಲ್ಲಿ ಭರ್ಜರಿ ತಯಾರಿ ನಡೆಯುತ್ತಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ ಅಧಿಕಾರದಿಂದ ದೂರವಿಡುವ ಮಹತ್ವಕಾಂಕ್ಷೆಯೊಂದಿಗೆ ನಡೆಯಲಿರುವ ಈ ಸಭೆಯಲ್ಲಿ 24 ರಾಜಕೀಯ ಪಕ್ಷಗಳ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ. ಬಿಜೆಪಿಯ ವಿರುದ್ಧ ಒಗ್ಗಟ್ಟನ್ನು ಪ್ರದರ್ಶಿಸುವ ವಿಪಕ್ಷಗಳ ಸಭೆಗೆ ಎಂಟು ಹೊಸ ಪಕ್ಷಗಳು ತಮ್ಮ ಬೆಂಬಲವನ್ನು ನೀಡಿವೆ ಎಂದು ಮೂಲಗಳು ತಿಳಿಸಿವೆ.

ಯುಪಿಎ ಅಧ್ಯಕ್ಷೆ ಸೋನಿಯಾಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತಿತರ ನಾಯಕರ ಪೋಸ್ಟರ್‌ಗಳು ರಾಜಧಾನಿಯಲ್ಲಿ ರಾರಾಜಿಸುತ್ತಿವೆ.

ದೆಹಲಿಯಲ್ಲಿ ಸೇವೆಗಳ ನಿಯಂತ್ರಣಕ್ಕೆ ಕೇಂದ್ರದ ಸುಗ್ರೀವಾಜ್ಞೆಯನ್ನು ಬೆಂಬಲಿಸುವುದಿಲ್ಲ ಎಂದು ಕಾಂಗ್ರೆಸ್ ಸ್ಪಷ್ಟಪಡಿಸಿದ ನಂತರ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಕೂಡಾ ಈ ಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದ್ದು, ಅವರ ಪೋಸ್ಟರ್ ಕೂಡಾ ಕಂಡುಬಂದಿದೆ.

ಈ ಮಧ್ಯೆ ವಿಪಕ್ಷಗಳ ಸಭೆ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಬಂದಿಳಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಈ ಸಭೆಯು ಪಾಟ್ನಾ ಸಭೆಯ ಮುಂದುವರಿಕೆಯಾಗಿದೆ. ನಾವು ಒಟ್ಟಾಗಿ 2024ರ ಲೋಕಸಭಾ ಚುನಾವಣೆ ಎದುರಿಸುತ್ತೇವೆ ಎಂದರು. ಜೂ.23ರಂದು ಪಾಟ್ನಾದಲ್ಲಿ ಜೆಡಿಯು ನೇತಾರ ನಿತೀಶ್‌ಕುಮಾರ್ ಆಯೋಜಿಸಿದ್ದ ವಿಪಕ್ಷಗಳ ಮೊದಲ ಸಭೆಯಲ್ಲಿ ಸುಮಾರು 20 ವಿವಿಧ ವಿಪಕ್ಷಗಳ ನಾಯಕರು ಪಾಲ್ಗೊಂಡಿದ್ದರು. ಮುಂದಿನ ಕಾರ್ಯತಂತ್ರ ರೂಪಿಸಲು ಶಿಮ್ಲಾದಲ್ಲಿ ಸಭೆ ಸೇರಲು ತೀರ್ಮಾನಿಸಲಾಗಿತ್ತು. ಆದರೆ, ಕೊನೆಗೆ ಶಿಮ್ಲಾದಲ್ಲಿ ಸಭೆ ರದ್ದುಗೊಂಡು, ಬೆಂಗಳೂರಿನಲ್ಲಿ ಆಯೋಜಿಸಲು ತೀರ್ಮಾನಿಸಲಾಯಿತು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ನಾನು ತಪ್ಪಿಸಿಕೊಂಡ್ರೆ ನೀವೇನ್ ಮಾಡ್ತೀರಾ?
ಗಂಡ : ನ್ಯೂಸ್ ಪೇಪರ್‌ಗೆ ಜಾಹೀರಾತು ಕೊಡ್ತಿನಿ.
ಹೆಂಡತಿ : ಸೋ ಸ್ವೀಟ್; ಏನಂತ ಕೊಡ್ತೀರಾ?
ಗಂಡ : ಎಲ್ಲೇ ಇರು, ಹೇಗೆ ಇರು, ಪ್ಲೀಸ್ ಅಲ್ಲೆ ಇರು...!

ಮೈಸೂರು ಮಿತ್ರ
ಸೋಮವಾರ, 17 ಜುಲೈ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಶತ್ರುಗಳಿಗಿಂತ ಅಸೂಯೆ ತುಂಬಿದ ಸ್ನೇಹಿತರೇ ಅಪಾಯಕಾರಿ, ಅಂತಹವರಿಂದ ದೂರವಾಗಿ ಇರುವುದೇ ಒಳ್ಳೆಯದು.

ವೇದ ಸುಳ್ಳಾದರೂ { ಅಡ್ಡಾಳಿಗಿಂತ
ಗಾದೆ ಸುಳ್ಳಾಗದು { ದೊಡ್ಡಾಳು ಲೇಸು

ನಿಮ್ಮ ಪತ್ರಗಳು

ಚಂದ್ರಯಾನ-3, ಭಾರತೀಯರ ಹೆಮ್ಮೆ

ಮಾನ್ಯರೆ,

ಶುಕ್ರವಾರ ಆಂಧ್ರಪ್ರದೇಶದ ಶ್ರೀಹರಿ ಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಚಂದ್ರಯಾನ-3, ಯಶಸ್ವಿ ಉಡಾವಣೆ ಭಾರತದ ಬಾಹ್ಯಾಕಾಶ ಮತ್ತು ತಂತ್ರಜ್ಞಾನದ ಮುಕುಟಕ್ಕೆ ಮತ್ತೊಂದು ಗರಿ, ಈಗಾಗಲೇ ಭಾರತ ಎರಡು ಬಾಹ್ಯಾಕಾಶಗಳನ್ನು ಚಂದ್ರಯಾನಕ್ಕೆ ಯಶಸ್ವಿಯಾಗಿ ಉಡಾವಣೆ ಮಾಡಿ, ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಜಗತ್ತಿನ ಮುಂಚೂಣಿ ರಾಷ್ಟ್ರ ಎನಿಸಿಕೊಂಂಡಿದೆ.

ಇದು ಭಾರತೀಯರೆಲ್ಲರೂ ಹೆಮ್ಮೆ ಪಡುವ ವಿಷಯ. ಕಳೆದ ನಾಲ್ಕು ವರ್ಷಗಳ ಕಾಲ ಇಸ್ರೋದ ಅಧ್ಯಕ್ಷರಾದ ಸೋಮನಾಥ್ ಮತ್ತು ಇತರ ವಿಜ್ಞಾನಿಗಳ ಅವಿರತ ಪ್ರಯತ್ನವಾಗಿ ಚಂದ್ರಯಾನ-3, ಯಶಸ್ವಿಯಾಗಿ ಉಡಾವಣೆಯಾಗಿದ್ದು, ಇದಕ್ಕೆ ಶ್ರಮಿಸಿದ ಎಲ್ಲ ವಿಜ್ಞಾನಿಗಳು ಅಭಿನಂದನಾರ್ಹರು, ಇತರ ರಾಷ್ಟ್ರಗಳ ವಿಜ್ಞಾನಿಗಳು ಸಹ ಇದೊಂದು ಬಾಹ್ಯಾಕಾಶ ತಂತ್ರಜ್ಞಾನದ ಮೈಲಿಗಲ್ಲು ಎಂದು ಭಾರತದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಈಗಾಗಲೇ ಯಶಸ್ವಿಯಾಗಿ ಚಂದ್ರನ ಸುತ್ತಲೂ ಸುತ್ತುತ್ತಿರುವ ಚಂದ್ರಯಾನ-3, ಆಗಸ್ಟ್ 4ರಂದು ಯಶಸ್ವಿಯಾಗಿ ಚಂದ್ರನ ಕಕ್ಷೆಯನ್ನು ಸೇರಲಿ ಎಂಬುದು ಭಾರತೀಯರೆಲ್ಲರ ಆಶಯ ಮತ್ತು ಪ್ರಾರ್ಥನೆ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಪೋಲಾಗುತ್ತಿರುವ ಜೀವಜಲ ರಕ್ಷಿಸಿ



ಮಾನ್ಯರೆ,

ಮೈಸೂರು ನಗರದ ಸರಸ್ವತಿಪುರಂನ ಕ್ಯಾಪಿಟೋಲ್ ಪಬ್ಲಿಕ್ ಶಾಲೆಯ ಬಳಿ ನೀರಿನ ಪೈಪ್ ಒಡೆದು ನೀರು ಸೋರಿಕೆಯಾಗುತ್ತಿದೆ. ಪೈಪ್ ಒಡೆದು ಹಲವಾರು ದಿನಗಳಾಗಿದ್ದು, ನೀರಿನ ಸೋರಿಕೆ ದಿನೆ-ದಿನೇ ಹೆಚ್ಚುತ್ತಲೇ ಇದೆ. ಹೀಗಾಗಿ, ಸಂಬಂಧಪಟ್ಟವರು ಇನ್ನಾದರು ಎಚ್ಚೆತ್ತು ತ್ವರಿತವಾಗಿ ನೀರಿನ ಪೈಪ್ ದುರಸ್ಥಿಗೊಳಿಸಿ ಪೋಲಾಗುತ್ತಿರುವ ಜೀವಜಲವನ್ನು ಉಳಿಸಬೇಕಿದೆ.

-ಬಿ.ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.

ಗ್ರಾಮ ನ್ಯಾಯಾಲಯದ ಚಿಂತನೆ ಒಳ್ಳೆಯದು. ಆದರೆ....

ಮಾನ್ಯರೆ,

ರಾಜ್ಯದಲ್ಲಿ ಸುಮಾರು 1000 ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲಾಗುತ್ತದೆ ಎಂದು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಹೇಳಿರುವುದು ಸ್ವಾಗತಾರ್ಹವಾಗಿದೆ. ವ್ಯಾಜ್ಯಗಳನ್ನು ಗ್ರಾಮ ಮಟ್ಟದಲ್ಲೇ ಬಗೆಹರಿಸುವುದರಿಂದ ತಾಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳ ಮೇಲಿರುವ ಒತ್ತಡಗಳನ್ನು ಕಡಿಮೆ ಮಾಡಬಹುದು. ಆದರೆ ಪ್ರತಿಯೊಂದು ಗ್ರಾಮದಲ್ಲೂ ನ್ಯಾಯಾಲಯ ಸ್ಥಾಪಿಸುವುದು ಸುಲಭದ ಮಾತಲ್ಲ. ಅದಕ್ಕೆ ಬೇಕಾದ ಮೂಲಸೌಕರ್ಯಗಳನ್ನು, ನ್ಯಾಯಾಲಯದ ಸಿಬ್ಬಂದಿಗಳನ್ನು ನೇಮಿಸುವುದರ ಜೊತೆಗೆ ನ್ಯಾಯಾಧೀಶರನ್ನು ಹಾಗೂ ಇತರ ಲಿಪಿಕ ಸಿಬ್ಬಂದಿಗಳನ್ನು ನೇಮಿಸಬೇಕಾಗುತ್ತದೆ. ಇದಕ್ಕೆಲ್ಲಾ ಸಾಕಷ್ಟು ಪೂರ್ವ ಸಿದ್ಧತೆ ಇರಬೇಕಾಗುತ್ತದೆ. ವ್ಯವಹಾರಿಕ ದೃಷ್ಟಿಯಿಂದಲೂ ಸಹ, ಪ್ರತಿ ಗ್ರಾಮದಲ್ಲಿ ನ್ಯಾಯಾಲಯದ ಸ್ಥಾಪನೆ ಕಷ್ಟದ ಕೆಲಸ. ಅದರ ಬದಲಾಗಿ ಕೆಲವು ಗ್ರಾಮಗಳನ್ನು ಒಂದು ಗುಂಪಾಗಿ ವಿಂಗಡಿಸಿ, ಅವುಗಳಿಗೆ ಪ್ರತ್ಯೇಕ ನ್ಯಾಯಾಲಯ ಸ್ಥಾಪಿಸಬಹುದು. ಈಗಾಗಲೇ ತಾಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ನ್ಯಾಯಾಲಯಗಳಿರುವುದರಿಂದ ಪ್ರತಿಯೊಂದು ಗ್ರಾಮಕ್ಕೂ ನ್ಯಾಯಾಲಯದ ಅವಶ್ಯಕತೆ ಇದೆಯೇ ಎಂಬುದನ್ನು ಸಹಾ ಪರಿಶೀಲಿಸಬೇಕು. ಗ್ರಾಮ ಮಟ್ಟದಲ್ಲಿ ಇಂದು ನಾನಾ ರೀತಿಯ ವ್ಯಾಜ್ಯಗಳು ಕೋರ್ಟುಗಳ ಮೆಟ್ಟಿಲೇರುತ್ತಿವೆ. ಸಣ್ಣ ಪುಟ್ಟ ವ್ಯಾಜ್ಯಗಳನ್ನು ದೊಡ್ಡದು ಮಾಡಿಕೊಂಡು ನ್ಯಾಯಾಲಯದ ಮೊರೆ ಹೋಗುವ ಪ್ರವೃತ್ತಿ ಕೂಡ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ಗ್ರಾಮ ನ್ಯಾಯಾಲಯ ಒಂದು ಒಳ್ಳೆಯ ಚಿಂತನೆಯಾದರೂ ಸಹ, ರಾಜ್ಯ ಸರ್ಕಾರ ಇದರ ಸಾಧಕ ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅಂತಿಮ ತೀರ್ಮಾನ ಕೈಗೊಳ್ಳುವುದು ಒಳ್ಳೆಯದು.

-ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದನಗರ, ಮೈಸೂರು.

ಜೈನ ಮುನಿಗಳ ಹತ್ಯೆಯಲ್ಲಿ ಹುನ್ನಾರವಿದೆಯೇ?

ಮಾನ್ಯರೆ,

ಚಿಕ್ಕೋಡಿಯ ಜೈನಮುನಿಗಳಾದ ಕಾಮಕುಮಾರ ನಂದಿ ಮಹಾರಾಜರನ್ನು ಅತ್ಯಂತ ದಾರುಣವಾಗಿ ಕೊಲೆ ಮಾಡಿರುವುದನ್ನು ಕಂಡಾಗ, ನಮ್ಮ ಸಮಾಜ ಎತ್ತ ಸಾಗುತ್ತಿದೆ ಎನಿಸುತ್ತಿದೆ. ಇದಕ್ಕೆ ಕಾರಣವಾದದ್ದು ಹಣಕಾಸಿನ ವ್ಯವಹಾರ ಎಂದು ತಿಳಿದುಬಂದಿದೆ. ಜೈನಮುನಿಗಳು ಹೇಳಿ ಕೇಳಿ ಸರ್ವಸಂಗ ಪರಿತ್ಯಾಗಿಗಳು, ಲೌಕಿಕ ಜೀವನಕ್ಕೂ ಇವರಿಗೂ ಬಲು ದೂರ. ಶ್ರೀಗಳು ಸಹಾಯ ಮಾಡಲೆಂದೋ ಅಥವಾ ಮತ್ಯಾವುದೋ ಉದ್ದೇಶದಿಂದ ಮಾಡಿದ ಹಣಕಾಸಿನ ವ್ಯವಹಾರದಿಂದಾಗಿ ಅತ್ಯಂತ ದಾರುಣ ರೀತಿಯಲ್ಲಿ ಕೊಲೆಯಾದದ್ದು ವಿಷಾದನೀಯ ಹಾಗೂ ಖಂಡನಾರ್ಹ. ಸ್ವಾಮಿಗಳು ಮತ್ತು ಮಠಗಳು ಎಂದಾಕ್ಷಣ ಹಣಕಾಸಿನ ವ್ಯವಹಾರ ಮಾಡದೆ ಇರಲು ಸಾಧ್ಯವಿಲ್ಲ, ಆದರೆ ಅದಕ್ಕೆ ಅವರು ಸತ್ಪಾತ್ರರು ಮತ್ತು ಸಾತ್ವಿಕರನ್ನು ಬಹಳ ಜಾಗರೂಕರಾಗಿ ಆಯ್ಕೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಅಚಾತುರ್ಯ ನಿಶ್ಚಯ ಎನ್ನುವುದಕ್ಕೆ ಈ ಘಟನೆ ಸಾಕ್ಷಿ. ಆದರೆ ಕೊಲೆಗಡುಕರು ಸ್ವಾಮೀಜಿಯವರನ್ನು ಅತ್ಯಂತ ಭೀಕರವಾಗಿ, ಅಮಾನುಷವಾಗಿ ಕೊಲೆ ಮಾಡಿರುವುದನ್ನು ಕಂಡಾಗ, ಇದರ ಹಿಂದೆ ದೊಡ್ಡ ಹುನ್ನಾರವಿದೆ ಎನಿಸುತ್ತಿದೆ, ಪೋಲೀಸರು ಇದರ ಬಗ್ಗೆ ಕೂಲಂಕಷ ತನಿಖೆ ಮಾಡಿ, ಈ ಕೊಲೆಯಲ್ಲಿ ಭಾಗಿಯಾದವರೆಲ್ಲರಿಗೂ ಕಠಿಣ ಶಿಕ್ಷೆಗೆ ಒಳಪಡಿಸುವಂತಾಗಲಿ.

-ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಅವರು ಇರುವಂತೆ ಇರಲಿ ಬಿಡು; ನೀನು ಇರುವಂತೆ ಇದ್ದುಬಿಡು!



ಕಾಲ ಬದಲಾದ ಹಾಗೆ ಪ್ರಪಂಚದಲ್ಲಿ ಆಚಾರ, ವಿಚಾರ, ಆಹಾರ, ಉಡುಗೆ-ತೊಡುಗೆ ಎಲ್ಲವೂ ಬದಲಾಗುತ್ತಿರುತ್ತದೆ. ಈ ಬದಲಾವಣೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿ ಇರಬೇಕು. ಅನೇಕ ಹಿರಿಯರಿಗೆ ಓಬಿರಾಯನ ಕಾಲಕ್ಕೆ ಅಂಟಿಕೊಳ್ಳುವ ಮನೋಭಾವವಿರುತ್ತದೆ. ಬದಲಾವಣೆಯನ್ನು ಬಯಸುವುದಿಲ್ಲ. ಅದನ್ನು ಬೇರೆಯವರ ಮೇಲೆ ಪ್ರಹಾರ ಮಾಡುವ ಹಾಗೆ ಪ್ರಯೋಗಿಸುತ್ತಲೇ ಇರುತ್ತಾರೆ. ತನ್ನ ಪರಿವಾರದವರು ತಪ್ಪು ಹೆಜ್ಜೆ ಇಡುತ್ತಿದ್ದರೆ, ಅನ್ಯಾಯ-ಅಕ್ರಮಗಳಲ್ಲಿ ಭಾಗಿಯಾಗುತ್ತಿದ್ದರೆ ಒಳ್ಳೆಯ ಮಾತುಗಳಿಂದ ಎಚ್ಚರಿಸಲಿ, ಆದರೆ ಪ್ರತಿಯೊಂದು ವಿಚಾರಕ್ಕೂ ತಲೆ ಹಾಕಿ ತಾನು ಹಾಕಿದ ಗೆರೆ ದಾಟಬಾರದು ಎಂದು ಬಯಸುವುದು ಮೂರ್ಖತನವಾಗುತ್ತದೆ. ಮನೆಯಲ್ಲಿ ಪ್ರತಿಯೊಬ್ಬರಿಗೂ ಅವರದೇ ಆದ ವ್ಯಕ್ತಿತ್ವ ಇರುತ್ತದೆ. ಅದರಿಂದ ಭಿನ್ನ ಉಡುಗೆ-ತೊಡುಗೆ, ನಡೆ-ನುಡಿ, ಭಿನ್ನ ಆಹಾರ ಪದ್ಧತಿ ರೂಢಿಸಿಕೊಂಡಿರುತ್ತಾರೆ. ಅದನ್ನು ತಪ್ಪು ಎನ್ನಲಾಗದು. ಎಲ್ಲರೂ ಒಂದೇ ರೀತಿಯಲ್ಲಿ ಇರಬೇಕು ಎಂದು ವಾದಿಸುವುದು ವಿವಾದಕ್ಕೆ ಎಡೆಮಾಡಿಕೊಡುತ್ತದೆ. ವಿವಿಧತೆಯಲ್ಲಿ ಏಕತೆ ಕಾಣುವುದು ಒಳ್ಳೆಯ ಲಕ್ಷಣವಾಗುತ್ತದೆ. ಏಕತೆಯಲ್ಲಿ ಏಕತೆ ಕಾಣುವುದರಲ್ಲಿ ಅರ್ಥವಿಲ್ಲ.

'ಲೋಕೋ ಬಿನ್ನ ರುಚಿಃ' ಎಂಬ ಸಂಸ್ಕೃತದ ಮಾತು ಬಹಳ ಅರ್ಥಪೂರ್ಣವಾಗಿದೆ. ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕ ಬೆರಳಿನ ಅಚ್ಚು ಇರುವ ಹಾಗೆ ಪ್ರತಿಯೊಬ್ಬರಿಗೂ ಅವರದೇ ಆದ ರುಚಿ-ಅಭಿರುಚಿ ಇರುತ್ತದೆ. ಎಲ್ಲರ ರುಚಿ ಒಂದೇ ರೀತಿ ಇದ್ದಿದ್ದರೆ ಇಂದು ಈ ಪ್ರಪಂಚ ಇಷ್ಟೊಂದು ಬಣ್ಣಬಣ್ಣವಾಗಿ ಇರುತ್ತಿರಲಿಲ್ಲವೇನೋ? ಒಂದೇ ಶಾಲೆಯಲ್ಲಿ ಒಂದೇ ಪಠ್ಯವನ್ನು ಒಬ್ಬರೇ ಶಿಕ್ಷಕರು ಬೋಧಿಸಿದರೂ ವಿದ್ಯಾರ್ಥಿಗಳ ಉತ್ತರ ಹಾಗೂ ಪ್ರತಿಕ್ರಿಯೆ ಭಿನ್ನಭಿನ್ನವಾಗಿರುತ್ತದೆ. ಅಂತಹುದರಲ್ಲಿ ಭಿನ್ನ ಭಿನ್ನ ಪ್ರದೇಶ, ಆಚಾರ, ಸಂಸ್ಕೃತಿ, ಸಂಪ್ರದಾಯದಿಂದ ಬರುವ ಜನರ ವಿಚಾರವೂ ಸಹ ಭಿನ್ನವಾಗಿರುತ್ತದೆ. ಎಲ್ಲರೂ ಒಂದೇ ರೀತಿ ಚಿಂತಿಸಿದಲ್ಲಿ ಬದುಕು ಅಷ್ಟೊಂದು ವರ್ಣಮಯವಾಗಿರಲು ಸಾಧ್ಯವಿಲ್ಲ. ಆದರೆ ತುಂಬಾ ಜನರಿಗೆ ಒಂದು ಸಮಸ್ಯೆ ಇದೆ, ಅದೇನೆಂದರೆ ಅನ್ಯರೂ ತನ್ನಂತೆ ಭಾವಿಸಬೇಕು, ಚಿಂತಿಸಬೇಕು, ನಡೆ-ನುಡಿ ತನ್ನಂತೆ ಇರಬೇಕು ಎಂದು. ಇದು ಸಾಧ್ಯವೇ? ಒಂದೇ ತಾಯಿತಂದೆಗೆ ಜನಿಸಿದ ಮಕ್ಕಳ ಅಭಿರುಚಿಗಳೇ ಭಿನ್ನಭಿನ್ನವಾಗಿರುತ್ತದೆ. ಎಷ್ಟೋ ಸಹೋದರ ಸಹೋದರಿಯದು ವೈರುಧ್ಯದ ಅಭಿರುಚಿಗಳು ಇರುತ್ತವೆ. ಅಂತಹುದರಲ್ಲಿ ನಮಗೆ ಗೊತ್ತಿರದ ಜನರ ಮನೋಭಾವ ಒಂದೇ ತೆರನಾಗಿ ಇರಬೇಕು ಎಂದು ನಿರೀಕ್ಷಿಸುವುದು ತಪ್ಪಲ್ಲವೇ? ಇಡೀ ಜಗತ್ತಿಗೆ ಒಂದೇ ರೀತಿಯ ಚಪ್ಪರ ಹಾಕಲು ಸಾಧ್ಯವೇ?

ಅನ್ಯರು ಇರುವ ಹಾಗೆ ಅವರನ್ನು ಸ್ವೀಕರಿಸಿ ಆದರಿಸುವುದು ಜಾಣತನ ಹಾಗೂ ಒಳ್ಳೆಯ ಗುಣ. ತನ್ನ ಮನಸ್ಥಿತಿ, ಪರಿಸ್ಥಿತಿಯೇ ಬೆಳಗ್ಗೆ ಇರುವ ರೀತಿಯಲ್ಲಿ ಸಂಜೆಗೆ ಇರುವುದಿಲ್ಲ. ಅಂತಹುದರಲ್ಲಿ ಅನ್ಯರನ್ನು ತನ್ನ ಎಣಿಕೆಯಂತೆ ಇರು ಎಂದು ಬಯಸುವುದು ಎಷ್ಟು ಸರಿ? ತನ್ನನ್ನು ತಾನು 'ನಾನು ಇರುವುದೇ ಹೀಗೆ, ನೀವು ಅಡ್ಜೆಸ್ಟ್ ಮಾಡಿಕೊಳ್ಳಿ ಎಂದು ಹೇಳುವ ರೀತಿಯಲ್ಲಿಯೇ ಅವರು ಇರುವುದು ಹಾಗೆ ಎಂದು ಅಡ್ಜೆಸ್ಟ್ ಮಾಡಿಕೊಂಡು ಹೋಗಬೇಕು. ಇಲ್ಲವಾದಲ್ಲಿ ನೆಮ್ಮದಿಗೆ ಬರವಾಗಿ ಅಶಾಂತಿ ಅಬ್ಬರಿಸುತ್ತದೆ. ಕೆಲವರಿಗೆ ಪರರನ್ನು ಟೀಕಿಸುವುದು ಒಂದು ಚಾಳಿಯಾಗಿರುತ್ತದೆ. ಅವರ ಸ್ವಂತ ಮಕ್ಕಳೇ ಅವರ ಮಾತನ್ನು ಅನುಸರಿಸುವ ಗೋಜಿಗೆ ಹೋಗುವುದಿಲ್ಲ, ಅಂತಹುದರಲ್ಲಿ ಬೇರೆಯವರನ್ನು ತಮ್ಮ ಮಾತಿನಿಂದ ನಿಯಂತ್ರಿಸಿ, ತಮ್ಮ ಆದೇಶವನ್ನು ಪಾಲಿಸಿ ಅನುಸರಿಸಬೇಕು ಎಂದು ಅಪೇಕ್ಷಿಸುತ್ತಾರೆ. ಇದರಿಂದ ಘರ್ಷಣೆಗೆ ಅವಕಾಶವಾಗುತ್ತದೆಯೋ ಹೊರತು ಅವರ ಅನಿಸಿಕೆಯಂತೆ ಆಗುವುದಿಲ್ಲ. ಅನ್ಯರನ್ನು ತಮ್ಮ ಇಚ್ಛೆಗೆ ಬಯಸುವುದೇ ಮೊದಲ ತಪ್ಪು. ಎಷ್ಟೋ ಸಂಸಾರಗಳಲ್ಲಿ ಪತಿರಾಯನ ಬಲವಂತದ ಹೇರಿಕೆಗೆ ಪತ್ನಿಮಕ್ಕಳು ರೋಸಿ ಹೋಗಿರುತ್ತಾರೆ. ಮನೆಯ ಯಜಮಾನ ಎಂಬ ಗೌರವಕ್ಕೆ ಗೋಣಗಿಕೊಂಡು ಅವರ ಮಾತುಗಳನ್ನು ಅನುಸರಿಸುತ್ತಾರೆ ಅಷ್ಟೆ.

ಕಾಲ ಬದಲಾದ ಹಾಗೆ ಪ್ರಪಂಚದಲ್ಲಿ ಆಚಾರ, ವಿಚಾರ, ಆಹಾರ, ಉಡುಗೆ-ತೊಡುಗೆ ಎಲ್ಲವೂ ಬದಲಾಗುತ್ತಿರುತ್ತದೆ. ಈ ಬದಲಾವಣೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿ ಇರಬೇಕು. ಅನೇಕ ಹಿರಿಯರಿಗೆ ಓಬಿರಾಯನ ಕಾಲಕ್ಕೆ ಅಂಟಿಕೊಳ್ಳುವ ಮನೋಭಾವವಿರುತ್ತದೆ. ಬದಲಾವಣೆಯನ್ನು ಬಯಸುವುದಿಲ್ಲ. ಅದನ್ನು ಬೇರೆಯವರ ಮೇಲೆ ಪ್ರಹಾರ ಮಾಡುವ ಹಾಗೆ ಪ್ರಯೋಗಿಸುತ್ತಲೇ ಇರುತ್ತಾರೆ. ತನ್ನ ಪರಿವಾರದವರು ತಪ್ಪು ಹೆಜ್ಜೆ ಇಡುತ್ತಿದ್ದರೆ, ಅನ್ಯಾಯ-ಅಕ್ರಮಗಳಲ್ಲಿ ಭಾಗಿಯಾಗುತ್ತಿದ್ದರೆ ಒಳ್ಳೆಯ ಮಾತುಗಳಿಂದ ಎಚ್ಚರಿಸಲಿ, ಆದರೆ ಪ್ರತಿಯೊಂದು ವಿಚಾರಕ್ಕೂ ತಲೆ ಹಾಕಿ ತಾನು ಹಾಕಿದ ಗೆರೆ ದಾಟಬಾರದು ಎಂದು ಬಯಸುವುದು ಮೂರ್ಖತನವಾಗುತ್ತದೆ. ಮನೆಯಲ್ಲಿ ಪ್ರತಿಯೊಬ್ಬರಿಗೂ ಅವರದೇ ಆದ ವ್ಯಕ್ತಿತ್ವ ಇರುತ್ತದೆ. ಅದರಿಂದ ಭಿನ್ನ ಉಡುಗೆ-ತೊಡುಗೆ, ನಡೆ-ನುಡಿ, ಭಿನ್ನ ಆಹಾರ ಪದ್ಧತಿ ರೂಢಿಸಿಕೊಂಡಿರುತ್ತಾರೆ. ಅದನ್ನು ತಪ್ಪು ಎನ್ನಲಾಗದು. ಎಲ್ಲರೂ ಒಂದೇ ರೀತಿಯಲ್ಲಿ ಇರಬೇಕು ಎಂದು ವಾದಿಸುವುದು ವಿವಾದಕ್ಕೆ ಎಡೆಮಾಡಿಕೊಡುತ್ತದೆ. ವಿವಿಧತೆಯಲ್ಲಿ ಏಕತೆ ಕಾಣುವುದು ಒಳ್ಳೆಯ ಲಕ್ಷಣವಾಗುತ್ತದೆ. ಏಕತೆಯಲ್ಲಿ ಏಕತೆ ಕಾಣುವುದರಲ್ಲಿ ಅರ್ಥವಿಲ್ಲ.

ಅನೇಕರಿಗೆ ಅಹಮಿಕೆ, ಪ್ರತಿಷ್ಠೆ ಬಹು ಮುಖ್ಯವಾಗುತ್ತದೆ. ಎಲ್ಲರೂ ತನ್ನ ಮಾತನ್ನು ಪಾಲಿಸಲೇಬೇಕು ಎಂಬುದು ಅಹಂಕಾರದ ಪರಮಾವಧಿ. ಕಚೇರಿಗಳಲ್ಲಿ ಅಧಿಕಾರಿಯು ಹೇರುವ ಷರತ್ತುಗಳಿಗೂ ಒಂದು ಇತಿಮಿತಿ ಇರುತ್ತದೆ. ಕಾನೂನು ಮೀರಿ ವಿಧಿಸುವ ಷರತ್ತುಗಳನ್ನು ಯಾರೂ ಪಾಲಿಸುವುದಿಲ್ಲ. ವೈಯಕ್ತಿಕ ಅಭಿರುಚಿಗಳನ್ನು, ಅನಿಸಿಕೆಗಳನ್ನು ವಿನಾ ಕಾರಣ ಕೆಳಗಿನ ಹಂತದ ನೌಕರರ ಮೇಲೆ ಹೇರುವುದು ಕಾನೂನುಬಾಹಿರವಾಗುತ್ತದೆ. ಅನೇಕ ಬಾರಿ ತಾನೆ ತನ್ನ ಮನಸ್ಸಿನ ಮಾತುಗಳನ್ನು ಆಲಿಸಿ ಅನುಸರಿಸಲಾಗದೆ, ಭಿನ್ನವಾಗಿ ನಡೆದುಕೊಳ್ಳುತ್ತಿರುವಾಗ, ಬೇರೆಯವರು ತನ್ನ ಮನಸ್ಸಿನ ಇಚ್ಛೆಯಂತೆ ನಡೆಯಲಿ ಎಂದು ಬಯಸುವುದು ದಡ್ಡತನವೇ ಸರಿ. ಪ್ರಪಂಚದಲ್ಲಿನ ಭಿನ್ನತೆಯನ್ನು ಒಪ್ಪಿಕೊಂಡಲ್ಲಿ ಅದರಲ್ಲಿ ಒಂದು ರೀತಿಯ ವಿಶೇಷ ಆನಂದ ಹಾಗೂ ಅನುಭೂತಿಯನ್ನು ಕಾಣಬಹುದು. ಎಷ್ಟೋ ಜನರಿಗೆ ಈ ಸಣ್ಣ ತಿಳುವಳಿಕೆಯೂ ಇರುವುದಿಲ್ಲ. ತನ್ನ ಮೂಗಿನ ನೇರಕ್ಕೆ ಎಲ್ಲವೂ, ಎಲ್ಲರೂ ನಡೆಯಬೇಕು ಎಂಬ ಹಠಕ್ಕೆ ಬಿದ್ದು ಮಂತ್ರಾಲಯವಾಗಬೇಕಿದ್ದ ಮನೆಯನ್ನು ಸ್ಮಶಾನ ಮಾಡಿ ತಮ್ಮ ಹಠವೇ ಗೆದ್ದಿತು ಎಂಬ ವಿಕೃತಾನಂದ ಅನುಭವಿಸುತ್ತಾರೆ.

ಕೆಲವೊಮ್ಮೆ ನಮ್ಮ ಅವಶ್ಯಕತೆಗಳು ನಮ್ಮ ಇಷ್ಟ-ಕಷ್ಟಗಳನ್ನು ನಿರ್ಧರಿಸುತ್ತವೆ. ಒಬ್ಬರ ಕೈಕೆಳಗೆ ಬದುಕುವ ಪರಿಸ್ಥಿತಿ ಇದ್ದಾಗ ಅವರು ನೀಡುವ ಕಷ್ಟಗಳನ್ನು ಇಷ್ಟಪಟ್ಟು ಪಾಲಿಸಬೇಕಾಗುತ್ತದೆ. ಅನಿವಾರ್ಯ ಸಂದರ್ಭಗಳಲ್ಲಿ, ಆರ್ಥಿಕ ಸ್ವಾತಂತ್ರ್ಯ ಇಲ್ಲದ ಸಂದರ್ಭದಲ್ಲಿ ನಮ್ಮ ಮೇಲಿನವರ ದಬ್ಬಾಳಿಕೆಯನ್ನು ಇಷ್ಟದ ರೂಪದಲ್ಲಿ ಸ್ವೀಕರಿಸಬೇಕಾಗುತ್ತದೆ. ನಮಗೆ ಸ್ವಾತಂತ್ರ್ಯ ದೊರಕಿದಾಗ ಅವರ ಮಾತುಗಳು ನಮಗೆ ಕಷ್ಟವಾಗುತ್ತವೆ. ಆಗ ಅವರ ಆದೇಶಗಳನ್ನು ಉಲ್ಲಂಘಿಸಿ ನಮ್ಮ ಇಚ್ಛೆಯಂತೆ ಹೊರನಡೆಯಬೇಕಾಗುತ್ತದೆ. ಆದ್ದರಿಂದ ಪರಿಸ್ಥಿತಿಯು ನಮ್ಮ ಇಷ್ಟಕಷ್ಟಗಳ ನಿರ್ಧಾರದ ಅಂಶವಾಗುತ್ತದೆ

40-50 ವರ್ಷಗಳ ದಾಂಪತ್ಯ ನಡೆಸಿ ಒಮ್ಮೆಯೂ ಜಗಳವನ್ನೇ ಆಡಿಲ್ಲ ಎಂದು ಕೆಲವರು ಹೆಮ್ಮೆಯಿಂದ ಹೇಳಿಕೊಳ್ಳುವುದು ಉಂಟು. ಒಂದು ಅವರಲ್ಲಿ ಒಬ್ಬರು ಇನ್ನೊಬ್ಬರ ದಬ್ಬಾಳಿಕೆಯನ್ನು ಸಹಿಸಿಕೊಂಡಿರುತ್ತಾರೆ, ಮತ್ತೊಂದು ಇಬ್ಬರಲ್ಲಿ ಒಬ್ಬರು ಪೆದ್ದರಿರುತ್ತಾರೆ ಎನ್ನಬಹುದು. ಸಂಸಾರ ಎಂದ ಮೇಲೆ ಸರಸ-ವಿರಸ ನಾಣ್ಯದ ಎರಡು ಮುಖಗಳಿದ್ದಂತೆ. ಎಲ್ಲಾ ದಿನಗಳು ಒಂದೇ ದಿನದ ರೀತಿ ಇರುವುದಿಲ್ಲ. ಸಾಂಸಾರಿಕ ಜೀವನದಲ್ಲಿ ಅನೇಕ ಏರುಪೇರುಗಳು ಉಂಟಾಗುತ್ತವೆ. ಆಗ ಮಾತು ಎಂಬುದು ಮಾತುಕತೆಯಾಗುವ ಹಂತಕ್ಕೆ ತಲುಪುತ್ತದೆ. ಸಮಾಲೋಚನೆ ನಡೆಸಿ ಒಬ್ಬರು ಸೋತು, ಅಥವಾ ಹೊಂದಾಣಿಕೆ ಮಾಡಿಕೊಂಡು ಹೋಗುವುದು ಸಂಸಾರದ ಲಕ್ಷಣವಾಗುತ್ತದೆ. ಅದನ್ನು ಬಿಟ್ಟು ನಾವು ಜಗಳವನ್ನೇ ಆಡಿಲ್ಲ ಎನ್ನುವುದು ಸತ್ಯಕ್ಕೆ ದೂರವಾದ ಮಾತಾಗುತ್ತದೆ. ಭಿನ್ನತೆಯನ್ನು ಒಪ್ಪಿಕೊಂಡು ದಾಂಪತ್ಯ ನಡೆಸುವುದು ಅದರ ಲಕ್ಷಣ. ಭಿನ್ನತೆಯು ಭಿನ್ನಮತ ಆಗುವ ಹಂತಕ್ಕೆ ಬಿಡಬಾರದು. ಆಗಲೇ ದಾಂಪತ್ಯದಲ್ಲಿ ಬಿರುಕು ಉಂಟಾಗಿ ಸಂಸಾರಗಳು ಹೋಳಾಗಿ ಎಲ್ಲರೂ ಪರಿತಪಿಸುವಂತಾಗುತ್ತದೆ.

ಹೊಂದಾಣಿಕೆ ಎಂಬುದು ಬಹು ಅಮೂಲ್ಯವಾದ ಸಂಗತಿ. ಇಂದು ಒಂದೇ ಕುಟುಂಬದಲ್ಲಿ ಹತ್ತಾರು ಬಗೆಯ ಭಿನ್ನ ಭಿನ್ನ ಜನರು ಇರುತ್ತಾರೆ. ಒಬ್ಬರಿಗೊಬ್ಬರು ಅನ್ಯರ ಭಿನ್ನತೆಯನ್ನು ಸ್ವೀಕರಿಸಿ ಒಂದೇ ಕುಟುಂಬದಲ್ಲಿ ಇರುವುದು ದೊಡ್ಡ ಸವಾಲಿನ ಸಂಗತಿ. ಇತ್ತೀಚೆಗೆ ವಿಚ್ಛೇದನ ಪ್ರಕರಣಗಳು ಹೆಚ್ಚಾಗಲು ಸಂಗಾತಿಯ ಭಿನ್ನತೆಯನ್ನೂ ಗೌರವಿಸಿ ಒಪ್ಪಿಕೊಂಡು ನಡೆಯದೇ ಇರುವುದು ಎನ್ನಬಹುದು. ಸಂಗಾತಿಯು ಭಿನ್ನ ಪರಿಸರ, ವಿದ್ಯಾರ್ಹತೆ, ಸಂಸ್ಕೃತಿಯಿಂದ ಬಂದಿರುತ್ತಾರೆ ಎಂದು ತಿಳಿದುಕೊಳ್ಳುವ ಇರಾದೆ ಇರುವುದಿಲ್ಲ. ಸೊಸೆ ಮನೆಗೆ ಬಂದ ಒಂದೇ ತಿಂಗಳಿನಲ್ಲಿ ನಮ್ಮ ಮನೆಗೆ ಅನುಗುಣವಾಗಿ ಬದುಕಬೇಕು ಎಂದು ಬಯಸುವುದು ದೊಡ್ಡ ಮೂರ್ಖತನ. ಆಕೆಗೆ ಹೊಂದಿಕೊಳ್ಳಲು ಸಮಯ ನೀಡಬೇಕು. ಹಠ ಮಾಡಿ ಆದೇಶ ಪಾಲಿಸು ಎಂದರೆ ತಿರುಗಿ ಬೀಳುವವರೇ ಹೆಚ್ಚು. ಪ್ರೀತಿಯಿಂದ ಮಾತುಕತೆ ನಡೆಸಿ ಹೊಂದಾಣಿಕೆಯಿಂದ ನಡೆದುಕೊಳ್ಳುವುದು ಒಳ್ಳೆಯ ಬೆಳವಣಿಗೆ. ಪ್ರತಿಷ್ಠೆ ಮೆರೆಯಲು ಹೊರಟರೆ ಅವರು ಇನ್ನೂ ಪ್ರತಿಷ್ಠೆ ಪ್ರದರ್ಶಿಸುವ ಸಂಭವ ಇರುತ್ತದೆ. ಹೊಂದಾಣಿಕೆಯ ಮೊದಲ ಸೂತ್ರವೇ ಅನ್ಯರ ಮನೋಭಾವವನ್ನು ಗೌರವಿಸಿ ಸ್ವೀಕರಿಸುವುದು.

ಪರಿಪೂರ್ಣ ವ್ಯಕ್ತಿಯನ್ನು ಎಲ್ಲರೂ ನಿರೀಕ್ಷಿಸುವುದು ಸಹಜ. ಹಾಗೆ ನೋಡುವುದಾದರೆ ಯಾರೂ ಪರಿಪೂರ್ಣರಲ್ಲ. ಎಲ್ಲಾ ವಿಷಯದಲ್ಲೂ ಎಲ್ಲರೂ ಪರಿಪೂರ್ಣತೆ ಸಾಧಿಸಲು ಸಾಧ್ಯವೂ ಇಲ್ಲ. ಮೊದಲಿಗೆ ಪರಿಪೂರ್ಣತೆ ಬಯಸುವುದೇ ತಪ್ಪು. ಪರಿಪೂರ್ಣತೆ ಅಪೇಕ್ಷಿಸುವುದು ಎಂದರೆ ನೆಮ್ಮದಿ ಕಳೆದುಕೊಳ್ಳುವುದು ಎಂದು ಅರ್ಥ. ಯಾವ ವ್ಯಕ್ತಿ ಹೇಗೆ ಇರುತ್ತಾರೋ ಹಾಗೆ ಸ್ವೀಕರಿಸಿದರೆ ಎಲ್ಲವೂ ಸಹಜವಾಗಿರುತ್ತದೆ, ಅದರಿಂದ ಸಂತೋಷವೂ ಲಭಿಸುತ್ತದೆ. ಅದ ಬಿಟ್ಟು ಅವರು ಸರಿಯಿಲ್ಲ ಎಂದು ದೂರುತ್ತಾ ಹೋದರೆ ಅದು ನಮ್ಮಲ್ಲಿಗೆ ಬಂದು ನಿಲ್ಲುತ್ತದೆ. ನಾವು ಎಷ್ಟು ಸರಿ ಎಂಬ ಅವಲೋಕನ ಮಾಡಿಕೊಳ್ಳಬೇಕು. ಜಗತ್ತು ಬದಲಾಗಬೇಕು ಎಂದು ಬಯಸುವವನು ಮೊದಲು ತಾನು ಬದಲಾವಣೆಗೆ ಒಗ್ಗಿಕೊಳ್ಳಬೇಕು.

ಪದ ತಾಂಬೂಲ : ಅನ್ಯರ ಮನೋಭಾವ ಗೌರವಿಸಿದರೆ ನಿನ್ನ ಗೌರವ ಹೆಚ್ಚುತ್ತದೆ.

ದಸರಾ ಆನೆಗಳ ಆಯ್ಕೆಗೆ ಅರಣ್ಯ ಸಚಿವರ ಸೂಚನೆ



ಮೈಸೂರಿನ ಅರಣ್ಯ ಭವನದಲ್ಲಿ ಸಚಿವ ಈಶ್ವರ ಖಂಡ್ರೆ ಅವರನ್ನು ಅರಣ್ಯಾಧಿಕಾರಿಗಳು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು, ಜು.16(ಎಸ್‌ಪಿಎನ್)- ಮೈಸೂರು ದಸರಾ ಜಂಬೂ ಸವಾರಿಯಲ್ಲಿ ಆನೆಗಳೇ ಪ್ರಧಾನ ಆಕರ್ಷಣೆಯಾಗಿದ್ದು, ಈ ಬಾರಿಯ ದಸರಾ ಮಹೋತ್ಸವಕ್ಕೆ ಎಲ್ಲ ಮಾನದಂಡಗಳನ್ನು ಅನುಸರಿಸಿ 14 ಆನೆಗಳನ್ನು ಆಯ್ಕೆ ಮಾಡುವಂತೆ ರಾಜ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಅರಣ್ಯ ಭವನದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು, ಈ ಬಾರಿ ದಸರಾದಲ್ಲಿ ದಸರಾ ಜಂಬೂ ಸವಾರಿಯಲ್ಲಿ ಗಜಪಯಣ, ತಾಲೀಮಿನಲ್ಲಿ ಯಾವುದೇ ಲೋಪದೋಷಗಳಿಗೆ ಆಸ್ಪದ ನೀಡದಂತೆ ಕಟ್ಟೆಚ್ಚರ ವಹಿಸಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಇಂದಿನ ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ವೈಪರೀತ್ಯ ತಡೆಗೆ ವೃಕ್ಷ ಸಂಪತ್ತಿನ ಹೆಚ್ಚಳ ಅನಿವಾರ್ಯವಾಗಿದೆ. ಹಾಗೂ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಯಾವ ವಿಧಾನಸಭಾ ಕ್ಷೇತ್ರದಲ್ಲಿ ಸಸ್ಯೋದ್ಯಾನ(ಟ್ರೀ ಪಾರ್ಕ್) ಇಲ್ಲವೋ ಅಂತಹ ಕ್ಷೇತ್ರದಲ್ಲಿ ತಿಮ್ಮಕ್ಕ ಟ್ರೀ ಪಾರ್ಕ್‌ಗಳನ್ನು ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ರಾಜ್ಯ ಸರ್ಕಾರ ಪ್ರಸಕ್ತ ವರ್ಷ 5 ಕೋಟಿ ಸಸಿಗಳನ್ನು ನೆಟ್ಟು ಪೋಷಿಸಲು ತೀರ್ಮಾನಿಸಿದ್ದು, ಈ ವಲಯದಲ್ಲಿ ಹೆಚ್ಚಿನ ಸಸ್ಯಗಳನ್ನು ನೀಡುವಂತೆ ಸೂಚಿಸಿದರು.

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತಗೊಳಿಸುವ ನಿರ್ಧಾರವನ್ನು ಈಗಾಗಲೇ ಪ್ರಕಟಿಸಲಾಗಿದ್ದು, ಚಾಮುಂಡಿ ಬೆಟ್ಟ ಸೇರಿದಂತೆ ಪ್ರವಾಸಿ ತಾಣಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ಉತ್ಪಾದನೆ, ದಾಸ್ತಾನು, ಮಾರಾಟ ತಡೆಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಪ್ಲಾಸ್ಟಿಕ್ ನಿರ್ಬಂಧ ಹಾಗೂ ಜನಜಾಗೃತಿ ಮೂಡಿಸಲು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ನೆರವು ಪಡೆಯುವಂತೆ ತಿಳಿಸಿದರು.

ದಿನಗೂಲಿ ನೌಕರಿಗೆ ಅದರಲ್ಲೂ ಹೊರಗುತ್ತಿಗೆ ನೌಕರರಿಗೆ ವೇತನ ವಿಳಂಬವಾಗುತ್ತಿರುವ ಬಗ್ಗೆ ದೂರುಗಳು ಬಂದಿದ್ದು ಅಂತಹ ಹೊರಗುತ್ತಿಗೆ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಂಡು ಬಡ ನೌಕರರಿಗೆ ಸಕಾಲದಲ್ಲಿ ವೇತನ ಕೈ ಸೇರುವಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ಅರಣ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಯಾವುದೇ ಕಾಮಗಾರಿಗಳು ನಡೆಸಲು ಅರಣ್ಯ ಇಲಾಖೆ ಅನುಮತಿ ನೀಡಬಾರದು



ಮೈಸೂರು, ಜು.16(ಎಸ್‌ಪಿಎನ್)- ಚಾಮುಂಡಿಬೆಟ್ಟದಲ್ಲಿ ಅಪರೂಪ ಸಸ್ಯ ಸಂಪತ್ತಿನಿಂದ ಕೂಡಿದ್ದು, ಇಲ್ಲಿ ಪ್ರಾಣಿ-ಪಕ್ಷಿಗಳು ವಾಸಿಸುತ್ತಿವೆ. ಈ ಬೆಟ್ಟವು ಮೆದು ಮಣ್ಣಿನಿಂದ ಕೂಡಿದ್ದು, ಇಲ್ಲಿ ಯಾವುದೇ ಕಾಮಗಾರಿ ನಡೆಸಲು ಅರಣ್ಯ ಇಲಾಖೆ ಅನುವು ಮಾಡಿಕೊಡದಂತೆ ತಡೆಗಟ್ಟಬೇಕು ಎಂದು ಒತ್ತಾಯಿಸಿ ಪರಿಸರ ಸಂರಕ್ಷಣಾ ಸಮಿತಿ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದೆ.

ಚಾಮುಂಡಿಬೆಟ್ಟ ಅಪರೂಪದ ಸಸ್ಯ ಸಂಪತ್ತಿನಿಂದ ಕೂಡಿದ್ದು, ಇಲ್ಲಿ ಪ್ರಾಣಿ-ಪಕ್ಷಿಗಳು ವಾಸಿಸುತ್ತಿವೆ. ಕೇಂದ್ರ ಸರ್ಕಾರ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ಬೆಟ್ಟದ ಅಭಿವೃದ್ಧಿಗಾಗಿ ಪ್ರಸಾದ ಯೋಜನೆಗೆ ಕೋಟ್ಯಾಂತರ ರೂ ಬಿಡುಗಡೆ ಮಾಡಿದೆ. ಆದರೆ, ಬೆಟ್ಟವು ಮೆದು ಮಣ್ಣಿನಿಂದ ಕೂಡಿದ್ದು, ಯಾವುದೇ ಕಾಮಗಾರಿಗಳನ್ನು ನಡೆಸದಂತೆ ಅರಣ್ಯ ಇಲಾಖೆ ತಡೆಗಟ್ಟಬೇಕು ಎಂದ ಸಮಿತಿ ಅಧ್ಯಕ್ಷೆ ಭಾನು ಮೋಹನ್ ಮನವಿಯಲ್ಲಿ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಮರಗಳನ್ನು ಅಕ್ರಮವಾಗಿ ಕಡಿಯುವವರ ವಿರುದ್ಧ ವಿಧಿಸುವ ದಂಡ ಮೊತ್ತವನ್ನು ದುಪ್ಪಟ್ಟು ಹೆಚ್ಚಿಸಬೇಕು ಸೇರಿದಂತೆ ಇತರೆ ಅರಣ್ಯ ಇಲಾಖೆ ಸಮಸ್ಯೆಗಳ ಬಗ್ಗೆ ಸ್ಪಂದಿಸಬೇಕು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ರಸ್ತೆ ನಿರ್ಮಾಣ ಮಾಡುವಾಗ ರಸ್ತೆ ಬದಿಯಲ್ಲಿ ಸಸಿಗಳನ್ನು ನೆಡಲು ಒಂದೊಂದು ಸಸಿಗೂ 5 ಅಡಿ ಜಾಗಬಿಟ್ಟು ಸಸಿಗಳನ್ನು ನೆಡುವಂತೆ ನಿರ್ದೇಶನ ನೀಡಬೇಕು. ನಗರದ ಪ್ರದೇಶದಲ್ಲಿನ ಕೆರೆಗಳನ್ನು ಅರಣ್ಯ ಇಲಾಖೆ ಸುಪರ್ದಿಗೆ ತೆಗೆದುಕೊಂಡು ಅಭಿವೃದ್ಧಿಪಡಿಸಬೇಕು. ಪ್ರಕೃತಿ ಸಂಪತ್ತು ಕಾಪಾಡುವ ಜವಾಬ್ದಾರಿ ಹೊತ್ತಿರುವ ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿದ್ದು, ಕೂಡಲೇ ಸಿಬ್ಬಂದಿ ನೇಮಕಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ತಮ್ಮ ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಜೆಪಿಯ ಬಿ–ಟೀಂ ಜೆಡಿಎಸ್ ಎಂಬುದನ್ನು ಸಾಬೀತುಪಡಿಸಲು ಹೆಚ್‌ಡಿಕೆ ಹೊರಟಿದ್ದಾರೆ

ಬೆಂಗಳೂರು, ಜು.16–ಲೋಕಸಭೆ ಚುನಾವಣೆಯ 2024ರಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿ ವಿಚಾರಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿವಿದಿದ್ದಾರೆ.




ಬಿಜೆಪಿಯ ಬಿ ಟೀಂ ಜೆಡಿಎಸ್ ಎಂದು ನಾವು ಅನೇಕ ಬಾರಿ ಹೇಳಿದ್ದೆವು, ನಮ್ಮ ಮಾತು ಸತ್ಯ ಎಂಬುದನ್ನು ನಿರೂಪಿ ಸಲು ಹೆಚ್‌ಡಿಕೆ ಹೊರಟಿದ್ದಾರೆ. ಜೆಡಿಎಸ್‌ಗೆ ಯಾವುದೇ ತತ್ವ ಸಿದ್ಧಾಂತಗಳಿಲ್ಲ ಎಂದಿದ್ದಾರೆ.

ಸರಣಿ ಟ್ವೀಟ್ ಮೂಲಕ ಟೀಕಿಸಿರುವ ಅವರು, ಮೈತ್ರಿ ಮಾಡಿಕೊಳ್ಳುವ ಬದಲು ಬಿಜೆಪಿ ಜೊತೆ ಜೆಡಿಎಸ್ ವಿಲೀನವಾಗಲಿ, ಆಗ ಅವರೇ ವಿಪಕ್ಷ ನಾಯಕರಾಗಬಹುದು, ಈ ಮೂಲಕವಾದರೂ ಕುಮಾರಸ್ವಾಮಿ ಸುಳ್ಳು ಜಾತ್ಯಾತೀತತೆಯ ನಕಲಿ ಶ್ಯಾಮನ ಅವತಾರ ಕೊನೆಯಾಗಲಿ ಎಂದು ಟೀಕಿಸಿದ್ದಾರೆ. ಜೆಡಿಎಸ್ ಮುಂದಿರುವ ಜಾತ್ಯಾತೀತ ಎಂಬ ಪದ ಕೇವಲ ಸೋಗಲಾಡಿತನವಷ್ಟೆ. 2006ರಲ್ಲಿ ಬಿಜೆಪಿ ಜೊತೆ ಸೇರಿ 20–20 ಸರ್ಕಾರ ಮಾಡಿದಾಗಲೇ ಜಾತ್ಯಾತೀತ ತತ್ವಕ್ಕೆ ಹೆಚ್‌ಡಿಕೆ ಎಳ್ಳುನೀರು ಬಿಟ್ಟಿದ್ದರು. ಆಗಲೇ ಜೆಡಿಎಸ್‌ನ ಅವನತಿ ಶುರುವಾಗಿದ್ದು. 2004ರಲ್ಲಿ 59 ಸ್ಥಾನ ಗೆದ್ದಿದ್ದ ಜೆಡಿಎಸ್ ಈ ಬಾರಿ 19 ಸ್ಥಾನಕ್ಕೆ ಕುಸಿಯಲು ಈ ನಕಲಿ ಜಾತ್ಯಾತೀತ ಸಿದ್ಧಾಂತವೇ ಕಾರಣ ಎಂದಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು







ಕೆಆರ್‌ಎಸ್ ಹಿನ್ನೀರಲ್ಲಿ ಮುಳುಗಿದ್ದ ಮತ್ತಿಬ್ಬರ ದೇಹ ಪತ್ತೆ




ವರುಣ್ ಮತ್ತು ಪ್ರವೀಣ್

ಮೈಸೂರು, ಜು.16(ಎಸ್‌ಬಿಡಿ)– ಕೆಆರ್‌ಎಸ್ ಹಿನ್ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದ ಮತ್ತಿಬ್ಬರು ಯುವಕರ ಮೃತದೇಹಗಳು ಪತ್ತೆಯಾಗಿವೆ.

ಮೈಸೂರು ರಾಮಕೃಷ್ಣನಗರದ ನಿವಾಸಿ ಮೊಯಿಲ್ ಅವರ ಪುತ್ರ ಪ್ರವೀಣ್ ಮೊಯಿಲ್(20) ಹಾಗೂ ಹೆಬ್ಬಾಳಿನ ನಿವಾಸಿ ಪಾಪಣ್ಣ ಅವರ ಪುತ್ರ ವರುಣ್(21) ಮೃತದೇಹಗಳು ಭಾನುವಾರ ಬೆಳಗ್ಗೆ ಪತ್ತೆಯಾಗಿದ್ದು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಗಿದೆ. ಇವರ ಸ್ನೇಹಿತ, ಪಡುವಾರಹಳ್ಳಿಯ ಗುತ್ತಿಗೆದಾರ ದೇವೇಗೌಡರ ಪುತ್ರ ಭರತ್(20) ಮೃತದೇಹ ಶನಿವಾರ ಸಂಜೆ ಪತ್ತೆಯಾಗಿತ್ತು.

ಜಯಲಕ್ಷ್ಮಿಪುರಂನ ಸೆಂಟ್ ಜೋಸೆಫ್ ಕಾಲೇಜಿನ ಪದವಿ ವಿದ್ಯಾರ್ಥಿಯಾಗಿದ್ದ ಭರತ್, ಮೂರು ದಿನಗಳ ಹಿಂದೆ ಹುಟ್ಟುಹಬ್ಬ ಆಚರಿಸಿಕೊಂಡಿದ್ದ. ಈ ಹಿನ್ನೆಲೆಯಲ್ಲಿ ಬರ್ತಡೇ ಪಾರ್ಟಿ ಕೊಡಿಸಲೆಂದು ಸ್ನೇಹಿತರನ್ನು ಶನಿವಾರ ಸಂಜೆ ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರು ಪ್ರದೇಶಕ್ಕೆ ಕರೆದೊಯ್ದಿದ್ದ. ಒಟ್ಟು ಐವರು ಯುವಕರು ಸಂಜೆ 4.30ರ ವೇಳೆಯಲ್ಲಿ ನೀರಿಗಿಳಿದಿದ್ದರು. ಆದರೆ ವಿಘ್ನೇಶ್ ಎಂಬಾತ ತನ್ನ ಮೊಬೈಲ್ ಅನ್ನು ಬಟ್ಟೆಯ ಬಳಿಯಿಟ್ಟು ಬರುವುದಾಗಿ ದಡಕ್ಕೆ ಬಂದಿದ್ದ. ಅಷ್ಟರಲ್ಲಿ ಉಳಿದ ನಾಲ್ವರು ನೀರಿನಲ್ಲಿ ಮುಳುಗಲಾರಂಭಿಸಿದರು. ಅವರಲ್ಲಿ ಈಜು ಕಲಿತಿದ್ದ ಮನೋಜ್ ಎಂಬಾತ ಈಜಿ ದಡ ಸೇರಿದ್ದ. ಆದರೆ ಈಜು ಬರದ ಭರತ್, ವರುಣ್ ಹಾಗೂ ಪ್ರವೀಣ್ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದರು.

ಈಜು ಪರಿಣಿತರು ಸಂಜೆ 7 ಗಂಟೆ ಹೊತ್ತಿಗೆ ಭರತ್‌ನ ಮೃತದೇಹವನ್ನು ಪತ್ತೆ ಮಾಡಿ, ಹೊರತೆಗೆದರು. ಬಳಿಕ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಈಜುಗಾರರು ರಾತ್ರಿ 11ರವರೆಗೂ ಕಾರ್ಯಾಚರಣೆ ಮುಂದುವರೆಸಿದರಾದರೂ ಉಳಿದಿಬ್ಬರ ಮೃತದೇಹ ಪತ್ತೆಯಾಗಲಿಲ್ಲ. ರಾತ್ರಿಯಲ್ಲಿ ಕಾರ್ಯಾಚರಣೆ ಕಷ್ಟವಾಗಿದ್ದರಿಂದ ಸ್ಥಗಿತಗೊಳಿಸಿ, ಭಾನುವಾರ ಬೆಳಗ್ಗೆಯಿಂದಲೇ ಮತ್ತೆ ಆರಂಭಿಸಲಾಗಿತ್ತು. ಬೆಳಗ್ಗೆ 10 ಗಂಟೆ ಸುಮಾರಿಗೆ ಪ್ರವೀಣ್ ಹಾಗೂ ವರುಣ್ ಮೃತದೇಹಗಳು ಪತ್ತೆಯಾದವು.

ಬಳಿಕ ಮೃತದೇಹಗಳನ್ನು ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ ತಂದು ಪರೀಕ್ಷೆ ನಡೆಸಿದ ಬಳಿಕ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಈ ವೇಳೆ ಶವಾಗಾರದ ಬಳಿ ಜಮಾಯಿಸಿದ್ದ ಮೃತರ ಸಂಬಂಧಿಕರು, ಸ್ನೇಹಿತರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಲಿ ವೈಸಲ್‌ನ ಆತ್ಮಕತೆ 'ದಿ ನೈಟ್'ನ ಕನ್ನಡಾನುವಾದ ಕೃತಿ 'ದೇವರು ಎದ್ದು ಹೋದ ದಿನ' ಬಿಡುಗಡೆ

ದೇವರು ಅಧಿಕಾರಕ್ಕಾಗಿ ಉಪಕರಣವಾದರೆ ಹಿಂಸೆಗೆ ನಾಂದಿ

ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಭಾನುವಾರ 'ದೇವರು ಎದ್ದು ಹೋದ ದಿನ' ಕೃತಿಯನ್ನು ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಬಿಡುಗಡೆ ಮಾಡಿದರು.

ಮೈಸೂರು,ಜು.16(ಪಿಎಂ)– ದೇವರನ್ನು ಅಧಿಕಾರಕ್ಕಾಗಿ ಒಂದು ಉಪಕರಣ ಮಾಡಿಕೊಂಡರೆ ಸಮಾಜದಲ್ಲಿ ಹಿಂಸೆ ಶುರುವಾಗುತ್ತದೆ ಎಂದು ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ನಿರಂತರ ಫೌಂಡೇಷನ್ ಮತ್ತು ಅಭಿರುಚಿ ಪ್ರಕಾಶನದ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಎಲಿ ವೈಸಲ್‌ನ ಆತ್ಮಕತೆ (ಜರ್ಮನ್ ಹಾಲೋಕಾಸ್ಟ್ ಭಯಾನಕತೆ ಪರಿಚಯಿಸುವ ಆತ್ಮಕಥೆ) 'ದಿ ನೈಟ್'ನ ಕನ್ನಡಾನುವಾದ ಕೃತಿ 'ದೇವರು ಎದ್ದು ಹೋದ ದಿನ' ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ನಾವಿಂದು ಉಗ್ರ ಸ್ವರೂಪದ ಹನುಮಂತನ ಚಿತ್ರ ನೋಡುತ್ತಿದ್ದೇವೆ. ಆದರೆ ಹನುಮಂತ ಬಹಳ ಸಭ್ಯ, ಮೃದು ವ್ಯಕ್ತಿತ್ವ ಹೊಂದಿರುವವನು. ಅವನನ್ನು ನಾವು ಉಗ್ರ ರೂಪದಲ್ಲಿ ನೋಡುವಂತಾಗಿದೆ. ಆ ಮೂಲಕ ಹನುಮಂತ ದೇವರನ್ನು ಒಬ್ಬ ಕ್ರೂರಿಯಂತೆ ಮಾಡಲಾಗಿದೆ. ರಾಮನನ್ನು ಬಿಲ್ಲು ಬಾಣ ಹಿಡಿದು ಯುದ್ಧಕ್ಕೆ ಹೊರಟಂತೆ ಮಾಡಿದ್ದೇವೆ. ಎಲ್ಲಾ ದೇವರುಗಳನ್ನು ಅವರ ಆಯುಧಗಳ ಮೂಲಕ ಗುರುತಿಸುವ ಸ್ಥಿತಿಗೆ ಬಂದಿದ್ದೇವೆ. 'ದೇವರು ಎದ್ದು ಹೋದ ದಿನ' ಕೃತಿಯ ಚಿತ್ರಣ ನಮ್ಮ ದೇಶದ ಪರಿಸ್ಥಿತಿಯೂ ಆಗಬಹುದು. ದೇವರನ್ನು ಆಯುಧ ಮಾಡಿಕೊಂಡರೆ ಹಿಂಸೆ ಪ್ರಾರಂಭವಾಗುತ್ತದೆ ಎಂದು ವಿಷಾದಿಸಿದರು.

ಯಹೂದಿ ತತ್ವ ಚಿಂತಕಿಯೊಬ್ಬರ ಅದ್ಭುತ ಲೇಖನಗಳನ್ನು ಅನಂತಮೂರ್ತಿ ನಮಗೆ ಓದಿಸಿದ್ದರು. ಯಹೂದಿಗಳಿಗೆ ಹಿಟ್ಲರ್ ಹಿಂಸೆ ನೀಡುತ್ತಿರುವುದು ಈ ಚಿಂತಕಿಗೆ ಗೊತ್ತಾದಾಗ, ಈಕೆ ಅಲ್ಲಿಗೆ ಹೋಗಿ ಅವರಿಗೆ ಸಹಾಯ ಮಾಡಲಾಗದ ಕಾರಣ ಉಪವಾಸ ಮಾಡಿ ಪ್ರಾಣ ಬಿಡುತ್ತಾಳೆ. 'ದೇವರು ಈ ಸೃಷ್ಟಿಯಲ್ಲಿ ಇಲ್ಲವಾಗಿ ಮಾತ್ರ ಇರಬಲ್ಲ' ಎಂಬ ಈ ಚಿಂತಕಿಯ ಮಾತು ಅರ್ಥ ಮಾಡಿಕೊಳ್ಳುವುದು ತೊಡಕು ಅನ್ನಿಸಿದರೂ ಸುಲಭವೂ ಆಗಿದೆ. ಅಂದರೆ ದೇವರನ್ನು ನಾವು ಅನುಭವ ಎಂದು ನೋಡಿದಾಗ, ಅದು ಪ್ರಶಿಕ್ಷಣ ಆಗಬೇಕಾದ ಅನುಭವ ಆಗುತ್ತದೆ. ಆದರೆ ನಿಯಮ–ಆಚರಣೆಗಳಲ್ಲಿ ಬಂಧಿಸಿದಾಗ, ದೇವರು ಇಲ್ಲವಾಗುತ್ತಾನೆ ಎಂದು ಹೇಳಿದರು.

ಇದಕ್ಕೆ ಪೂರಕವಾಗಿ ಪುತಿನ ಹೇಳಿಕೆಯೊಂದನ್ನು ನೀಡಿದ್ದಾರೆ. 'ಮೂರ್ತಿರಾಯರು ದೇವರ ಬಗ್ಗೆ ಪುಸ್ತಕ ಬರೆದು, ದೇವರು ಇಲ್ಲ' ಎಂದು ಹೇಳಿದ್ದಾರೆ' ಎಂಬುದನ್ನು ಕೆಲವರು ಪುತಿನ ಅವರ ಗಮನಕ್ಕೆ ತಂದಿದ್ದರು. ಆಗ ಪುತಿನ, ಹೌದು ಅವರು ನಿಜವನ್ನೇ ಹೇಳಿದ್ದಾರೆ. ನಿಮ್ಮ ಮನೆಯಲ್ಲಿ ಇಡ್ಲಿ, ಉಪ್ಪಿಟ್ಟು, ಕಾಫಿ ಮೊದಲೇ ಇರುತ್ತದೆಯೇ ಅಥವಾ ಮಾಡಿಕೊಳ್ಳುತ್ತೀರಾ? ಎಂದು ಪುತಿನ ಪ್ರಶ್ನಿಸಿದ್ದರು. ಅದಕ್ಕೆ ದೂರಿದವರು, ಮಾಡಿಕೊಳ್ಳುತ್ತೇವೆ ಎಂದು ಉತ್ತರಿಸಿದಾಗ, ಅದೇ ರೀತಿ ದೇವರು ಕೂಡ ಇಲ್ಲ. ನಾವು ಮಾಡಿಕೊಳ್ಳಬೇಕು ಎಂದು ಪುತಿನ ಹೇಳಿದ್ದರು ಎಂದರು.

ಇತ್ತೀಚೆಗೆ ನೊಬೆಲ್ ಪ್ರಶಸ್ತಿ ಪಡೆದ ಫ್ರೆಂಚ್ ಲೇಖಕಿ ಅನ್ನಿ ಎರ್ನಾಕ್ಸ್ ಅವರು, ಅನುಭವ ಎಲ್ಲರಿಗೂ ಆಗುತ್ತದೆ. ಅದನ್ನು ಮಾತಿನ ರೂಪದಲ್ಲಿ ಮುಂದಿನ ತಲೆಮಾರಿಗೆ ದಾಟಿಸಲಾಗದೇ ಅವರ ಜೊತೆಯಲ್ಲೇ ಅವು ಸತ್ತು ಹೋಗುತ್ತವೆ. ಹಾಗಾಗಿ ದಾಖಲಿಸಬೇಕಿರುವುದು ಪ್ರತಿಯೊಂದು ಅನುಭವದ ಹಕ್ಕು ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಯಾವುದನ್ನು ಮರೆಯಬೇಕೋ ಅದನ್ನು ಮರೆಯುವುದಿಲ್ಲ. ಯಾವುದನ್ನು ನೆನೆಪಿಟ್ಟುಕೊಳ್ಳಬೇಕೋ ಅದನ್ನು ನೆನೆಪಿಟ್ಟುಕೊಳ್ಳದೇ ಇರುವುದು ಮನುಷ್ಯನ ದೊಡ್ಡ ದುರಂತಕ್ಕೆ ಕಾರಣ. ದುರಂತಗಳನ್ನೇ ನೆನೆಪಿಟ್ಟುಕೊಂಡರೆ ಬದುಕು ನಡೆಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಮರೆಯಲೇಬೇಕು. ದುರಂತಕ್ಕೆ ಕಾರಣಗಳನ್ನು ಮರೆತರೆ ಅದು ಪುನರಾವರ್ತನೆಯಾಗುವುದು ತಪ್ಪುವುದಿಲ್ಲ. ಈ ಇಕ್ಕಟ್ಟಿನಿಂದ ಪಾರಾಗಲು ದಾರಿಯೇ ಇಲ್ಲ ಎಂದರು.

ಬಹುತೇಕ ಬರಹಗಳು ಧರ್ಮದ ಹೆಸರಿನಲ್ಲಿ ನಡೆಯುವ ಕ್ರೌರ್ಯವನ್ನು ದಾಖಲಿಸಿವೆ. ಇದು ಇಡೀ ಸಮಾಜವನ್ನು ಬದಲಿಸದೇ ಇದ್ದರೂ ಓದುವವರ ಮನಸ್ಸಿನಲ್ಲಿ ಸ್ವಲ್ಪವಾದರೂ ತಿಳುವಳಿಕೆ ಮೂಡಿಸಲಿವೆ. ಇಂದು ಬಿಡುಗಡೆಗೊಂಡ ಪುಸ್ತಕ ಒಂದು ಅನುಭವ ಕಟ್ಟಿಕೊಡುತ್ತದೆ ಎಂದು ತಿಳಿಸಿದರು. ಕವಿ ಆರಿಫ್ ರಾಜಾ, ನಿರಂತರ ಫೌಂಡೇಷನ್‌ನ ಪ್ರಸಾದ್ ಕುಂದೂರು, ಕೃತಿ ಅನುವಾದಕಿ ದೇವಕಿ ಧರ್ಮಿಷ್ಠೆ, ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್ ಮತ್ತಿತರರು ಹಾಜರಿದ್ದರು.

ಇಂಗ್ಲಿಷ್‌ನಿಂದ ಕನ್ನಡಾನುವಾದಕ್ಕೆ ಭಾಷಾ ಶೈಲಿ ಕಂಡುಕೊಳ್ಳುವುದು ದೊಡ್ಡ ಸವಾಲು

ಮೈಸೂರು,ಜು.16(ಪಿಎಂ)– ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ, ಯಾವುದೇ ಒಂದು ಸಮುದಾಯ ಅಥವಾ ಒಂದು ಪ್ರದೇಶದ ಭಾಷಾ ಶೈಲಿಯಾಗದೇ, ಔಪಚಾರಿಕವಾಗಿಯೂ ಅನೌಪಚಾರಿಕ ಮಾದರಿಯ ಭಾಷಾ ಶೈಲಿ ಕಂಡುಕೊಳ್ಳಬೇಕಿದ್ದು, ಇದೇ ದೊಡ್ಡ ಸವಾಲು ಎಂದು ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಹೇಳಿದರು.

ಒಂದು ಅನುವಾದ ಮಾಡುವಾಗ ಕಂಡುಕೊಂಡ ಉತ್ತರ ಮತ್ತೊಂದು ಅನುವಾದ ವೇಳೆ ಉಪಯೋಗಕ್ಕೆ ಬಾರದೇ ಇರುವುದೇ ಹೆಚ್ಚು. ಹಾಗಾಗಿ ಮತ್ತೆ ಹೊಸ ಸವಾಲುಗಳು ಎದುರಾಗುತ್ತವೆ. ಅನುವಾದ ಮಾಡುವುದು ಭಾಷೆ ಅಥವಾ ಪದಗಳನ್ನು ಅಲ್ಲ. ಪದಕ್ಕೆ ಪದವಿಟ್ಟರೆ ಅನುವಾದ ಆಗುವುದಿಲ್ಲ. ಆ ಪದದ ಹಿಂದಿರುವ ಭಾವನೆಯನ್ನು ನನ್ನ ಭಾಷೆಯಲ್ಲಿ ಹೇಳುವುದು ಮುಖ್ಯ. ಭಾಷೆ ಬದಲಾಗಬೇಕು. ಆದರೆ ಭಾವನೆ ಬದಲಾಗಬಾರದು. ಮತ್ತೊಂದು ದೊಡ್ಡ ಸವಾಲು ಎಂದರೆ ಮೂಲ ಲೇಖಕರು ಬರೆದಂತೆಯೇ ಬರೆಯುವುದಾಗಿದೆ ಎಂದರು.

ಯಾವುದೇ ಪುಸ್ತಕ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕೆಂದರೆ ಅದನ್ನು ಮತ್ತೊಂದು ಭಾಷೆಗೆ ಅನುವಾದಕ್ಕೆ ಮುಂದಾಗಬೇಕು. ಅನುವಾದದಿಂದ ಜಗತ್ತಿನ ಬೇರೆ ಬೇರೆ ಭಾಷೆಯ ಕೃತಿಗಳನ್ನು ಕನ್ನಡದಲ್ಲಿ ಓದುವ ಮೂಲಕ ನಾವು ನಮ್ಮ ಮನಸ್ಸನ್ನು ಹಿಗ್ಗಿಸಿಕೊಳ್ಳಬಹುದು. ಹೆಚ್ಚು ಹೆಚ್ಚು ಅನುವಾದಗಳು ಆಗಬೇಕು. ಏಕೆಂದರೆ ನಾವು ಇನ್ನೂ 2 ಶತಮಾನ ಕಳೆದರೂ ದೇಶದ ಎಲ್ಲಾ ಮಕ್ಕಳಿಗೂ ಇಂಗ್ಲಿಷ್ ಕಲಿಸಲು ಸಾಧ್ಯವಿಲ್ಲ. ಹಾಗಾಗಿ ಅನುವಾದಕರು ತಮಗೆ ಮುಖ್ಯ ಅನ್ನಿಸಿದ್ದನ್ನೂ ತಮ್ಮ ಭಾಷೆಗಳಿಗೆ ಅನುವಾದ ಮಾಡಬೇಕು. ಅದನ್ನು ತಮ್ಮ ಸಾಮಾಜಿಕ ಜವಾಬ್ದಾರಿ ಎಂದು ಭಾವಿಸಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತರ ಕ್ರೀಡಾಕೂಟಕ್ಕೆ ತೆರೆ



ಮೈಸೂರು, ಜು.16(ಎಂಕೆ)– ಮೈಸೂರಿನ ಮಹಾರಾಜ ಕಾಲೇಜಿನ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಪತ್ರಕರ್ತರು ಹಾಗೂ ಅವರು ಕುಟುಂಬದವರಿಗಾಗಿ ಆಯೋಜಿಸಿದ್ದ ಎರಡು ದಿನಗಳ ವಾರ್ಷಿಕ ಕ್ರೀಡಾಕೂಟಕ್ಕೆ ಭಾನುವಾರ ಯಶಸ್ವಿಯಾಗಿ ತೆರೆಬಿದ್ದಿತು.

ಮೊದಲ ದಿನ ಕ್ರಿಕೆಟ್ ಪಂದ್ಯಾವಳಿ ನಡೆದರೆ, ಎರಡನೇ ದಿನವಾದ ಭಾನುವಾರ ಶಟಲ್ ಬ್ಯಾಡ್ಮಿಂಟನ್(ಡಬಲ್ಸ್) ಪಂದ್ಯಾವಳಿ, ವಿವಿಧ ವಯೋಮಾನದ ಪುರುಷರು, ಮಹಿಳೆಯರು ಹಾಗೂ ಮಕ್ಕಳಿಗೆ ಓಟದ ಸ್ಪರ್ಧೆ, ಗುಂಡು ಎಸೆತ, ಗೋಣಿ ಚೀಲದ ಓಟ, ಲೆಮನ್ ಅಂಡ್ ಸ್ಪೂನ್, ಮ್ಯೂಸಿಕಲ್ ಚೇರ್ ಪಂದ್ಯಗಳು ನಡೆದವು.

ಉತ್ಸಾಹದಿಂದ ಭಾಗವಹಿಸಿದ ಪತ್ರಕರ್ತರು ಹಾಗೂ ಅವರ ಕುಟುಂಬಸ್ಥರು ಗೆಲುವಿಗಾಗಿ ಭಾರೀ ಪೈಪೋಟಿ ನಡೆಸಿದರು. ಅವರಲ್ಲಿ ಹಲವರು ಗೆದ್ದು ಸಂಭ್ರಮಿಸಿದರು. ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ವಿಜೇತರಿಗೆ ಬಹುಮಾನ ವಿತರಿಸಿದರಲ್ಲದೆ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಕೆಲಸದ ಒತ್ತಡದ ನಡುವೆ ಪತ್ರಕರ್ತರು ಕುಟುಂಬಸ್ಥರೊಂದಿಗೆ ಸಮಯ ಕೊಡುವುದೇ ಕಷ್ಟ. ಆದರೆ ಇಂದು ಎಲ್ಲರೂ ಒಟ್ಟಾಗಿ ಕ್ರೀಡಾಕೂಟದಲ್ಲಿ ತೊಡಗಿರುವುದು ಸಂತಸ ತರುತ್ತದೆ. ಪತ್ರಕರ್ತರು ಹಗಲು–ರಾತ್ರಿ ಎನ್ನದೇ ಕೆಲಸ ಮಾಡುತ್ತಿರುತ್ತಾರೆ. ಇದನ್ನು ಅರ್ಥ ಮಾಡಿಕೊಂಡು ಮಕ್ಕಳು ಚೆನ್ನಾಗಿ ಓದಿ, ಉನ್ನತ ಸ್ಥಾನಗಳನ್ನು ಪಡೆದುಕೊಳ್ಳಬೇಕು. ಈ ಮೂಲಕ ತಂದೆ–ತಾಯಿಗೆ ಹಾಗೂ ಸಮಾಜಕ್ಕೆ ಉತ್ತಮ ಪ್ರಜೆಯಾಗಿ ಗೌರವ ತಂದುಕೊಡಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಪತ್ರಕರ್ತರು ಹಾಗೂ ಹೋಟೆಲ್ ಮಾಲೀಕರ ಸಂಘದ ನಡುವೆ ಅನನ್ಯ ಬಾಂಧವ್ಯ ಇದ್ದು, ಪರಸ್ಪರ ಸಹಕಾರ ನೀಡಲಾಗುತ್ತಿದೆ. ಕುಟುಂಬಸ್ಥರೊಂದಿಗೆ ಸೇರಿ ಸಂಭ್ರಮಿಸುವುದು ನಿಜಕ್ಕೂ ಸಂತೋಷವಾಗುತ್ತದೆ. ಆದ್ದರಿಂದ ಪ್ರತಿ ವರ್ಷ ಇಂತಹ ಕಾರ್ಯಕ್ರಮಗಳು ನಡೆಯಬೇಕು ಎಂದು ಆಶಿಸಿದರು. ಕೌಟಿಲ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಬಾಲು ಅವರು ಕ್ರೀಡಾಕೂಟಕ್ಕೆ ಶುಭ ಹಾರೈಸಿದರು. ಸಂಘದ ಅಧ್ಯಕ್ಷ ಎಸ್. ಟಿ.ರವಿಕುಮಾರ್, ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷ ರವಿಶಾಸ್ತ್ರಿ, ಹೋಟೆಲ್ ಉದ್ಯಮಿ ಭಾಸ್ಕರ್‌ಶೆಟ್ಟಿ, ಲಯನ್ಸ್ ಸಂಸ್ಥೆಯ ಎ.ಸಿ.ರವಿ, ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಮತ್ತಿತರರು ಉಪಸ್ಥಿತರಿದ್ದರು.

ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಬದಲು ಹಣ ಅಕೌಂಟಿಗೆ

ಫಲಾನುಭವಿಗಳ ಸಮಸ್ಯೆ ನಿವಾರಣೆಗೆ ಸಹಾಯವಾಣಿ ಆರಂಭ

ತಾಲೂಕು	ಸಹಾಯವಾಣಿ	ಸಂಪರ್ಕಿಸ ಬೇಕಾದವರ ಹೆಸರು
ಹೆಚ್.ಡಿ.ಕೋಟೆ	8197222784	ಸೋಮಶೇಖರ್
ಹುಣಸೂರು	8884024771	ಶರವಣ
	8970939533	ಮಾದೇಗೌಡ
ಕೆ.ಆರ್.ನಗರ	7353197375	ಪುಟ್ಟರಾಜು
ಮೈಸೂರು ನಗರ	9880238495	ಕೇಶವ
	9901821269	ಮಂದಾರ
ಮೈಸೂರು ತಾಲೂಕು	8618771871	ನಾಗರಾಜು
	9743905385	ಕವಿತ



ಮೈಸೂರು, ಜು.16(ಜಿಎ)–ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ ಅಕ್ಕಿ ವಿತರಣೆ ಮಾಡುವ ಬದಲು ಪ್ರತಿ ಕೆ.ಜಿ.ಗೆ 34 ರೂ. ನಂತೆ ಪಡಿತರ ಚೀಟಿಯಲ್ಲಿರುವ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ಹಣವನ್ನು ವರ್ಗಾಯಿಸಲಾಗುತ್ತಿದ್ದು, ಹಣ ವರ್ಗಾವಣೆ ಆಗದೇ ಇರುವ ಪಡಿತರ ಫಲಾನುಭವಿಗಳಿಗೆ ಇರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರತಿ ತಾಲೂಕಿನಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್ ತಿಳಿಸಿದ್ದಾರೆ.

ರಾಜ್ಯದಲ್ಲಿರುವ ಅಂತ್ಯೋದಯ ಅನ್ನ (ಎಎವೈ) ಮತ್ತು ಆದ್ಯತಾ (ಬಿ.ಪಿ.ಎಲ್) ಪಡಿತರ ಚೀಟಿಗಳ ಪ್ರತಿ ಫಲಾನುಭವಿಗಳಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಅನ್ವಯ ವಿತರಿಸಲಾಗುವ 5 ಕೆಜಿ ಆಹಾರ ಧಾನ್ಯದೊಂದಿಗೆ ರಾಜ್ಯ ಸರ್ಕಾರದ ವತಿಯಿಂದ ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ 5 ಕೆ.ಜಿ ಧಾನ್ಯವನ್ನು ಸೇರಿಸಿ ಪ್ರತಿ ಫಲಾನುಭವಿಗೆ 10 ಕೆ.ಜಿ ಆಹಾರ ಧಾನ್ಯವನ್ನು ಉಚಿತವಾಗಿ ವಿತರಿಸಲು ಸರ್ಕಾರವು ನಿರ್ಧರಿಸಿದೆ.

ಈ ಉದ್ದೇಶಕ್ಕಾಗಿ ಅಗತ್ಯವಿರುವ ಆಹಾರ ಧಾನ್ಯವನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಲು ಪ್ರಕ್ರಿಯೆಯನ್ನು ಆರಂಭಿಸಲಾಗಿರುತ್ತದೆ. ಸದರಿ ಪ್ರಕ್ರಿಯೆ ಮುಗಿದು ಆಹಾರ ಧಾನ್ಯವನ್ನು ಪೂರೈಕೆ ಮಾಡುವವರೆಗೆ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ (ಎಎವೈ) ಮತ್ತು ಆದ್ಯತಾ (ಬಿ.ಪಿ.ಎಲ್) ಪಡಿತರ ಚೀಟಿಗಳ ಫಲಾನುಭವಿಗಳಿಗೆ ಪ್ರತಿ ಕೆ.ಜಿ.ಗೆ ರೂ.34/–ರಂತೆ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ DBT ಮೂಲಕ ಹಣವನ್ನು ವರ್ಗಾಯಿಸುವ ಬಗ್ಗೆ ಈಗಾಗಲೇ ಕ್ರಮಕೈಗೊಂಡಿದ್ದು, ಮೈಸೂರು ಜಿಲ್ಲೆಯಲ್ಲಿ ಇದುವರೆವಿಗೆ ಒಟ್ಟು 5,86,400 ಫಲಾನುಭವಿಗಳ ಬ್ಯಾಂಕ್ ಖಾತೆಗೆ ಒಟ್ಟು ರೂ.31,52,79,800 ಗಳು ಸಂದಾಯವಾಗಿರುತ್ತದೆ.

ಬ್ಯಾಂಕ್ ಖಾತೆಗಳ ತಾಂತ್ರಿಕ ದೋಷದ ಕಾರಣಗಳಿಂದಾಗಿ DBT ಮೂಲಕ ಹಣವನ್ನು ವರ್ಗಾಯಿಸಲು ಸಾಧ್ಯವಾಗದೇ ಇರುವ ಪಡಿತರ ಫಲಾನುಭವಿಗಳು ತಮ್ಮ ಖಾತೆಗೆ ಹಣ ಜಮಾವಣೆಯಾಗದಿರುವ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು ಜಿಲ್ಲೆಯಾದ್ಯಂತ ತಾಲೂಕುವಾರು ಸಹಾಯವಾಣಿಗಳನ್ನು ತೆರೆಯಲಾಗಿದ್ದು ಅಂತಹ ಪಡಿತರ ಚೀಟಿದಾರರು ಈ ಕೆಳಗೆ ನೀಡಲಾಗಿರುವ ದೂರವಾಣಿ ಸಂಖ್ಯೆಗಳಿಗೆ ಕಚೇರಿ ಕೆಲಸದ ದಿನಗಳಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಸಂಪರ್ಕ ಮಾಡಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಾಣ ಉಳಿಸುವ ವೈದ್ಯರು ದೇವರಿಗೆ ಸಮಾನ

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಅಭಿಮತ



ಮದ್ದೂರು, ಜು. 16– ದೇಶಕಾಯುವ ಸೈನಿಕ, ಅನ್ನ ನೀಡುವ ರೈತ ಈ ದೇಶದ ಬೆನ್ನೆಲುಬು ಎನ್ನುತ್ತಾರೆ ಆದರೆ ಆ ಬೆನ್ನೆಲುಬನ್ನು ಕಾಪಾಡುವವರು ವೈದ್ಯರು ಆದ್ದರಿಂದ ವೈದ್ಯರು ದೇವರಿಗೆ ಸಮಾನರಾಗಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಮದ್ದೂರಿನ ಎಚ್.ಕೆ. ವೀರಣ್ಣಗೌಡ ಪದವಿ ಕಾಲೇಜಿನಲ್ಲಿ ನಡೆದ 2022–23ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮೈಸೂರು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಡಾ। ಕೆ.ಎಸ್. ಸದಾನಂದರವರಿಗೆ ಎಚ್.ಕೆ. ವೀರಣ್ಣಗೌಡ ವೈದ್ಯಕೀಯ ಪ್ರಶಸ್ತಿ ನೀಡಿ ದಂಪತಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ನಾನೊಬ್ಬ ಮಾಜಿ ಸೈನಿಕ, ನಾನು ಸೇನೆಯಲ್ಲಿದ್ದಾಗ ಆಪರೇಷನ್ ಬ್ಲೂಸ್ಟಾರ್ ಕಾರ್ಯಾಚರಣೆಯಲ್ಲಿ ನನ್ನ ದೇಹಕ್ಕೆ ಗುಂಡು ಬಿದ್ದು ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ಸಂದರ್ಭದಲ್ಲಿ ನನಗೆ ದೇವರಾಗಿ ಬಂದು ನನ್ನ ಜೀವ ಉಳಿಸಿದವರು ವೈದ್ಯರು. ಜಯದೇವ ಆಸ್ಪತ್ರೆ ಡಾ. ಸಿ.ಎನ್. ಮಂಜುನಾಥ್‌ರವರ ನೇತೃತ್ವದಲ್ಲಿ ದೇಶದಲ್ಲಿಯೇ ಮಾದರಿಯಾಗಿದೆ. ಡಾ.ಸದಾನಂದ್‌ರವರು ಸಾವಿರಾರು ಬಡರೋಗಿಗಳ ಜೀವವನ್ನು ಉಳಿಸಿದ್ದಾರೆ. ಆದ್ದರಿಂದ ಅವರಿಗೆ ವೀರಣ್ಣಗೌಡ ಪ್ರಶಸ್ತಿ ನೀಡುತ್ತಿರುವುದು ಅರ್ಥಪೂರ್ಣವಾಗಿದೆ. ವಿದ್ಯಾರ್ಥಿಗಳು ಗುರಿ ಮತ್ತು ಛಲ ಇಟ್ಟುಕೊಂಡು ಮೊಬೈಲ್‌ನಿಂದ ದೂರವಿದ್ದು, ಚೆನ್ನಾಗಿ ಓದಿ ಡಾ.ಸದಾನಂದ್‌ರಂತಹ ಮಹನೀಯರನ್ನು ಆದರ್ಶವಾಗಿಟ್ಟುಕೊಂಡು ಸಾಧನೆ ಮಾಡಿ ಈ ಭೂಮಿ ಮೇಲೆ ತಮ್ಮ ಹೆಜ್ಜೆಗುರುತುಗಳನ್ನು ಬಿಟ್ಟು ಹೋಗಬೇಕು ಎಂದರು.

ಸಮಾರಂಭದಲ್ಲಿ ಡಾ. ಸದಾನಂದ್, ಡಾ.ಶ್ವೇತಾ ಸದಾನಂದ್ ಮಾತನಾಡಿದರು. ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷರಾದ ಕೆ.ಟಿ. ಚಂದು, ಅಧ್ಯಕ್ಷರಾದ ಎಂ. ಸ್ವರೂಪ್ ಚಂದ್, ಕಾರ್ಯದರ್ಶಿ ಸಿ. ಅಪೂರ್ವ ಚಂದ್ರ ಜಿ.ಎಸ್. ಶಿವರಾಮು, ಪ್ರಾಂಶುಪಾಲ ಜಿಎಸ್. ಶಂಕರೇಗೌಡ ಶಿವಕುಮಾರ್, ಡಾ.ಕಿರಣ್, ಎ.ವಿ. ಪ್ರದೀಪ್, ಪ್ರಕಾಶ್, ದಿನೇಶ್‌ಗೌಡ, ಹಾಜರಿದ್ದರು. ಕ್ರೀಡೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡ ಪರೀಕ್ಷೆಯಲ್ಲಿ ಪೂರ್ಣ ಅಂಕ ಪಡೆದ ವಿದ್ಯಾರ್ಥಿಗಳಿಗೆ ಕನ್ನಡ ಕಸ್ತೂರಿ ಪ್ರಶಸ್ತಿ



ಮೈಸೂರು, ಜು.16(ಜಿಎ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಪೂರ್ಣ ಅಂಕಗಳನ್ನು ಪಡೆದ ರಾಜ್ಯದ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಕನ್ನಡ ಕಸ್ತೂರಿ–2023 ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಮತ್ತು ಸಂಸ್ಕೃತ ಇಲಾಖೆ ಮತ್ತು ಒಲವು ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಪೂರ್ಣ ಅಂಕಗಳನ್ನು ಪಡೆದ ರಾಜ್ಯದ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಶಿವಯೋಗಿಶ್ವರ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಮಾತನಾಡಿದರು. ಈ ವೇಳೆ ಯುವ ಗಾಯಕರಿಗಾಗಿ 'ನಾವು ಹಾಡುತ್ತೇವೆ' ಗಾಯನ ಸಂಗಮ ಏರ್ಪಡಿಸಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂಗೀತ ನಿರ್ದೇಶಕ ಪಣಿ ಡಿಸೇನಾಪತಿ, ಚಲನಚಿತ್ರ ನಿರ್ಮಾಪಕ ಡಾ.ಎಸ್.ವೆಂಕಟೇಶ್ ಮತ್ತು ಫೌಂಡೇಷನ್ ಸಂಸ್ಥಾಪಕ ರಾಬರ್ಟ್ ಇ.ಕವಗ್ರಾಗ್ ಉಪಸ್ಥಿತರಿದ್ದರು.



ಮೈಸೂರಿನ ಪತ್ರಿಕಾ ಹಾಗೂ ವನ್ಯಜೀವಿ ಛಾಯಾಗ್ರಾಹಕ ಎಸ್.ಆರ್.ಮಧುಸೂದನ್ ಅವರಿಗೆ ವನ್ಯಜೀವಿ ಹಾಗೂ ಟ್ರಾವೆಲ್ ವಿಭಾಗದಲ್ಲಿ ಎಫ್.ಐ.ಪಿ ಹಾನರರಿ ಮೆಂಷನ್ ಅವಾರ್ಡ್ ದೊರೆತ್ತಿದ್ದು, ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಗ್ಯಾಲರಿಯಲ್ಲಿ ಯೂಥ್ ಫೋಟೋಗ್ರಾಫಿಕ್ ಸೊಸೈಟಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರ ಅಡಿಷನಲ್ ಚೀಫ್ ಸೆಕ್ರೆಟರಿ ಶಾಲಿನಿ ರಜನೀಶ್ ಪ್ರಶಸ್ತಿ ವಿತರಿಸಿದರು. ಚಿತ್ರದಲ್ಲಿ ವೈಪಿಎಸ್ ಅಧ್ಯಕ್ಷ ಮಂಜು ವಿಕಾಸ್ ಶಾಸ್ತ್ರಿ ಸಲೂನ್ ಅಧ್ಯಕ್ಷೆ ಪ್ರೇಮ ಕಾಕಡೆ, ಅನಿತಾ ಮೈಸೂರು ಅವರನ್ನು ಕಾಣಬಹುದು.

ಹೈಕೋರ್ಟ್ ಸ್ವಾಧೀನಕ್ಕೆ ಕೆಆರ್ ಮಿಲ್‌ನ 8.02 ಎಕರೆ ಹೆಚ್ಚುವರಿ ಭೂಮಿ; ಫಲಕ ಅಳವಡಿಕೆ



ಮೈಸೂರು, ಜು. 16– ಮೈಸೂರಿನ ಕೃಷ್ಣರಾಜೇಂದ್ರ ಮಿಲ್ಸ್‌ಗೆ ಸೇರಿದ್ದ 8 ಎಕರೆ 2 ಗುಂಟೆ ಹೆಚ್ಚುವರಿ ಜಮೀನು ಹೈಕೋರ್ಟ್ ಸ್ವಾಧೀನದಲ್ಲಿದೆ ಎಂದು ಕೋರ್ಟ್‌ನ ಲಿಕ್ವಿಡೇಟರ್ ವಸಂತಕುಮಾರ್ ಅವರು ಪೊಲೀಸರ ಸಹಕಾರದೊಂದಿಗೆ ಸಂಬಂಧಪಟ್ಟ ಸ್ಥಳದಲ್ಲಿ ಶುಕ್ರವಾರ ಫಲಕವನ್ನು ಅಳವಡಿಸಿದ್ದಾರೆ.

ಅಟ್ಲಾಂಟಿಕ್ ಸ್ಪಿನ್ನಿಂಗ್ ಮಿಲ್‌ನವರಿಗೆ ಕೆ.ಆರ್.ಮಿಲ್ ಆಸ್ತಿಯನ್ನು ಮಾರಾಟ ಮಾಡುವಾಗ ಕೆಎಸ್‌ಐಐಡಿಸಿ 8 ಎಕರೆ 2 ಗುಂಟೆ ಹೆಚ್ಚುವರಿಯಾಗಿ ಮಾರಾಟ ಮಾಡಿದೆ ಎಂದು ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಹೆಚ್ಚುವರಿ ಜಮೀನಿಗೆ ಸಂಬಂಧಿಸಿದಂತೆ ಅಟ್ಲಾಂಟಿಕ್ ಸ್ಪಿನ್ನಿಂಗ್ ಮಿಲ್‌ನವರಿಂದ ಈ ಆಸ್ತಿಯನ್ನು ಖರೀದಿಸಿದ್ದ ಸನ್ಸಾರ್ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯೊಂದನ್ನು ಹೈಕೋರ್ಟ್ ವಜಾ ಮಾಡಿ ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಂತೆ ಲಿಕ್ವಿಡೇಟರ್‌ಗೆ ಸೂಚಿಸಿತ್ತು.

ಅದರಂತೆ ಶುಕ್ರವಾರ ಮೈಸೂರಿಗೆ ಆಗಮಿಸಿದ ಲಿಕ್ವಿಡೇಟರ್ ವಸಂತಕುಮಾರ್ ಅವರು ಜೂನಿಯರ್ ಟೆಕ್ನಿಕಲ್ ಅಸಿಸ್ಟೆಂಟ್ ಹೆಚ್. ಮಂಜುನಾಥ್ ಎನ್.ಆರ್. ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಸಿಡಿ ಸೇಫ್ಟಿ ಅಂಡ್ ಸೆಕ್ಯೂರಿಟಿ ಸರ್ವಿಸಸ್‌ನ ಸೂಪರ್‌ವೈಸರ್ ಸಂಜೀವ್ ಪವಾರ್ ಸಮ್ಮುಖದಲ್ಲಿ ಫಲಕವನ್ನು ಅಳವಡಿಸಿದರು.

ಈ ವೇಳೆ ಹಿರಿಯ ನಾಗರಿಕ ಕಾರ್ಮಿಕ ಒಕ್ಕೂಟ ಕೃಷ್ಣರಾಜೇಂದ್ರ ಮಿಲ್ಸ್ ಸಾರ್ವಜನಿಕ ಹಿತಾಸಕ್ತಿ ಸಂಘಟನೆಯ ವೈ.ರಘು, ಎನ್. ಸ್ವಾಮಿ, ಹೆಚ್.ಆರ್.ನಾಗರಾಜು, ಆರ್. ಚಂದ್ರಣ್ಣ, ಅಕ್ರಂ, ನಾಗರಾಜು ಅವರುಗಳು ಉಪಸ್ಥಿತರಿದ್ದು ಈ ಪ್ರಕ್ರಿಯೆಗೆ ಸಾಕ್ಷೀಭೂತರಾದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಂಘಟನೆಯ ಪ್ರಮುಖರು ಕೆ.ಆರ್. ಮಿಲ್‌ನ 8.02 ಎಕರೆ ಹೆಚ್ಚುವರಿ ಜಮೀನು ಲಿಕ್ವಿಡೇಟರ್ ಸ್ವಾಧೀನಕ್ಕೆ ನೀಡಿ ಹೈಕೋರ್ಟ್ 2012ರಲ್ಲಿ ತೀರ್ಪು ನೀಡಿತ್ತು. ಹೀಗಿದ್ದರೂ ಅಟ್ಲಾಂಟಿಕ್ ಸ್ಪಿನ್ನಿಂಗ್ ಮಿಲ್‌ನವರು ಮರುಪರಿಶೀಲನೆ ಅರ್ಜಿ ಸಲ್ಲಿಸಿದ ಕಾರಣ ವಿಳಂಬವಾದರೂ ಕಾರ್ಮಿಕರಿಗೆ ಜಯ ದೊರೆತಿದೆ. ಕೆ.ಆರ್. ಮಿಲ್‌ನ ಮಾಜಿ ನೌಕರರು ಮಧ್ಯವರ್ತಿಗಳ ಊಹಾಪೋಹದ ಮಾತುಗಳಿಗೆ ಕಿವಿಗೊಡದೆ ಲಿಕ್ವಿಡೇಟರ್ ಅವರ ಕಾನೂನಾತ್ಮಕ ಹೋರಾಟಕ್ಕೆ ಸಹಕರಿಸಬೇಕು ಎಂದು ಕೋರಿದ್ದಾರೆ.

ಖದೀಮನ ಬಂಧನ; 10 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ



ಮೈಸೂರು, ಜು.16(ಎಸ್‌ಬಿಡಿ)– ಮೈಸೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ಬೀಗ ಹಾಕಿದ್ದ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಖದೀಮನನ್ನು ವಿಜಯನಗರ ಠಾಣೆ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ.

ಮೈಸೂರಿನ ಲಲಿತಾದ್ರಿಪುರಂನಲ್ಲಿ ಬಾಡಿಗೆ ಮನೆಯಲ್ಲಿದ್ದ ಬೆಂಗಳೂರು ರಾಮಚಂದ್ರಪುರದ ಮಂಜುನಾಥ ಅಲಿಯಾಸ್ ಕೋಳಿ ಫಯಾಜ್ ಅಲಿಯಾಸ್ ಅಭಿ(35) ಬಂಧಿತನಾಗಿದ್ದು, ಈತನಿಂದ ಸುಮಾರು 10 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಈತನ ವಿರುದ್ಧ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ 30ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಮೈಸೂರಲ್ಲಿ ಕೈಚಳಕ: ಮೈಸೂರಿನ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದೆರಡು ತಿಂಗಳಿಂದ ಬೀಗ ಹಾಕಿದ್ದ ಮನೆಗಳಲ್ಲಿ ಕಳ್ಳತನವಾಗುತ್ತಿತ್ತು. ಬೀಗ ಒಡೆದು ಮನೆಗೆ ನುಗ್ಗಿ ಚಿನ್ನಾಭರಣ ದೋಚುವ ಸರಣಿ ಪ್ರಕರಣಗಳು ಪೊಲೀಸರ ನಿದ್ದೆಗೆಡಿಸಿದ್ದವು. ಈ ಬಗ್ಗೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಅಪರಾಧ ಮತ್ತು ಸಂಚಾರ ವಿಭಾಗದ ಎಸಿಪಿ ಎಸ್.ಜಾಹ್ನವಿ ಅವರ ಗಮನಕ್ಕೆ ತಂದು ವಿಜಯನಗರ ಉಪ ವಿಭಾಗದ ಎಸಿಪಿ ಜಿ.ಎಸ್.ಗಜೇಂದ್ರ ಪ್ರಸಾದ್, ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಬಿ.ಎಸ್.ರವಿಶಂಕರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿ, ಸೂಕ್ತ ಮಾರ್ಗದರ್ಶನ ನೀಡಿದ್ದರು.

ಬಳಿಕ ಕಾರ್ಯಾಚರಣೆ ಆರಂಭಿಸಿದ ವಿಶೇಷ ತಂಡ, ಮನೆ ಕಳ್ಳತನಕ್ಕೆ ಸಂಬಂಧಿಸಿದಂತೆ ಮಾಹಿತಿ ಕಲೆಹಾಕಿತು. ಲಭ್ಯವಾದ ತಾಂತ್ರಿಕ ಕುರುಹು ಹಾಗೂ ಬಾತ್ಮೀದಾರರ ಮಾಹಿತಿ ಆಧರಿಸಿ ಜು.12ರಂದು ಬೆಳಗ್ಗೆ ಮೈಸೂರಿನಿಂದ ಹೊರಟ ವಿಶೇಷ ತಂಡ, ಬೆಂಗಳೂರು ಬನ್ನೇರುಘಟ್ಟ ಮುಖ್ಯ ರಸ್ತೆಯ ಕಮ್ಮನಹಳ್ಳಿ ಬಳಿಯ ನಿರ್ಮಾಣ ಹಂತದ ಲೇಔಟ್‌ನಲ್ಲಿದ್ದ ಮಂಜುನಾಥ ಅಲಿಯಾಸ್ ಕೋಳಿ ಫಯಾಜ್‌ನನ್ನು ವಶಕ್ಕೆ ಪಡೆಯಿತು.

ನಂತರ ವಿಚಾರಣೆಗೆ ಒಳಪಡಿಸಿದಾಗ ಆತನ ವಿರುದ್ಧ ಬೆಂಗಳೂರು ನಗರದಲ್ಲಿ 30ಕ್ಕೂ ಹೆಚ್ಚು ಪ್ರಕರಣಗಳಿದ್ದು, 4 ತಿಂಗಳ ಹಿಂದೆಯಷ್ಟೇ ಬೆಂಗಳೂರು ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿದ್ದ. ಬಳಿಕ ತನ್ನ ದುಷ್ಕೃತ್ಯಕ್ಕೆ ಮೈಸೂರಿಗೆ ಆಗಮಿಸಿ ಲಲಿತಾದ್ರಿಪುರಂನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದ. ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ 3 ಮನೆಗಳ ಬೀಗ ಒಡೆದು 190 ಚಿನ್ನಾಭರಣ ಹಾಗೂ 20 ಸಾವಿರ ರೂ. ಹಣ ಕಳ್ಳತನ ಮಾಡಿದ್ದಾನೆಂದು ಪೊಲೀಸರಿಗೆ ಗೊತ್ತಾಗಿದೆ.

ಕೋಲಾರದಲ್ಲಿ ಮಾರಿದ್ದ: ಕಳ್ಳತನ ಮಾಡಿದ್ದ ಚಿನ್ನಾಭರಣದಲ್ಲಿ 4 ಬಳೆಗಳನ್ನು ಕೋಲಾರದ ಚಿನ್ನದ ಅಂಗಡಿಯೊಂದರಲ್ಲಿ ಮಾರಾಟ ಮಾಡಿದ್ದ ಖದೀಮ, ಉಳಿದ ಆಭರಣಗಳನ್ನು ಮೈಸೂರಿನ ಬಾಡಿಗೆ ಮನೆಯಲ್ಲಿಟ್ಟಿದ್ದ. ಈ ಬಗ್ಗೆ ವಿಚಾರಣೆಯಲ್ಲಿ ಮಾಹಿತಿ ದೊರೆತ ಬಳಿಕ, ಎಲ್ಲಾ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಇನ್ಸ್‌ಪೆಕ್ಟರ್ ಬಿ.ಎಸ್.ರವಿಶಂಕರ ನೇತೃತ್ವದ ವಿಶೇಷ ತಂಡದಲ್ಲಿ ಸಬ್‌ಇನ್ಸ್‌ಪೆಕ್ಟರ್ ಕೆ.ವಿಶ್ವನಾಥ, ಅಶ್ವಿನಿ ಅನಂತಪೂರ, ಸಿಬ್ಬಂದಿ ಶಂಕರ್, ಲೋಕೇಶ್, ಪ್ರದೀಪ್ ಕುಮಾರ್, ತಿಲಕ್ ಕುಮಾರ್, ಅಣ್ಣಪ್ಪ ನಂದೀಶ್, ಮಂಜುನಾಥ, ಸಂಜಯ್ ಹಾಗೂ ಸಿಡಿಆರ್ ವಿಭಾಗದ ಕುಮಾರ್ ಇದ್ದರು.

ಕೋಮು ಭಾವನೆ ಮೂಡಿಸುವ ಬಿಜೆಪಿ ಬಗ್ಗೆ ಎಚ್ಚರಿಕೆಯಿಂದ ಇರಿ

ಮೈಸೂರಲ್ಲಿ ಅಭಿನಂದನೆ ಸ್ವೀಕರಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ ಸಲಹೆ



ಸಚಿವರಾದ ನಂತರ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಈಶ್ವರ ಖಂಡ್ರೆ ಅವರನ್ನು ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯ ಕುಮಾರ್, ಮಾಜಿ ಮೇಯರ್‌ಗಳಾದ ದಕ್ಷಿಣಾಮೂರ್ತಿ, ಅಯೂಬ್ ಖಾನ್ ಇನ್ನಿತರರನ್ನು ಕಾಣಬಹುದು.

ಮೈಸೂರು, ಜು.16(ಬಿಎಲ್‌ಯು)– ರಾಜಕೀಯ ಲಾಭಕ್ಕಾಗಿ ಬಿಜೆಪಿಯವರು ಧರ್ಮ ಹಾಗೂ ಜಾತಿಗಳ ನಡುವೆ ಕೋಮು ಭಾವನೆ ಕೆರಳಿಸಿ ಅಶಾಂತಿ ವಾತಾವರಣ ನಿರ್ಮಾಣ ಮಾಡುತ್ತಿದ್ದಾರೆ. ಈ ಹಿನ್ನೆಲೆ ಎಚ್ಚರಿಕೆಯಿಂದ ಇರಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ದುರಾಡಳಿತ ಹಾಗೂ ಭ್ರಷ್ಟಾಚಾರ ಎಸಗಿದ ಬಿಜೆಪಿಯವರನ್ನು ಕರ್ನಾಟಕದ ಜನತೆ ಅಧಿಕಾರದಿಂದ ದೂರ ಇಟ್ಟಿದ್ದಾರೆ. ಧರ್ಮ ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ಕೋಮು ಭಾವನೆ ಮೂಡಿಸಿ ರಾಜಕೀಯ ಲಾಭ ಪಡೆದ ಬಿಜೆಪಿ ಈ ಹಿಂದೆ ಅಧಿಕಾರ ಪಡೆದಿತ್ತು. ಈಗ ಅಧಿಕಾರ ಹೋದ ಮೇಲೆ ಈಗ ಮತ್ತೆ ತಮ್ಮ ಹಳೇ ವರಸೆ ತೆಗೆದಿದ್ದಾರೆ. ಈ ಹಿನ್ನೆಲೆಯಲ್ಲಿ ಜನರು ಎಚ್ಚರಿಕೆಯಿಂದ ಇರಬೇಕು ಎಂದು ಈಶ್ವರ ಖಂಡ್ರೆ ಹೇಳಿದರು.

ಬಡವರ ಹಸಿವು ನೀಗಿಸಲು ಕಾಂಗ್ರೆಸ್ ಸರ್ಕಾರ ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿ ನೀಡಲು ಬದ್ಧವಾಗಿದೆ. ಆದರೆ ಉಗ್ರಾಣದಲ್ಲಿ ಅಕ್ಕಿ ಕೊಳೆಯುತ್ತಿದ್ದರೂ ಕೇಂದ್ರ ಸರ್ಕಾರ ಅಕ್ಕಿ ನೀಡುತ್ತಿಲ್ಲ. ಈ ಕಾರಣದಿಂದಲೇ ಫಲಾನುಭವಿಗಳ ಖಾತೆಗೆ ಹಣ ನೀಡುತ್ತಿದ್ದೇವೆ. ಇದರಿಂದ ಕರ್ನಾಟಕದ 1.28 ಕೋಟಿ ಜನರು ಇದರ ಉಪಯೋಗ ಪಡೆಯುತ್ತಾರೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಅನುಷ್ಠಾನ ಮಾಡುತ್ತದೆ. ಜುಲೈ 19 ರಂದು ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುತ್ತಿದ್ದೇವೆ. ಪದವೀಧರರಿಗೆ 3 ಸಾವಿರ ರೂಪಾಯಿ ನಿರುದ್ಯೋಗ ಭತ್ಯೆ ನೀಡುತ್ತಿದ್ದೇವೆ. ಇದಕ್ಕಾಗಿ 52 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಐತಿಹಾಸಿಕವಾದ ಈ ವಿಶಿಷ್ಟ ಗ್ಯಾರಂಟಿ ಸ್ಕೀಂ ಬಗ್ಗೆ ಇಡೀ ದೇಶದಲ್ಲೆ ಚರ್ಚೆ ನಡೆಯುತ್ತಿದೆ ಎಂದು ಹೇಳಿದರು.

ಬಿಜೆಪಿಯವರು ಉದ್ಯಮಿಗಳಾದ ಅಂಬಾನಿ ಹಾಗೂ ಅದಾನಿಗೆ ರತ್ನಗಂಬಳಿ ಹಾಸಿದ್ದಾರೆ. ಬಡ ಜನರ ಹಣವನ್ನು ದೋಚಿ ಅವರಿಗೆ ನೀಡುತ್ತಿದ್ದಾರೆ. ಇದರಿಂದ ಬಡವರ ಹಣ ಶ್ರೀಮಂತರ ಕಿಸೆ ಸೇರುತ್ತಿದೆ. ಆದರೆ ಕಾಂಗ್ರೆಸ್ ಸರ್ಕಾರ ಬಡ ಜನರ ಶ್ರೇಯೋಭಿವೃದ್ಧಿಗೆ ಯೋಜನೆ ಅನುಷ್ಠಾನಗೊಳಿಸುತ್ತಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ನನಗೆ ಅರಣ್ಯ ಖಾತೆಯನ್ನು ನೀಡಲಾಗಿದ್ದು, ಅತಿ ಹೆಚ್ಚು ಅರಣ್ಯ ಇರುವ ಹಳೆ ಮೈಸೂರು ಹಾಗೂ ಮಲೆನಾಡು ಪ್ರದೇಶದಲ್ಲಿ ನನ್ನ ಕಾರ್ಯ ನಿರ್ವಹಣೆ ಇದೆ. ಈ ವಾರದಲ್ಲಿ 5 ಕೋಟಿ ಸಸಿ ನೆಡುವ ಗುರಿ ಇಟ್ಟುಕೊಂಡಿದ್ದೇವೆ. ಈಗಾಗಲೇ 1.22 ಕೋಟಿ ಸಸಿ ನೆಟ್ಟಿದ್ದೇವೆ ಎಂದು ಹೇಳಿದರು.

ಅರಣ್ಯ ಕಾಯ್ದೆಯಲ್ಲಿ ಬಿಗಿಯಾದ ಕಾನೂನು ಇದೆ. ಈ ನಿಟ್ಟಿನಲ್ಲಿ ಅರಣ್ಯ ಒತ್ತುವರಿಯನ್ನು ಕೂಡಲೆ ತೆರವುಗೊಳಿಸುತ್ತೇವೆ. ಅಪಾಯಕಾರಿಯಾದ ಪ್ಲಾಸ್ಟಿಕ್ ನಿಷೇಧಗೊಳಿಸುತ್ತೇವೆ. ಪಕ್ಷಿ ಹಾಗೂ ಪಶು ಸಂಕುಲವನ್ನು ಸಂರಕ್ಷಿಸುತ್ತೇವೆ. ಪ್ರಕೃತಿ ಇದ್ದರೆ ಮನುಷ್ಯನ ಬದುಕು ಸಾಧ್ಯ ಎಂಬ ವಿಚಾರದ ಬಗ್ಗೆ ಪರಿಣಾಮಕಾರಿ ಜಾಗೃತಿ ಕಾರ್ಯಕ್ರಮ ರೂಪಿಸುತ್ತೇವೆ ಎಂದು ಈಶ್ವರ ಖಂಡ್ರೆ ತಿಳಿಸಿದರು. ಸಚಿವರಾದ ನಂತರ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಈಶ್ವರ ಖಂಡ್ರೆ ಅವರನ್ನು ಕಾಂಗ್ರೆಸ್ ಕಚೇರಿಯಲ್ಲಿ ಸನ್ಮಾನಿಸಲಾಯಿತು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯ ಕುಮಾರ್, ಮಾಜಿ ಮೇಯರ್‌ಗಳಾದ ದಕ್ಷಿಣಾಮೂರ್ತಿ, ಅಯೂಬ್ ಖಾನ್, ಕೆಪಿಸಿಸಿ ಕಾರ್ಯದರ್ಶಿ ಚಂದ್ರಮೌಳಿ, ಕೆಪಿಸಿಸಿ ಸದಸ್ಯ ಭಾಸ್ಕರ್‌ಗೌಡ, ಶಿವನಾಗಪ್ಪ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ವಿಧಾನಸಭಾ ಚುನಾವಣೆಯ ಗೆಲುವಿನ ಹುಮ್ಮಸ್ಸಿನಲ್ಲಿ ಲೋಕಸಭಾ ಚುನಾವಣೆಯ ಸವಾಲು ಮರೆಯಬೇಡಿ

ಸಚಿವ ಈಶ್ವರ ಖಂಡ್ರೆ ಕಿವಿಮಾತು

ಮೈಸೂರು, ಜು.16(ಬಿಎಲ್‌ಯು)– ವಿಧಾನಸಭಾ ಚುನಾವಣೆಯ ಭರ್ಜರಿ ಗೆಲುವಿನ ಹುಮ್ಮಸ್ಸಿನಲ್ಲಿ ಮುಂದಿನ ಲೋಕಸಭಾ ಚುನಾವಣೆಯ ಸವಾಲನ್ನು ಮರೆಯಬೇಡಿ ಎಂದು ಅರಣ್ಯ ಸಚಿವರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಕಾಂಗ್ರೆಸ್ ಕಾರ್ಯಕರ್ತರಿಗೆ ಕಿವಿಮಾತು ಹೇಳಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮಾತನಾಡಿದ ಅವರು, ಇನ್ನು ಏಳೆಂಟು ತಿಂಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಇನ್ನು ಮೂರ್ನಾಲ್ಕು ತಿಂಗಳಲ್ಲಿ ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆ ಎದುರಾಗಲಿದೆ. ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದೆ ಎಂಬ ಹುಮ್ಮಸ್ಸಿನಲ್ಲಿ ಮೈ ಮರೆಯಬೇಡಿ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿರುವ ಕಾರಣ ಇನ್ನು ನಮ್ಮ ಕೆಲಸ ಮುಗಿಯಿತು ಎಂದು ಕೂರಬೇಡಿ. ಮುಂಬರುವ ಲೋಕಸಭಾ ಚುನಾವಣೆ ಸೇರಿದಂತೆ ಇತರೆ ಚುನಾವಣೆಯ ಸವಾಲನ್ನು ಸಮರ್ಥವಾಗಿ ಎದುರಿಸಿ ಅಲ್ಲೂ ಕೂಡ ಕಾಂಗ್ರೆಸ್ ಗೆಲ್ಲಿಸಿ ಎಂದು ಕಾರ್ಯಕರ್ತರಿಗೆ ಸಚಿವರು ಸಲಹೆ ನೀಡಿದರು.

ಇಡೀ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಶೇ. 44ರಷ್ಟು ಮತ ಬಂದಿದ್ದರೆ, ಮೈಸೂರು ಜಿಲ್ಲೆಯಲ್ಲಿ ಶೇ.62ರಷ್ಟು ಮತ ಬಂದಿದೆ. ಕಾಂಗ್ರೆಸ್ ಪಕ್ಷದಲ್ಲಿ ನಿಜವಾಗಿಯೂ ನಿಷ್ಠೆ, ಸಮರ್ಥ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದ ಕಾರ್ಯಕರ್ತರನ್ನು ವಿಧಾನಪರಿಷತ್ ಸ್ಥಾನಗಳು, ನಿಗಮ ಮಂಡಳಿ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಗೆ ನಾಮ ನಿರ್ದೇಶನ ಮಾಡಲಾಗುವುದು ಎಂದು ಭರವಸೆ ನೀಡಿದರು. ತಮ್ಮ ಜೊತೆ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದ ದಿವಂಗತ ಧ್ರುವನಾರಾಯಣ್ ಅವರ ಪಕ್ಷ ಸಂಘಟನೆ ಹಾಗೂ ಸಾಮಾಜಿಕ ಸೇವೆಗಳ ಬಗ್ಗೆ ಈಶ್ವರ ಖಂಡ್ರೆ ಪ್ರಶಂಸೆ ವ್ಯಕ್ತಪಡಿಸಿದರು. ಇದೇ ವೇಳೆ ಮಾತನಾಡಿದ ಶಾಸಕ ದರ್ಶನ್ ಧ್ರುವನಾರಾಯಣ್, ಪಕ್ಷ ಸಂಘಟನೆಗಾಗಿ ತಮ್ಮ ತಂದೆಯ ಶ್ರಮವನ್ನು ನೆನೆದರು.



ಊಟಿಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ನಡೆಯುತ್ತಿರುವ ಅಖಿಲ ಭಾರತೀಯ ಪ್ರಾಂತೀಯ ಪ್ರಚಾರಕರ ಬೈಠಕ್‌ನಲ್ಲಿ ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸರಸಂಘ ಚಾಲಕರಾದ ಮೋಹನ್ ಭಾಗವತ್ ಜೀ ಹಾಗೂ ಸರ ಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆ ಅವರನ್ನು ಸನ್ಮಾನಿಸಿದರು.

ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್

ಮೈಸೂರು,ಜು.16–ಮೈಸೂರು ವಿಭಾಗದೊಳಗಿನ ಸರ್ಕಾರಿ ಪ್ರಾಥಮಿಕ ಶಾಲಾ ಮತ್ತು ಪ್ರೌಢಶಾಲಾ ಶಿಕ್ಷಕರ ಕೋರಿಕೆ ಮತ್ತು ಪರಸ್ಪರ ವರ್ಗಾವಣೆ ಸಂಬಂಧ ಅಂತಿಮ ಆದ್ಯತಾ ವರ್ಗಾವಣೆ ಪಟ್ಟಿಯಲ್ಲಿರುವ ಅರ್ಹ ಶಿಕ್ಷಕ ವೃಂದದವರಿಗೆ ಸ್ಥಳ ಆಯ್ಕೆಗಾಗಿ ಶಾಲಾ ಶಿಕ್ಷಣ ಇಲಾಖೆಯ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ವಿಭಾಗೀಯ ಕಾರ್ಯದರ್ಶಿ ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಆನ್‌ಲೈನ್ ಮೂಲಕ ಕೌನ್ಸಿಲಿಂಗ್ ನಡೆಸಲಾಗುವುದು.

ಕೌನ್ಸಿಲಿಂಗ್ ಆದ್ಯತೆ ಕ್ರಮಸಂಖ್ಯೆ ಆಧರಿಸಿ ನಿಗದಿಪಡಿಸಿದ ದಿನಾಂಕದಂದು ಸಂಬಂಧಿಸಿದ ಶಿಕ್ಷಕರು ಬೆಳಗ್ಗೆ 9.30ಕ್ಕೆ ಕೌನ್ಸಿಲಿಂಗ್‌ಗೆ ಹಾಜರಾಗಬೇಕು. ಜು.18ರಂದು ಪ್ರಾಥಮಿಕ ಶಾಲಾ ವಿಭಾಗದ ವಿಶೇಷ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು, ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರಿಗೆ ಮತ್ತು ಜು.19ರಂದು ಪ್ರಾಥಮಿಕ ಶಾಲಾ ವಿಭಾಗದ ಸಹ ಶಿಕ್ಷಕರ ಕೋರಿಕೆ ವರ್ಗಾವಣೆ ಸಂಬಂಧ ಕೌನ್ಸಿಲಿಂಗ್ ನಡೆಸಲಾಗುವುದು. ಪ್ರೌಢಶಾಲಾ ವಿಭಾಗಕ್ಕೆ ಸಂಬಂಧಿಸಿದಂತೆ ಜು.21ರಂದು ವಿಶೇಷ ಶಿಕ್ಷಕರು, ದೈಹಿಕ ಶಿಕ್ಷಕರು ಹಾಗೂ ಸಹ ಶಿಕ್ಷಕರಿಗೆ, ಜು.22 ಮತ್ತು 24ರಂದು ಸಹ ಶಿಕ್ಷಕರಿಗೆ ಕೋರಿಕೆ ವರ್ಗಾವಣೆ ಸಂಬಂಧ ಕೌನ್ಸಿಲಿಂಗ್ ನಡೆಸಲಾಗುವುದು. ಪರಸ್ಪರ ವರ್ಗಾವಣೆಗೆ ಸಂಬಂಧಿಸಿದಂತೆ ಜುಲೈ 25 ರಂದು ಪ್ರಾಥಮಿಕ ಸಹ ಶಿಕ್ಷಕರು ಮತ್ತು ಪ್ರೌಢಶಾಲಾ ಸಹ ಶಿಕ್ಷಕರ ಕೌನ್ಸಿಲಿಂಗ್ ನಡೆಸಲಾಗುತ್ತದೆ. ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳು ಆನ್‌ಲೈನ್ ಮೂಲ ವರ್ಗಾವಣೆ ಅರ್ಜಿ, ದೃಢೀಕೃತ ಭಾವಚಿತ್ರ ಸಹಿತವಿರುವ ಮೂಲ ಸೇವಾ ದೃಢೀಕರಣ ಪತ್ರ, ವರ್ಗಾವಣೆ ಅರ್ಜಿಯಲ್ಲಿ ಕೋರಿರುವ ಆದ್ಯತೆಗೆ ಸಂಬಂಧಿಸಿದಂತೆ ಪೂರಕ ಮೂಲ ದಾಖಲಾತಿಗಳನ್ನು ಕೌನ್ಸಿಲಿಂಗ್ ದಿನದಂದು ಸಲ್ಲಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 17 ಜುಲೈ 2023

ಮಾದಕ ವಸ್ತು ಸೇವನೆ, ಮಾರಾಟ ಮಾಡುತ್ತಿದ್ದ 25 ಮಂದಿ ಬಂಧನ

• ಕೊಡಗು ಜಿಲ್ಲೆಯ ಪೊಲೀಸರಿಂದ ಭರ್ಜರಿ ಕಾರ್ಯಾಚರಣೆ • ಗಾಂಜಾ, 9 ಸಂಖ್ಯೆಯ ಐಎಸ್‌ಡಿ ವಶ

ಮಡಿಕೇರಿ, ಜು.16– ಕೊಡಗು ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರಾಟ ಮತ್ತು ಸೇವನೆಯ ಪ್ರತ್ಯೇಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ 25 ಮಂದಿಯನ್ನು ಬಂಧಿಸಿ, ಒಟ್ಟು 1 ಕೆ.ಜಿ.702 ಗ್ರಾಂ ಗಾಂಜಾ ಮತ್ತು 9 ಸಂಖ್ಯೆಯ ನಿಷೇಧಿತ ಐಎಸ್‌ಡಿ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ.



ಕನ್ನಂಡಬಾಣೆ ರಸ್ತೆ ಜಂಕ್ಷನ್‌ನಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ಮೈಸೂರು ಉದಯಗಿರಿ ನಿವಾಸಿ ಆಲಿಂ ಅಹಮದ್(36), ಹಿಲ್ ರಸ್ತೆ ನಿವಾಸಿ ಎಂ.ಐ.ಮೊಹಿಸಿನ್ (45) ಎಂಬವರನ್ನು ಬಂಧಿಸಲಾಗಿದೆ. ಆರೋಪಿಗಳ ಬಳಿಯಿಂದ 728 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಮಹಿಳಾ ಸಮಾಜದ ಬಳಿ ನಿಷೇಧಿತ ಮಾದಕ ವಸ್ತು ಸೇವಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ನಿವಾಸಿಗಳಾದ ಎಂ.ಎ.ಸಾಗರ್(22) ಮತ್ತು ಎಂ.ಎಸ್.ರೆಹಮಾನ್(31) ಹಾಗೂ ಚೇತನ್.ಕೆ.(23) ಎಂಬವರುಗಳನ್ನು ಬಂಧಿಸಲಾಗಿದೆ. ಮಡಿಕೇರಿಗೆ ಪ್ರವಾಸಕ್ಕೆಂದು ಆಗಮಿಸಿ ಮಕ್ಕಂದೂರು ಬಳಿಯ ಹೋಂಸ್ಟೇ ಒಂದರಲ್ಲಿ ಮಾದಕ ವಸ್ತು ಮಾರಾಟ ಮತ್ತು ಬಳಕೆ ಕುರಿತು ನಗರದ ಸೆನ್ ಪೊಲೀಸ್ ಠಾಣೆಗೆ ಖಚಿತ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿ ಮಂಗಳೂರು ಮೂಲದ ರಿತಿಕ್(23), ವಿಘ್ನೇಶ್ ಅಜೀತ್ ಅಂಚನ್(21), ಸುಮನ್ ಹರ್ಷಿತ್ (26), ಚಿರಾಗ್ ಸಾನಿಲ್(24), ಮಂಜುನಾಥ್(30), ಲತೀಶ್ ನಾಯಕ್(32), ಸಚಿನ್(26), ರಾಹುಲ್(26), ಪ್ರಜ್ವಲ್ (32), ಅವಿನಾಶ್(28), ಪ್ರತೀಕ್ ಕುಮಾರ್ (27), ಧನುಷ್(28), ರಾಜೇಶ್(45), ದಿಲ್ ರಾಜು(30) ಹಾಗೂ ಮಡಿಕೇರಿ ನಿವಾಸಿ ಹೋಂ ಸ್ಟೇ ಮಧ್ಯವರ್ತಿ ಬಿ.ಗಣೇಶ್(47), ಮತ್ತು ಹೋಂಸ್ಟೇ ಮಾಲೀಕ ಸದಾಶಿವ ಬಿ.ಹೆಚ್.(31) ಎಂಬವರನ್ನು ಬಂಧಿಸಲಾಗಿದೆ ಬಂಧಿತ ಆರೋಪಿಗಳಿಂದ 414 ಗ್ರಾಂ ಗಾಂಜಾ ಮತ್ತು 9 ಸಂಖ್ಯೆಯ ನಿಷೇಧಿತ ಐಎಸ್‌ಡಿ ಮಾದಕ ವಸ್ತುವನ್ನು ವಶಕ್ಕೆ ಪಡೆಯಲಾಗಿದೆ.

ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಚೆನ್ನಯ್ಯನಕೋಟೆ ನಿವಾಸಿ ಇಮ್ರಾನ್(31) ಎಂಬಾತನನ್ನ ಬಂಧಿಸಿ ಆತನ ಬಳಿಯಿಂದ 190 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಗೋಣಿಕೊಪ್ಪ ಕಾವೇರಿ ಕಾಲೇಜು ರಸ್ತೆ ಮೂಲಕ ಮಾರಾಟ ಮಾಡುವ ಸಲುವಾಗಿ ಗಾಂಜಾ ಸಾಗಿಸುತ್ತಿದ್ದ 3 ಮಂದಿ ಆರೋಪಿಗಳನ್ನು ಮಾಲು ಸಹಿತ ಬಂಧಿಸಲಾಗಿದೆ ಅಲ್ಲಿನ ನಿವಾಸಿಗಳಾದ ಎಂ.ಎಂ. ಶಮೀರ್ (37), ಎಂ.ಜಬ್ಬಾರ್(23) ಮತ್ತು ನಿಸಾರ್(37) ಎಂಬವರನ್ನು ಬಂಧಿಸಿ 370 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ಕಾನೂನು ಕ್ರಮದ ಎಚ್ಚರಿಕೆ: ಜಿಲ್ಲೆ ವ್ಯಾಪ್ತಿಯ ಹೋಂ ಸ್ಟೇ, ರೆಸಾರ್ಟ್, ಲಾಡ್ಜ್‌ಗಳಲ್ಲಿ ಪ್ರವಾಸದ ನಿಮಿತ್ತ ತಂಗಲು ಬರುವ ಪ್ರವಾಸಿಗರು ಮಾದಕ ವಸ್ತು ಬಳಕೆ, ಮಾರಾಟ ಮಾಡುವುದು ಕಂಡು ಬಂದಲ್ಲಿ ಹೋಂ ಸ್ಟೇ, ರೆಸಾರ್ಟ್, ಲಾಡ್ಜ್‌ಗಳ ಮಾಲೀಕರು, ಮಧ್ಯವರ್ತಿಗಳು ಸ್ಥಳೀಯ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಬೇಕು. ಮಾಹಿತಿ ನೀಡದೆ ದಾಳಿ ಸಂದರ್ಭ ಮಾದಕ ವಸ್ತು ಸೇವನೆ, ಮಾರಾಟ ಕಂಡು ಬಂದಲ್ಲಿ ಮಾಲೀಕರು ಹಾಗೂ ಮಧ್ಯವರ್ತಿಗಳ ವಿರುದ್ಧ ಎನ್.ಡಿ.ಪಿ.ಎಸ್. ಕಾಯಿದೆ ಕಲಂ 25ರ ಅಡಿಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಂಡು ಅವುಗಳ ಪರವಾನಗಿ ರದ್ದು ಮಾಡುವುದಾಗಿ ಜಿಲ್ಲಾ ಪೊಲೀಸ್ ಇಲಾಖೆ ಎಚ್ಚರಿಕೆ ನೀಡಿದೆ.

ಕಿರುಗೂರು, ಮಾಯಮುಡಿ ಗ್ರಾಮಗಳಲ್ಲಿ ಹಂದಿಗಳ ಹಾವಳಿ

ಕೈಗೆ ಬಂದ ತುತ್ತು ಬಾಯಿಗೆ ಬಾರದ ಪರಿಸ್ಥಿತಿ ಕೃಷಿಕರಿಗೆ

ಮಡಿಕೇರಿ, ಜು.16– ಪೊನ್ನಂಪೇಟೆ ತಾಲೂಕಿನ ಕಿರುಗೂರು ಹಾಗೂ ಮಾಯ ಮುಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇದೀಗ ಕಾಡುಹಂದಿಗಳ ಉಪಟಳ ಪ್ರಾರಂಭವಾಗಿದೆ. ಕಾಡುಪ್ರಾಣಿಗಳ ಉಪಟಳಕ್ಕೆ ಕೃಷಿಕರು ಹೈರಾಣಾಗಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬಾರದ ಪರಿಸ್ಥಿತಿ ಎದುರಾಗಿದೆ. ಹುಲಿ, ಕಾಡಾನೆ ಸೇರಿದಂತೆ ಕಾಡುಪ್ರಾಣಿಗಳ ಉಪಟಳಕ್ಕೆ ಭತ್ತದ ಗದ್ದೆಗಳಲ್ಲಿ ಕೃಷಿ ಮಾಡುವುದನ್ನೇ ಇತ್ತೀಚಿನ ವರ್ಷಗಳಲ್ಲಿ ಕೈ ಬಿಡಲಾಗುತ್ತಿದ್ದು, ಅಳಿದುಳಿದ ಪ್ರದೇಶಗಳು ಕೂಡ ಭವಿಷ್ಯದ ದಿನಗಳಲ್ಲಿ ಪಾಳು ಬೀಳುವುದು ಖಚಿತವಾಗುತ್ತಿದೆ.

ಕಿರುಗೂರು ಗ್ರಾಮದ ಭತ್ತದ ಗದ್ದೆಗಳಲ್ಲಿ ಸಿದ್ಧಪಡಿಸಿದ್ದ ಭತ್ತದ ಸಸಿ ಮಡಿಗಳನ್ನು ಕಾಡು ಹಂದಿಗಳ ಹಿಂಡು ಸಂಪೂರ್ಣವಾಗಿ ಧ್ವಂಸ ಮಾಡಿವೆ. ಅಲ್ಲಿನ ನಿವಾಸಿಗಳಾದ ಹೆಚ್.ಆರ್. ಹರೀಶ್, ಅಲೆಮಾಡ ಪಿ.ಕಾವೇರಮ್ಮ, ರಾಜು, ಡಿಕ್ಕಿ, ತಮ್ಮಯ್ಯ, ಹೆಚ್.ಎಂ. ಸ್ವಾಮಿ ಎಂಬವರ ಭತ್ತದ ಸಸಿ ಮಡಿಗಳಿದ್ದ ಗದ್ದೆಗೆ ಕಾಡು ಹಂದಿಗಳು ದಾಳಿ ನಡೆಸಿವೆ. ಪರಿಣಾಮ ಸುಮಾರು 16 ರಿಂದ 20 ಕ್ವಿಂಟಾಲ್‌ನಷ್ಟು ಬಿತ್ತನೆ ಮಾಡಿದ್ದ ಬೀಜದ ಭತ್ತಕ್ಕೆ ಹಾನಿಯಾಗಿದೆ.

ಮಾತ್ರವಲ್ಲದೆ ಕಿರುಗೂರು ಗ್ರಾಮದ ಪಿ.ಆರ್. ಮುಕುಂದ ಎಂಬವರ ಕಾಫಿ ತೋಟಕ್ಕೆ ನುಗ್ಗಿದ ಕಾಡುಹಂದಿಗಳ ಹಿಂಡು 100ರಿಂದ 150 ಕಾಳು ಮೆಣಸು ಬಳ್ಳಿಗಳನ್ನು ತಿಂದು ಹಾಕಿ ನಾಶ ಪಡಿಸಿದೆ. ಫಸಲಿಗೆ ಬಂದ ಕಾಳು ಮೆಣಸಿನ ಬಳ್ಳಿಯಾಗಿರುವ ಕಾರಣ ಲಕ್ಷಾಂತರ ರೂ.ಗಳ ಭಾರೀ ನಷ್ಟವಾಗಿದೆ ಮತ್ತೆ ಕಾಳು ಮೆಣಸು ಬಳ್ಳಿ ಬೆಳೆಸಲು ಒಂದಷ್ಟು ವರ್ಷಗಳೇ ಉರುಳಲಿದ್ದು ಆರ್ಥಿಕ ಹೊಡೆತಕ್ಕೆ ಬೆಳೆಗಾರ ತತ್ತರಿಸುವಂತಾಗಿದೆ ಎಂದು ಮುಕುಂದ ಅವರು ಅಳಲು ತೋಡಿಕೊಂಡರು. ಅರಣ್ಯ ಇಲಾಖೆ ಕಾಡುಪ್ರಾಣಿಗಳ ಹಾವಳಿ ತಡೆಯಲು



ಮುಂದಾಗಬೇಕು ಎಂದು ಆಗ್ರಹಿಸಿದರು.

ಘಟನಾ ಸ್ಥಳಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಕೊಡಗು ಜಿಲ್ಲಾ ಘಟಕದ ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಅಲೆಮಾಡ ಮಂಜುನಾಥ, ಪ್ರಮುಖರಾದ ತೀತರಮಾಡ ರಾಜ ಕರುಂಬಯ್ಯ, ಅಲೆಮಾಡ ಕಾರ್ತಿಕ್, ಮಾಯಮುಡಿ ಗ್ರಾಮದ ರೈತ ಸಂಘದ ಅಧ್ಯಕ್ಷ ಪುಚ್ಚಿಮಾಡ ರಾಯ್ ಮಾದಪ್ಪ ಕಾಳಪಂಡ ಗಣೇಶ್, ಅಪ್ಪಚ್ಚೀರ ದೇವಯ್ಯ, ಬಾನಂಡ ರಾಜು ಅವರುಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಘಟನೆ ಕುರಿತು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಪೊನ್ನಂಪೇಟೆ ಉಪವಲಯ ಅರಣ್ಯ ಅಧಿಕಾರಿಯಾದ ದಿವಾಕರ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ರೈತರು ಮತ್ತು ಬೆಳೆಗಾರರು ತಮಗಾದ ನಷ್ಟದ ಕುರಿತು ಅಳಲು ತೋಡಿಕೊಂಡರು.

ಈ ಸಂದರ್ಭ ಮಾತನಾಡಿದ ಅಲೇಮಾಡ ಮಂಜುನಾಥ್, ಭತ್ತದ ಸಸಿ ಮಡಿಗಳಲ್ಲಿ 4.5 ಕ್ವಿಂಟಾಲ್ ಬೀಜ ಬಳಸಿ ಸಸಿ ಮಡಿ ಮಾಡಲಾಗಿತ್ತು. ಕಾಡು ಹಂದಿಗಳು ಸಂಪೂರ್ಣವಾಗಿ ಎಲ್ಲವನ್ನು ನಾಶ ಪಡಿಸಿವೆ. ಮರು ಬಿತ್ತನೆಗೆ ದುಬಾರಿ ವೆಚ್ಚ ತಗುಲುವುದಲ್ಲದೇ, ಮಳೇ ಕೂಡ ಇಲ್ಲವಾಗಿದೆ. ಹೀಗಾಗಿ ವಿಳಂಬ ನೀತಿ ಅನುಸರಿಸದೇ ತಕ್ಷಣವೇ ನಷ್ಟ ಪರಿಹಾರ ವಿತರಿಸಬೇಕೆಂದು ಆಗ್ರಹಿಸಿದರು. ಅರಣ್ಯ ಇಲಾಖೆಯಲ್ಲಿ ಪರಿಹಾರ ತಂತ್ರಾಂಶದ ಆ್ಯಪ್ ಇದ್ದು ಅದರಲ್ಲಿ ಘಟನಾ ಸ್ಥಳದ ಮಾಹಿತಿ ನೀಡಿ ತಕ್ಷಣವೇ ಪರಿಹಾರ ವಿತರಿಸಲು ಕ್ರಮಕೈಗೊಳ್ಳಲಾಗುತ್ತದೆ. ಕಾಡು ಹಂದಿಗಳ ಉಪಟಳ ತಡೆಯಲು ಸಿಬ್ಬಂದಿಗಳ ಜೊತೆಯಲ್ಲಿ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಭರವಸೆ ನೀಡಿದರು.

ಇಂದು ಪೊಲಿಂಕಾನ ಉತ್ಸವ

ಮಡಿಕೇರಿ, ಜು.16– ಭಾಗಮಂಡಲದ ಶ್ರೀ ಭಗಂಡೇಶ್ವರ ಮತ್ತು ತಲಕಾವೇರಿ ದೇವಾಲಯದಲ್ಲಿ ಪ್ರತಿ ವರ್ಷ ರೂಢಿ ಸಂಪ್ರದಾಯದಂತೆ "ಪೊಲಿಂಕಾನ" ಉತ್ಸವನ್ನು ಆಚರಿಸಲಾಗುತ್ತಿದೆ.

ಅದರಂತೆ ಈ ವರ್ಷವೂ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಆಷಾಢ ಕೃಷ್ಣ ಪಕ್ಷದ ಗ್ರೀಷ್ಮ ಋತು ದಕ್ಷಿಣಾಯನದ ಕರ್ಕಾಟಕ ಮಾಷ ಒಂದ್ನೇ ಸೋಮವಾರ ಜು.17 ರಂದು ಮಧ್ಯಾಹ್ನ 12 ಗಂಟೆಗೆ ಮಹಾ ಪೂಜೆಯ ನಂತರ 'ಪೊಲಿಂಕಾನ ಉತ್ಸವ' ನಡೆಯಲಿದೆ. ಭಕ್ತಾದಿಗಳು ಪೊಲಿಂಕಾನ ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಶ್ರೀ ಭಗಂಡೇಶ್ವರ–ತಲಕಾವೇರಿ ಮತ್ತು ಸಮೂಹ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯಾದ ಎಂ.ಎಸ್.ದೊರೆ ಅವರು ಕೋರಿದ್ದಾರೆ.

ನಗರಸಭಾ ಸದಸ್ಯ ಕಾಳಚಂಡ ಅಪ್ಪಣ್ಣ ಮೇಲೆ ಹಲ್ಲೆಗೆ ಕೊಡವ ಸಂಘಗಳ ಒಕ್ಕೂಟ ಖಂಡನೆ

ವಿರಾಜಪೇಟೆ, ಜು.16– ಮಡಿಕೇರಿ ನಗರಸಭಾ ಸದಸ್ಯ ಹಾಗೂ ಮಡಿಕೇರಿ ಕೊಡವ ಸಮಾಜದ ನಿರ್ದೇಶಕ ಕಾಳಚಂಡ ಅಪ್ಪಣ್ಣ ಅವರ ಮೇಲೆ ಹಲ್ಲೆ ನಡೆಸಿರುವುದನ್ನು ವಿರಾಜಪೇಟೆ ಕೊಡವ ಸಂಘಗಳ ಒಕ್ಕೂಟ ಖಂಡಿಸಿದೆ.



ಅಪ್ಪಣ್ಣ ಅವರ ಮೇಲೆ ಹಲ್ಲೆ ನಡೆಸಿದವರ ಮೇಲೆ ರೌಡಿಶೀಟರ್ ಮೊಕದ್ದಮೆ ದಾಖಲಿಸಿ. ಜಿಲ್ಲೆಯಿಂದ ಗಡಿಪಾರು ಮಾಡಬೇಕು ಎಂದು ಕೊಡವ ಸಂಘಗಳ ಒಕ್ಕೂಟದ ಅಧ್ಯಕ್ಷ ಮೇಕೇರಿರ ರವಿಪೆಮ್ಮಯ್ಯ ಹೇಳಿದರು.

ವಿರಾಜಪೇಟೆ ಕೊಡವ ಸಂಘಗಳ ಒಕ್ಕೂಟದ ವತಿಯಿಂದ ಇಲ್ಲಿನ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಕಾಳಚಂಡ ಅಪ್ಪಣ್ಣ ಅವರು, ಕೊಡವ ಜನಾಂಗಕ್ಕೆ ಸೇರಿದ ಜನ ಸಾಮಾನ್ಯರಿಂದ ಚುನಾಯಿಸಲ್ಪಟ್ಟ ಜನಪ್ರತಿನಿಧಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಾಡಹಗಲೇ ಎಲ್ಲರ ಸಮ್ಮುಖದಲ್ಲಿ ನಡುರಸ್ತೆಯಲ್ಲಿ ಹಲ್ಲೆ ಮಾಡಿದ್ದಾರೆ. ಜನಸಾಮಾನ್ಯರ ಗತಿ ಏನು ಎಂದರು.

ಐಟಿಐ ಬಳಿ ಇರುವ ಕ್ಯಾಂಟೀನ್ ಜಾಗದ ಸಮಸ್ಯೆ ಹಲವಾರು ವರ್ಷಗಳಿಂದ ಇದ್ದು, ಕಾನೂನು ರೀತಿಯಲ್ಲಿ ವ್ಯವಹರಿಸಬೇಕು. ಬುಡಕಟ್ಟು ಜನಾಂಗದ ಮೇಲೆ ಇದೇ ರೀತಿ ದೌರ್ಜನ್ಯ ಮುಂದುವರೆದರೆ ಮಣಿಪುರದಲ್ಲಿ ನಡೆದ ಘಟನೆಗಳು ಇಲ್ಲಿಯು ಕೂಡ ಮರುಕಳಿಸಬಹುದು ಎಂದರು.

ಒಕ್ಕೂಟದ ಸಮನ್ವಯ ಅಧಿಕಾರಿ ವಕೀಲ ಮಾದಂಡ ಪೂವಯ್ಯ ಮಾತನಾಡಿ, ಎಲ್ಲಿಂದಲೋ ಬಂದು ಈ ಮಣ್ಣಿನಲ್ಲಿ ನೆಲೆ ನಿಂತು ಜಿಲ್ಲೆಯ ಮೂಲ ನಿವಾಸಿಗಳಾದ ಕೊಡವರು ಮತ್ತು ಕೊಡವ ಭಾಷಿಗರ ಮೇಲೆ ನಿರಂತರವಾಗಿ ಹಲ್ಲೆಗಳು ನಡೆಯುತ್ತಿರುವುದು ಖಂಡನೀಯ ಎಂದರು.

ಗೋಷ್ಠಿಯಲ್ಲಿ ಒಕ್ಕೂಟದ ಕಾರ್ಯದರ್ಶಿ ಬಾಚಿರ ಜಗದೀಶ್, ಚಿಕ್ಕಪೇಟೆ ಕೊಡವ ಸಂಘದ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ ಉಪಸ್ಥಿತರಿದ್ದರು.

ಶಿಕ್ಷಣ ಕ್ಷೇತ್ರಕ್ಕೆ ಕೆ.ವಿ.ಶಂಕರಗೌಡ ಕೊಡುಗೆ ಅಪಾರ

ಅಶೋಕ್ ಹಾರನಹಳ್ಳಿ ಅಭಿಪ್ರಾಯ



ಮಂಡ್ಯ, ಜು.16– ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣ ದೊರೆಯದಿದ್ದ ಕಾಲದಲ್ಲಿ ಮಂಡ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರಕ್ಕೆ ನಿತ್ಯ ಸಚಿವ ಕೆ.ವಿ.ಶಂಕರಗೌಡ ಅಪಾರ ಕೊಡುಗೆ ನೀಡಿದ್ದಾರೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ್ ಹಾರನಹಳ್ಳಿ ಅಭಿಪ್ರಾಯಪಟ್ಟರು.

ನಗರದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ಪ್ಲೇಸ್‌ಮೆಂಟ್ ಸಭಾಂಗಣದಲ್ಲಿ ಜನತಾ ಶಿಕ್ಷಣ ಟ್ರಸ್ಟ್ ಹಮ್ಮಿಕೊಂಡಿದ್ದ ನಿತ್ಯ ಸಚಿವ ಕೆ.ವಿ.ಶಂಕರಗೌಡರ 108ನೇ ಜನ್ಮ ದಿನಾಚರಣೆ ಅಂಗವಾಗಿ 2023ನೇ ಸಾಲಿನ ರಾಜ್ಯಮಟ್ಟದ ಕೆ.ವಿ.ಶಂಕರಗೌಡ ಮತ್ತು ಕೆ.ಎಸ್.ಸಚ್ಚಿದಾನಂದ ರಂಗಭೂಮಿ ಮತ್ತು ಸಮಾಜ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಶಂಕರಗೌಡರು ಸಮಾಜದ ಅಭಿವೃದ್ಧಿಗೆ ಶಿಕ್ಷಣ ಅಗತ್ಯ ಎಂಬುದನ್ನು ಮನಗಂಡು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ಇಲ್ಲಿ ಕಲಿತ ವಿದ್ಯಾರ್ಥಿಗಳು ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಹೆಸರು ಗಳಿಸಿದ್ದಾರೆ. ರಂಗಕರ್ಮಿ ಪ್ರಸನ್ನ ಅವರು ಗಾಂಧೀಜಿ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಂತೆ ಕೆಲಸ ಮಾಡುತ್ತಿದ್ದಾರೆ. ಇಂದು ಅಭಿವೃದ್ಧಿ ನಗರ ಕೇಂದ್ರಿತವಾಗಿ ಜನ ನಗರದ ಕಡೆಗೆ ವಲಸೆ ಹೋಗಿದ್ದಾರೆ. ಗ್ರಾಮೀಣರ ಕಷ್ಟಗಳಿಗೆ, ಸಮಾಜದ ಅಭಿವೃದ್ಧಿಗೆ ಮುಂದಾಗಬೇಕು. ಪ್ರಕೃತಿ ಮನುಷ್ಯನ ಭೋಗ ಸಂಸ್ಕೃತಿಗೆ ಒಳಗಾಗಿದೆ. ಇದರಿಂದ ಅನೇಕ ಸಮಸ್ಯೆಗಳು ಉಂಟಾಗುತ್ತವೆ ಪ್ರಾಣಿಗಳಿಗೆ ಸಿಗಬೇಕಾದ ಅನುಕೂಲತೆ ಕಿತ್ತುಕೊಳ್ಳುತ್ತಿರುವುದರಿಂದ ಅವುಗಳು ನಾಡಿಗೆ ಬರುತ್ತಿವೆ. ಪ್ರಾಣಿಗಳನ್ನು ರಕ್ಷಿಸಿ ಉಪಚರಿಸುತ್ತಿರುವ ಜೈವಿಕ ಉದ್ಯಾನವನದ ಕರ್ತವ್ಯ ಶ್ಲಾಘನೀಯ ಎಂದರು.

ರಾಜ್ಯಮಟ್ಟದ ರಂಗಭೂಮಿ ಪ್ರಶಸ್ತಿಯನ್ನು ಖ್ಯಾತ ರಂಗಕರ್ಮಿ ಪ್ರಸನ್ನ ಅವರಿಗೆ ಹಾಗೂ ಸಮಾಜ ಸೇವಾ ಪ್ರಶಸ್ತಿಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನದ ಮೃಗಾಲಯ ಆಸ್ಪತ್ರೆ, ಪ್ರಾಣಿ ಪಕ್ಷಿಗಳ ಆರೋಗ್ಯ ಮತ್ತು ಕಲ್ಯಾಣ ವಿಭಾಗದ ನಿರ್ದೇಶಕ ಉಮಾಶಂಕರ್ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತರಿಗೆ ತಲಾ 25,000 ರೂ. ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಲಾಯಿತು.

ಇದೇ ಸಂದರ್ಭ ಬನ್ನೇರುಘಟ್ಟ ಜೈವಿಕ ಉದ್ಯಾನವನದ ಮೃಗಾಲಯ ಆಸ್ಪತ್ರೆ, ಪ್ರಾಣಿ ಪಕ್ಷಿಗಳ ಆರೋಗ್ಯ ಮತ್ತು ಕಲ್ಯಾಣ ವಿಭಾಗದ ಅನೇಕ ಕಾರ್ಮಿಕರನ್ನೂ ವೇದಿಕೆಯಲ್ಲಿ ಅಭಿನಂದಿಸಲಾಯಿತು.

ಪಿಇಟಿ ಟ್ರಸ್ಟ್ ಅಧ್ಯಕ್ಷ ಕೆ.ಎಸ್. ವಿಜಯಾನಂದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬನ್ನೇರುಘಟ್ಟ ಜೈವಿಕ ಉದ್ಯಾನವನದ ನಿರ್ದೇಶಕ ಉಮಾಶಂಕರ್, ಪಿಇಟಿ ಟ್ರಸ್ಟ್ ಉಪಾಧ್ಯಕ್ಷ ಎಂ.ಬಿ.ಶ್ರೀಧರ್, ಕಾರ್ಯದರ್ಶಿ ಎಸ್.ಎಲ್. ಶಿವಪ್ರಸಾದ್, ಜಂಟಿ ಕಾರ್ಯದರ್ಶಿ ದಯಾನಂದ ಹಾಗೂ ಟ್ರಸ್ಟ್ ನಿರ್ದೇಶಕ ಡಾ. ರಾಮಲಿಂಗಯ್ಯ ಹಾಜರಿದ್ದರು.

ಪ್ರತಿಯೊಬ್ಬರೂ ವೃತ್ತಿಗೆ ನ್ಯಾಯ ದೊರಕಿಸಿ

ಶಾಸಕ ಪಿ.ರವಿಕುಮಾರ್



ಮಂಡ್ಯ, ಜು.16– ಪ್ರತಿಯೊಬ್ಬರೂ ವೃತ್ತಿಗೆ ನ್ಯಾಯ ದೊರಕಿಸುವ ಜೊತೆಗೆ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳುವುದು ಅಗತ್ಯ ಎಂದು ಶಾಸಕ ಪಿ.ರವಿಕುಮಾರ್ ತಿಳಿಸಿದರು.

ಎಇಟಿ ನರ್ಸಿಂಗ್ ಕಾಲೇಜು ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ನರ್ಸಿಂಗ್ ಕಾಲೇಜು ವತಿಯಿಂದ ನಗರದ ಸ್ವಾಮಿ ವಿವೇಕಾನಂದ ರಂಗಮಂದಿರದಲ್ಲಿ ನಡೆದ ನರ್ಸಿಂಗ್ ಪೂರೈಸಿದ ವಿದ್ಯಾರ್ಥಿಗಳ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನರ್ಸಿಂಗ್ ವೃತ್ತಿ ವೈದ್ಯ ವೃತ್ತಿಗಿಂತ ಹೆಚ್ಚು ಮಹತ್ವವುಳ್ಳದ್ದು. ಪ್ರತಿಜ್ಞಾ ಸ್ವೀಕಾರ ಮಾಡಿದಂತೆ ನಡೆದುಕೊಳ್ಳುವ ಮೂಲಕ ವೃತ್ತಿ ಗೌರವ ಹೆಚ್ಚಿಸಿ. ಮದರ್ ಥೆರೆಸಾ ಸೇರಿದಂತೆ ಹಲವು ಮಹನೀಯರನ್ನು ಮಾದರಿಯಾಗಿಟ್ಟುಕೊಂಡು ಸೇವೆ ಮಾಡುವಂತೆ ಸಲಹೆ ನೀಡಿದರು.

ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಎಷ್ಟೋ ಮಂದಿ ದೇಶದ ಹಲವು ಸ್ಥಳಗಳಲ್ಲಿ ಉದ್ಯೋಗದಲ್ಲಿ ನಿರತರಾಗಿದ್ದಾರೆ. ಇನ್ನೂ ಹೆಚ್ಚಿನ ಮಟ್ಟದ ಸಾಧನೆ ಮಾಡುವ ಮೂಲಕ ಕೀರ್ತಿ ತರಲಿ ಎಂದು ಶುಭ ಕೋರಿದರು.

ನಿವೃತ್ತ ಪ್ರಾಂಶುಪಾಲ ಡಾ.ಎಸ್.ಬಿ. ಶಂಕರೇಗೌಡ ಮಾತನಾಡಿ, ನರ್ಸಿಂಗ್ ಹಾಗೂ ವೈದ್ಯ ವೃತ್ತಿ ಬಗ್ಗೆ ಇತ್ತೀಚೆಗೆ ಗೌರವ ಕಡಿಮೆಯಾಗುತ್ತಿದೆ. ರೋಗಿಗಳು ಮತ್ತು ವೈದ್ಯರ ಸಂಬಂಧ ಉತ್ತಮವಾಗಿಲ್ಲ. ಹಿಂದೆ ವೈದ್ಯರನ್ನು ದೇವರ ರೂಪದಲ್ಲಿ ಕಾಣುತ್ತಿದ್ದರು. ಪ್ರಾಣ ಯಾರ ಕೈಯಲ್ಲಿಯೂ ಇಲ್ಲ ಎಂಬ ಸತ್ಯವನ್ನು ಅರಿಯದೆ ಪ್ರಾಣ ಹೋಗಲು ವೈದ್ಯರು ಮತ್ತು ಶುಶ್ರೂಷಕಿಯರ ತಾತ್ಸಾರ ಕಾರಣ ಎಂದು ಆಪಾದಿಸಲಾಗುತ್ತಿದೆ. ಯಾವ ವೈದ್ಯನೂ ಪ್ರಾಣದ ಜೊತೆ ಚೆಲ್ಲಾಟ ಆಡುವುದಿಲ್ಲ. ವೃತ್ತಿಗೆ ಎಷ್ಟು ಗೌರವ ಇದೆಯೋ ಅಷ್ಟೇ ಹಿಂಸೆಯೂ ಇದೆ. ಎಲ್ಲವನ್ನೂ ಸಮನಾಗಿ ಸ್ವೀಕರಿಸಿ ಬದುಕುವುದನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ಕೀಳರಿಮೆಯಿಂದ ಹೊರಬಂದು ವೃತ್ತಿ ಗೌರವ ಕಾಪಾಡುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಿ. ನರ್ಸಿಂಗ್ ಉತ್ತಮ ಹಾಗೂ ಶ್ರೇಷ್ಠ ವೃತ್ತಿ. ಈ ವೃತ್ತಿಯಲ್ಲಿ ಭಾವನಾತ್ಮಕ ಸಂಬಂಧ ಇರುತ್ತದೆ. ಕೋರ್ಸ್ ಮುಗಿಯುತ್ತಿದ್ದಂತೆ ಉದ್ಯೋಗಕ್ಕೆ ಹೋಗದೆ ಉನ್ನತ ವ್ಯಾಸಂಗ ಮುಂದುವರಿಸಿ ಸಂಶೋಧನೆಗಳನ್ನು ಮಾಡಿ. ಒತ್ತಡದ ನಡುವೆಯೂ ಸಮಚಿತ್ತದ ಬದುಕು ನಡೆಸುವ ಮೂಲಕ ಸದಾ ಕ್ರಿಯಾಶೀಲರಾಗಿರಿ. ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು ಬದುಕು ನಡೆಸಿ. ನಿಮ್ಮ ಸೇವೆ ಇತರರಿಗೆ ಮುದ ನೀಡುವಂತಿರಲಿ ಎಂದು ಕಿವಿಮಾತು ಹೇಳಿದರು.

ಮಿಮ್ಸ್ ನಿವೃತ್ತ ಪಿಆರ್‌ಓ ಸಿ.ಎಂ. ಉಮೇಶ್, ಕಾಂಗ್ರೆಸ್ ಮುಖಂಡ ಎಂ.ಎಸ್. ಚಿದಂಬರ್, ಕಾಲೇಜಿನ ನಾಗೇಂದ್ರ, ಮಿಮ್ಸ್ ನರ್ಸಿಂಗ್ ಅಧೀಕ್ಷಕಿ ಜಯಭಾರತಿ, ಕಾಲೇಜಿನ ಪ್ರಾಂಶುಪಾಲರಾದ ಎಸ್.ಎಂ. ನಂದಿನಿ, ಕಾರ್ಯದರ್ಶಿ ಎಂ.ಆರ್.ಜೀವನ್ ಗೌಡ, ಎಂ.ಡಿ. ಪ್ರತೀಕ್‌ದೇವ್ ಸೇರಿದಂತೆ ಇತರರಿದ್ದರು.

ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಚುನಾವಣೆ



ಶ್ರೀರಂಗಪಟ್ಟಣ, ಜು.16– ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2023ರಿಂದ 2028ನೇ ಸಾಲಿನ 5 ವರ್ಷಗಳ ಅವಧಿಗೆ ಚುನಾವಣೆ ನಡೆಯಿತು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ಸಂಘದ 15 ಮಂದಿ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಿ.ಟಿ.ತಿಮ್ಮೇಗೌಡ ಬಿಸಿಎಂ (ಬಿ), ಬಾಲಕೃಷ್ಣ ಪರಿಶಿಷ್ಟ ಪಂಗಡ ಹಾಗೂ ಎಂ.ರಾಜು ಬಿಸಿಎಂ(ಎ) ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿದ್ದರು.

ಇನ್ನುಳಿದ ಸಾಮಾನ್ಯ ವರ್ಗ, ಮಹಿಳೆ, ಪರಿಶಿಷ್ಟ ಜಾತಿಗೆ ಸೇರಿದ ನಿರ್ದೇಶಕರ 12 ಸ್ಥಾನಕ್ಕೆ 17 ಮಂದಿ ಸ್ಪರ್ಧೆಯಲ್ಲಿದ್ದರು. ಸಿ.ಜೆ.ಶ್ರೀನಿವಾಸ್, ಶಂಕರ, ಬಿ ಚಂದ್ರು, ಡಿ.ಎನ್.ಲೋಕೇಶ್, ರಮೇಶ ಎಚ್.ಡಿ. ಸಿದ್ದಲಿಂಗ, ಪ್ರಕಾಶ, ಪ್ರದೀಪ, ಸುಕುಮಾರ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾದರು.

ಮಹಿಳಾ ಮೀಸಲು ಕ್ಷೇತ್ರದಿಂದ 2 ಸ್ಥಾನಗಳಿಗೆ ಪ್ರಿಯದರ್ಶಿನಿ ಸಿ.ಎಸ್.ಸರಸ್ವತಿ, ಎನ್.ಆಯ್ಕೆಯಾದರು. ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದ ಎಚ್.ಸಿ.ಚಂದ್ರು ನಿರ್ದೇಶಕರಾಗಿ ಆಯ್ಕೆಗೊಂಡರು. ಸಿಡಿಓ ಭರತ್ ಕುಮಾರ್ ಚುನಾವಣಾಧಿಕಾರಿಯಾಗಿ ಕೆಲಸ ನಿರ್ವಹಿಸಿದರು. ನೂತನ ನಿರ್ದೇಶಕರನ್ನು ಸರ್ಕಾರಿ ನೌಕರರು ಅಭಿನಂದಿಸಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತ

ಇಬ್ಬರು ಗಂಭೀರ, ನಾಲ್ವರಿಗೆ ಗಾಯ

ಮದ್ದೂರು, ಜು.16– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಪ್ರಕರಣಗಳು ಮುಂದುವರೆದಿದ್ದು, ಭಾನುವಾರ ಸರಣಿ ಅಪಘಾತ ಸಂಭವಿಸಿ, ಇಬ್ಬರು ಗಂಭೀರವಾಗಿ ಗಾಯಗೊಂಡು, ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಮದ್ದೂರು ಬೈಪಾಸ್‌ನ ಕೆ.ಕೋಡಿಗಳ್ಳಿ ಬಳಿ ಸಂಭವಿಸಿದೆ.

ಕೆ.ಕೋಡಿಗಳ್ಳಿ ಬಳಿ ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ರಾಜಹಂಸ ಬಸ್ ಮುಂದೆ ತೆರಳುತ್ತಿದ್ದ ಮಾರುತಿ 800 ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಮಾರುತಿ ಕಾರು ಮುಂದೆ ಹೋಗುತ್ತಿದ್ದ ಮತ್ತೆರಡು ಕಾರಿಗೆ ಡಿಕ್ಕಿ ಹೊಡೆದಿದೆ.

ಸರಣಿ ಅಪಘಾತದಲ್ಲಿ ಮಾರುತಿ 800 ಕಾರಿನಲ್ಲಿದ್ದ ಇಬ್ಬರಿಗೆ ಗಂಭೀರ ಗಾಯವಾಗಿದ್ದು, ಮುಂದಿನ ಕಾರುಗಳಲ್ಲಿದ್ದ ನಾಲ್ವರು ಸಣ್ಣಪುಟ್ಟ ಗಾಯಲುಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಕ್ಷಣ ಗಾಯಾಗಳುಗಳನ್ನು ಚಿಕಿತ್ಸೆಗಾಗಿ ಸಾರ್ವಜನಿಕರು ಆಸ್ಪತ್ರೆಗೆ ರವಾನಿಸಿದ್ದಾರೆ. ಮದ್ದೂರು ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೋನಿಗೆ ಬಿದ್ದ ಚಿರತೆ

ಕೊಳ್ಳೇಗಾಲ, ಜು.16– ತಾಲೂಕಿನ ಮಧುವನಹಳ್ಳಿ ಬಳಿಯ ಸಿದ್ದೇಶ್ವರ ಬೆಟ್ಟದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಶನಿವಾರ ರಾತ್ರಿ ಚಿರತೆ ಬಿದ್ದಿದೆ.



ಹನೂರು ತಾಲೂಕಿನ ಕಗ್ಗಲಿಗುಂದಿಯಲ್ಲಿ ಬಾಲಕಿ ಹಾಗೂ ಕಂಚಗಳ್ಳಿ ಗ್ರಾಮದಲ್ಲಿ ರೈತರೊಬ್ಬರ ಮೇಲೆ ದಾಳಿ ಮಾಡಿ ಚಿರತೆ ಆತಂಕ ಮೂಡಿಸಿತ್ತು. ಸಿದ್ದೇಶ್ವರ ಬೆಟ್ಟದಲ್ಲಿ ಚಿರತೆಯೊಂದು ಓಡಾಡುತ್ತಿರುವ ವೀಡಿಯೊ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಚಿರತೆ ಸೆರೆಗೆ ಕಾರ್ಯಾಚರಣೆ ಕೈಗೊಂಡಿದ್ದ ಅರಣ್ಯ ಇಲಾಖೆ ಆರೇಳು ಕಡೆ ಬೋನುಗಳನ್ನು ಅಳವಡಿಸಿತ್ತು. ಇದರ ಜತೆಗೆ ಅದರ ಚಲನವಲನಗಳ ಅಧ್ಯಯನಕ್ಕಾಗಿ 30 ಕ್ಯಾಮೆರಾಗಳನ್ನು ಅಳವಡಿಸಿತ್ತು.

ಬೋನಿಗೆ ಬಿದ್ದ ಚಿರತೆ: ಶನಿವಾರ ರಾತ್ರಿ ಚಿರತೆ ಬಿದ್ದಿದ್ದು ಭಾನುವಾರ ಮುಂಜಾನೆ ಗಸ್ತಿನಲ್ಲಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಗಮನಕ್ಕೆ ಬಂದಿದೆ. ಚಿರತೆ ಬೋನಿಗೆ ಬಿದ್ದಿರುವ ವಿಷಯ ತಿಳಿಯುತ್ತಿದ್ದಂತೆ ಸಾರ್ವಜನಿಕರು ಸ್ಥಳದಲ್ಲಿ ಜಮಾಯಿಸಿದ್ದರು. ಈ ವೇಳೆ ವಲಯ ಅರಣ್ಯಾಧಿಕಾರಿ ವಾಸು, ಸಹಾಯಕ ಅಧಿಕಾರಿ ಮಹೇಶ್ ಇನ್ನಿತರರಿದ್ದರು.

ಯಜಮಾನ್ ಪುಟ್ಟಸ್ವಾಮಿ ಶೆಟ್ಟಿ ನಿಧನ

ಯಳಂದೂರು, ಜು.16– ತಾಲೂಕಿನ ವೈ.ಕೆ. ಮೋಳೆ ಗ್ರಾಮದ ಉಪ್ಪಾರ ಜನಾಂಗದ ಯಜಮಾನ ಪುಟ್ಟಸ್ವಾಮಿ ಶೆಟ್ಟಿ (72) ಭಾನುವಾರ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳು ಗುರಿ ಸಾಧನೆಯತ್ತ ಗಮನ ಹರಿಸಿ

ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ



ಚಾಮರಾಜನಗರ, ಜು.16– ವಿದ್ಯಾರ್ಥಿಗಳು ಗುರಿ ಸಾಧನೆಯತ್ತ ಹೆಚ್ಚಿನ ಗಮನ ಹರಿಸಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕಾಲೇಜು ಶಿಕ್ಷಣ ಇಲಾಖೆ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಅಭಿವ್ಯಕ್ತಿ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆ 25 ವರ್ಷ ದಾಟಿ ಮುಂದೆ ಸಾಗುತ್ತಿದ್ದು, ಕ್ಷೇತ್ರದಲ್ಲಿ ಶೈಕ್ಷಣಿಕ ಪ್ರಗತಿ ಸಾಧಿಸಬೇಕಾಗಿದೆ. ಜಿಲ್ಲೆ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಮೂಲಸೌಕರ್ಯ ಅಗತ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಸೌಲಭ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದು ತಮ್ಮ ಗುರಿ ಸಾಧನೆಗೆ ಹೆಚ್ಚಿನ ಪರಿಶ್ರಮ ವಹಿಸಬೇಕು ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಜಿಲ್ಲೆಯಲ್ಲಿ ಕೃಷಿ, ವಿಜ್ಞಾನ ಕಾಲೇಜು, ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಐಟಿಐ, ಡಿಪ್ಲೋಮಾ ಕಾಲೇಜು ಸ್ಥಾಪನೆಯಾಗಿದೆ. ಶೈಕ್ಷಣಿಕ ವರ್ಷದಿಂದ ಕಾನೂನು ಕಾಲೇಜು ಸ್ಥಾಪನೆ ಗುರಿ ಹೊಂದಲಾಗಿದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣದತ್ತ ಗಮನಹರಿಸಿ ಉತ್ತಮ ಪ್ರಜೆಗಳಾಗಿ ರೂಪಿತವಾಗಬೇಕು ಎಂದರು.

ಚಾಮರಾಜನಗರ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಜಿಲ್ಲೆಗಳಲ್ಲಿ ಚಾಮರಾಜನಗರವೂ ಒಂದಾಗಿದೆ. ಜಿಲ್ಲೆಯಲ್ಲಿ ಎಲ್ಲಾ ವಿಭಾಗದ ಕಾಲೇಜುಗಳು ಸ್ಥಾಪನೆಯಾಗಿದ್ದು, ವಿದ್ಯಾರ್ಥಿಗಳು ಹೆಚ್ಚು ಓದಿನ ಕಡೆ ಗಮನ ನೀಡಿದಾಗ ಮಾತ್ರ ವಿಶ್ವವಿದ್ಯಾಲಯಗಳಿಗೆ ಗೌರವ ದೊರಕಿದಂತಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ಇಲಾಖೆ (ಮೈಸೂರು ವಿಭಾಗ) ವಿಶ್ರಾಂತ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ನಗರಸಭಾ ಸದಸ್ಯರಾದ ಮಹೇಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್. ಗುರುಲಿಂಗಯ್ಯ, ಭೋಗಾಪುರ ವಸತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ದೇವರಾಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಎಸ್.ಚಂದ್ರಮ್ಮ, ಪ್ರಾದೇಶಿಕ ಜಂಟಿ ಸಹಾಯಕ ನಿರ್ದೇಶಕ ನಾಗೇಂದ್ರ ಪ್ರಸಾದ್, ಪ್ರಾಧ್ಯಾಪಕ ಶಿವಸ್ವಾಮಿ ಇದ್ದರು.

ಭೀಮನ ಅಮಾವಾಸ್ಯೆ ಹಿನ್ನೆಲೆ: ವಿಶೇಷ ಪೂಜೆ



ಹನೂರು, ಜು.16– ಭೀಮನ ಅಮಾವಾಸ್ಯೆ ಅಂಗವಾಗಿ ಮಲೆ ಮಹದೇಶ್ವರ ಬೆಟ್ಟದಲ್ಲಿ ಭಾನುವಾರ ಎಣ್ಣೆಮಜ್ಜನ ಸೇವೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ವಿಧಿ ವಿಧಾನಗಳೊಂದಿಗೆ ನೆರವೇರಿತು. ಬೆಟ್ಟಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರು ಬೆಳ್ಳಿ ರಥೋತ್ಸವ, ರುದ್ರಾಕ್ಷಿ ಮಂಟಪ, ಹುಲಿವಾಹನ, ಬಸವ ವಾಹನ, ರಜಾ ಸೇವೆಯಲ್ಲಿ ಪಾಲ್ಗೊಂಡು ತಮ್ಮ ಹರಕೆ ಸಮರ್ಪಿಸಿದರು. ಅಮಾವಾಸ್ಯೆ ಹಿನ್ನೆಲೆಯಲ್ಲಿ ಮಲೆ ಮಹದೇಶ್ವರ ಬೆಟ್ಟದಲ್ಲಿ ಅಭಿವೃದ್ಧಿ ಪ್ರಾಧಿಕಾರದಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿತ್ತು. ಸರ್ಕಾರ ಶಕ್ತಿ ಯೋಜನೆಯಡಿ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟಕ್ಕೆ ಮಹಿಳಾ ಭಕ್ತರ ದಂಡೇ ಆಗಮಿಸಿ, ಮಾದಪ್ಪನಿಗೆ ವಿಶೇಷ ಪೂಜೆ ಸಲ್ಲಿಸಿ, ದರ್ಶನ ಪಡೆದು ಪುನೀತರಾದರು.

ವಿಶೇಷ ಅಲಂಕಾರ: ಭೀಮನ ಅಮಾವಾಸ್ಯೆ ಪ್ರಯುಕ್ತ ಮಲೆ ಮಹದೇಶ್ವರ ದೇವಾಲಯದ ಆವರಣದಲ್ಲಿ ಮಾವಿನಕಾಯಿ ಡ್ರ್ಯಾಗನ್ ಫ್ರೂಟ್ಸ್, ದಪ್ಪ ಮೆಣಸಿನಕಾಯಿ, ತೆಂಗಿನಕಾಯಿ, ವಿವಿಧ ಬಗೆಯ ಹೂಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು ಆವರಣದಲ್ಲಿ ಮಾಡಲಾಗಿದ್ದ ವಿಶೇಷ ಅಲಂಕಾರ ಭಕ್ತರ ಕಣ್ಮನ ಸೆಳೆಯುತ್ತಿತ್ತು.

ಪ್ರಜಾಪ್ರಭುತ್ವದಲ್ಲಿ ಪತ್ರಿಕಾರಂಗದ ಪಾತ್ರ ಮುಖ್ಯ



ಚಾಮರಾಜನಗರ, ಜು.16– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗದಷ್ಟೇ ಪತ್ರಿಕಾರಂಗದ ಪಾತ್ರ ಮುಖ್ಯವಾಗಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಬೆಳ್ಳಿ ಮಹೋತ್ಸವದ ಅಂಗವಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿಯೊಬ್ಬರೂ ತಮ್ಮ ಕೆಲಸದ ಒತ್ತಡದಿಂದಾಗಿ ಕ್ರೀಡಾ ಚಟುವಟಿಕೆಗಳಿಂದ ದೂರ ಉಳಿದಿರುತ್ತಾರೆ. ಹೀಗಾಗಿ ಇಂತಹ ಕ್ರೀಡಾಕೂಟಗಳು ಪ್ರತಿಯೊಬ್ಬರಿಗೂ ಅಗತ್ಯವಾಗಿದೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಸರಿಯಾಗಿ ಕಾರ್ಯ ನಿರ್ವಹಿಸಿದರೇ ಮಾತ್ರ ಉತ್ತಮವಾಗಿ ದೇಶ ನಡೆಯಲು ಸಾಧ್ಯ. ಈ 3 ಅಂಗಗಳು ಎಚ್ಚರ ತಪ್ಪಿದಾಗ ಪತ್ರಿಕಾರಂಗ ಮಧ್ಯ ಪ್ರವೇಶಿಸಿ ತನ್ನ ಜವಾಬ್ದಾರಿ ನಿರ್ವಹಿಸುತ್ತದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಮಾತನಾಡಿ, ಜಿಲ್ಲೆಯಲ್ಲಿ ಪೊಲೀಸರು ಮತ್ತು ಪತ್ರಕರ್ತರು ಸೌಹಾರ್ದಯುತವಾಗಿ ಕೆಲಸ ಮಾಡೋಣ. ತಮಗೆ ನಮ್ಮ ಇಲಾಖೆಯ ಸಂಪೂರ್ಣ ಸಹಕಾರ ಇದೆ ಎಂದರು. ಕ್ರೀಡಾಕೂಟದಲ್ಲಿ ಪತ್ರಕರ್ತರಿಗೆ ಕ್ರಿಕೆಟ್, ಶಟಲ್ ಕಾಕ್, ಗುಂಡು ಎಸೆತ ಹಾಗೂ ಕುಟುಂಬಸ್ಥರಿಗೆ ಮ್ಯೂಸಿಕಲ್ ಚೇರ್, ಲೆಮನ್ ಅಂಡ್ ಸ್ಪೂನ್, ರನ್ನಿಂಗ್ ರೇಸ್ ಸೇರಿದಂತೆ ಹಲವು ಕ್ರೀಡೆಗಳನ್ನು ನಡೆಸಲಾಯಿತು.

ಈ ವೇಳೆ ಶಾಸಕರಾದ ಎಂ.ಆರ್.ಮಂಜುನಾಥ್, ಎಚ್.ಎಸ್. ಗಣೇಶ್‌ಪ್ರಸಾದ್, ಪೌರಾಯುಕ್ತ ರಾಮದಾಸ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಮಹೇಶ್ ಗೌಡಹಳ್ಳಿ, ರಾಜ್ಯ ಪರಿಷತ್ ಸದಸ್ಯರಾದ ಗೂಳಿಪುರ ನಂದೀಶ್, ತೀರ್ಪುಗಾರರಾದ ವಿ. ಶ್ರೀನಿವಾಸಪ್ರಸಾದ್, ನಾಗೇಂದ್ರ ಇದ್ದರು.

ಇನ್ಫೋಸಿಸ್ ನಾರಾಯಣಮೂರ್ತಿ ದಂಪತಿಯಿಂದ ತಿರುಪತಿ ತಿಮ್ಮಪ್ಪನಿಗೆ ಬಂಗಾರದ ಶಂಖ ಸಮರ್ಪಣೆ




ಮೈಸೂರು,ಜು.16– ಇನ್ಫೋಸಿಸ್ ಸಹ ಸಂಸ್ಥಾಪಕರಾದ ಎನ್.ಆರ್.ನಾರಾಯಣ ಮೂರ್ತಿ ದಂಪತಿ ಶಂಖಚಕ್ರಧಾರಿ ತಿರುಪತಿ ತಿಮ್ಮಪ್ಪನಿಗೆ ಬಂಗಾರದ ಶಂಖ ಸಮರ್ಪಿಸಿದ್ದಾರೆ.

ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿ ಆದರ್ಶ ದಂಪತಿಗಳು. ಇವರು ವಿವಾಹವಾಗಿ 45 ವರ್ಷ ಪೂರೈಸಿರುವ ಸುಸಂದರ್ಭದಲ್ಲಿ ತಿರುಪತಿ ಗಿರಿವಾಸ ತಿಮ್ಮಪ್ಪನಿಗೆ ಬಂಗಾರದ ಶಂಖವನ್ನು ಕಾಣಿಕೆ ನೀಡಿದ್ದಾರೆ.

ಇನ್ಫೋಸಿಸ್ ಫೌಂಡೇಶನ್ ಮೂಲಕ ಸುಧಾಮೂರ್ತಿ ಅವರು ಸಾಕಷ್ಟು ಸಾಮಾಜಿಕ ಹಾಗೂ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸಿಕೊಂಡು ಬಂದಿದ್ದಾರೆ. ಎಷ್ಟೇ ಸಂಪತ್ತಿದ್ದರೂ ಸರಳ ಜೀವನ ನಡೆಸುವ ಮೂಲಕ ನಾರಾಯಣಮೂರ್ತಿ ದಂಪತಿ ಸಮಾಜಕ್ಕೆ ಮಾದರಿಯಾಗಿದ್ದಾರೆ. ಇದೀಗ ತಮ್ಮ ಬಳಿಯಿದ್ದ ಕೆಲವು ಆಭರಣಗಳಿಂದ ಶಂಖ ಮಾಡಿಸಿ, ತಿಮ್ಮಪ್ಪನಿಗೆ ಅರ್ಪಿಸಿದ್ದಾರೆ.

ಅಲ್ಕರಾಜ್‌ಗೆ ಚೊಚ್ಚಲ ವಿಂಬಲ್ಡನ್ ಕಿರೀಟ




ಲಂಡನ್, ಜು.16– ಸತತ 4 ಬಾರಿಯ ಚಾಂಪಿಯನ್ ನೊವಾಕ್ ಜೋಕೊವಿಕ್ ಪ್ರಾಬಲ್ಯ ಕೊನೆಗೊಳಿಸಿದ ವಿಶ್ವ ನಂ.1 ಆಟಗಾರ ಕಾರ್ಲೋಸ್ ಅಲ್ಕರಾಜ್ ಚೊಚ್ಚಲ ವಿಂಬಲ್ಡನ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. 5 ಸೆಟ್‌ಗಳ ಮ್ಯಾರಥಾನ್ ಹೋರಾಟದಲ್ಲಿ ರೋಚಕ ಗೆಲುವು ದಾಖಲಿಸಿದ ಸ್ಪೇನ್ ತಾರೆ ಅಲ್ಕರಾಜ್ 2ನೇ ಗ್ರ್ಯಾಂಡ್ ಸ್ಲಾಂ ಪ್ರಶಸ್ತಿ ಗೆಲುವಿನ ಸಂಭ್ರಮ ಕಂಡರೆ, ವಿಶ್ವ ನಂ.2 ನೊವಾಕ್ ಜೊಕೊವಿಕ್ ಅವರ 24ನೇ ಗ್ರ್ಯಾಂಡ್ ಸ್ಲಾಂ ಪ್ರಶಸ್ತಿ ಗೆಲುವಿನ ಕನಸು ಭಗ್ನಗೊಂಡಿತು.

ಆಲ್ ಇಂಗ್ಲೆಂಡ್ ಕ್ಲಬ್ ಸೆಂಟರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಜಿದ್ದಾಜಿದ್ದಿನ ಫೈನಲ್ ಹೋರಾಟದಲ್ಲಿ 20 ವರ್ಷದ ಕಾರ್ಲೋಸ್ ಅಲ್ಕರಾಜ್ 1–6, 7–6 (8–6), 6–1, 3–6, 6–4ರಿಂದ ಸೆರ್ಬಿಯಾದ ಅನುಭವಿ ಆಟಗಾರ ಜೋಕೊವಿಕ್ ಎದುರು ಗೆಲುವು ದಾಖಲಿಸಿದರು. ವರ್ಷದ ಮೊದಲ 2 ಗ್ರ್ಯಾಂಡ್ ಸ್ಲಾಂ ಪ್ರಶಸ್ತಿ ಗೆದ್ದಿದ್ದ 36 ವರ್ಷದ ಜೋಕೊವಿಕ್ ಅವರ ಹ್ಯಾಟ್ರಿಕ್ ಸಾಧನೆಗೆ ಅಲ್ಕರಾಜ್ ಅಡ್ಡಿಯಾದರು. ಈ ಮೂಲಕ ಕಳೆದ ಫ್ರೆಂಚ್ ಓಪನ್ ಟೂರ್ನಿಯ ಸೆಮಿಫೈನಲ್ ಸೋಲಿನ ಸೇಡು ತೀರಿಸಿಕೊಂಡರು.

ಅಲ್ಕರಾಜ್ 4 ಗಂಟೆ 42 ನಿಮಿಷಗಳ ಹೋರಾಟದಲ್ಲಿ ಗೆದ್ದು ವಿಶ್ವ ನಂ. 1 ಪಟ್ಟವನ್ನೂ ಉಳಿಸಿಕೊಂಡರು. ಅಲ್ಲದೆ 2003ರ ಬಳಿಕ ಫೆಡರರ್, ರಾಫೆಲ್ ನಡಾಲ್, ಆಂಡಿ ಮರ್ರೆ ಮತ್ತು ಜೋಕೊವಿಕ್ ಹೊರತಾಗಿ ವಿಂಬಲ್ಡನ್ ಪ್ರಶಸ್ತಿ ಗೆದ್ದ ಮೊದಲ ಸಾಧಕ ಎನಿಸಿದರು.

ಎರಡು ದಿನಗಳ ಸಾನ್ವಿ ಓಪನ್ ಗಾಲ್ಫ್ ಚಾಂಪಿಯನ್‌ಶಿಪ್ ಪಂದ್ಯಾವಳಿ ಯಶಸ್ವಿ



ಮೈಸೂರು, ಜು.16(ಎಂಕೆ)– ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ನಡೆದ ಎರಡು ದಿನಗಳ ಸಾನ್ವಿ ಓಪನ್ ಗಾಲ್ಫ್ ಚಾಂಪಿಯನ್‌ಶಿಪ್–2023(ಸೆಕೆಂಡ್ ಎಡಿಷನ್ ಆಫ್ ಸಾನ್ವಿ ಟೆಕ್ನಾಲಜಿ ಎಲ್‌ಎಲ್‌ಸಿ ಮಿಚಿಗನ್ ಯುಎಸ್‌ಎ ಗಾಲ್ಫ್ ಚಾಂಪಿಯನ್‌ಶಿಪ್) ಯಶಸ್ವಿಯಾಯಿತು.

ಸಾನ್ವಿ ಟೆಕ್ನಾಲಜಿ ಮೈಸೂರು ಪ್ರಾಯೋಜಿತ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ 268 ಗಾಲ್ಫ್ ಆಟಗಾರರು ವಿವಿಧ ವಿಭಾಗಗಳಲ್ಲಿ ಗೆಲುವು ಸಾಧಿಸಲು ಪ್ರಬಲ ಪೈಪೋಟಿ ನಡೆಸಿದರು. ಅಂತಿಮವಾಗಿ ಸ್ಟ್ರೋಕ್‌ಪ್ಲೇ ಗ್ರಾಸ್ ವಿಭಾಗದಲ್ಲಿ ಎಂ.ಅರ್ಜುನ್ ರಂಗ(70 ಗ್ರಾಸ್) ಜಯಗಳಿಸಿದರೆ, ಬಿ.ಎಸ್.ಕೃಷ್ಣ(74 ಗ್ರಾಸ್) ರನ್ನರಪ್ ಆದರು.


ಸ್ಟ್ರೋಕ್‌ಪ್ಲೇ ನೆಟ್(ಹೆಚ್/ಸಿ 0–12) ವಿಭಾಗದಲ್ಲಿ ನಿವೃತ್ತ ಲೆಫ್ಟಿನೆಂಟ್ ಜನರಲ್ ಪಿ.ಸಿ.ತಿಮ್ಮಯ್ಯ(69 ನೆಟ್) ಗೆಲುವು ಪಡೆದರೆ, ಸುಂದರಮ್(69 ನೆಟ್) ದ್ವಿತೀಯ ಸ್ಥಾನ ಪಡೆದರು. ಸ್ಟ್ರೋಕ್‌ಪ್ಲೇ ನೆಟ್(ಹೆಚ್/ಸಿ 13–18) ವಿಭಾಗದಲ್ಲಿ ಜನಾರ್ಧನ್ ಬಾಬು(64 ನೆಟ್) ವಿಜಯ ಸಾದಿಸಿದರೆ, ಎಸ್.ಕೆ.ರಾಮಲಿಂಗೇಗೌಡ(68 ನೆಟ್)ರನ್ನರ್‌ಅಪ್ ಆದರು. ಸ್ಟೇಬಲ್ ಫೋರ್ಡ್ ನೆಟ್ (ಹೆಚ್/ಸಿ 0–24) ವಿಭಾಗದಲ್ಲಿ ಎನ್.ಕೆ.ಗುರು(41 ಪಾಯಿಂಟ್ಸ್) ಜಯಗಳಿಸಿದರೆ, ಡಾ.ಕೆ.ಎ.ನಂಜಪ್ಪ(39 ಪಾಯಿಂಟ್ಸ್) ದ್ವಿತೀಯ ಸ್ಥಾನ ಪಡೆದರು. 65 ವರ್ಷ ಮೇಲ್ಪಟ್ಟವರ ಸ್ಟೇಬಲ್ ಫೋರ್ಡ್ ನೆಟ್ (ಹೆಚ್/ಸಿ 0–24) ವಿಭಾಗದಲ್ಲಿ ಜಿ.ಬಿ.ಹಿರೇಮಾನ್ಯವರ್(39 ಪಾಯಿಂಟ್ಸ್) ಗೆದ್ದರೆ, ಡಾ.ಹೆಚ್.ಸಿ. ಲೋಕೇಶ್ ಚಂದ್ರ(37 ಪಾಯಿಂಟ್ಸ್) ರನ್ನರ್‌ಅಪ್ ಆದರು. ಹಾಗೆಯೇ 75 ವರ್ಷ ಮೇಲ್ಪಟ್ಟವರ ಸ್ಟೇಬಲ್‌ಫೋರ್ಡ್ ನೆಟ್ (ಹೆಚ್/ಸಿ 0–24) ವಿಭಾಗದಲ್ಲಿ ನಿವೃತ್ತ ಬ್ರಿಗೇಡಿಯರ್ ಎನ್.ಎನ್. ಮಾದಪ್ಪ(38) ಗೆಲುವು ಪಡೆದರು.

ಅತ್ಯುತ್ತಮ ಔಟ್‌ಸ್ಟೇಷನ್ ಗಾಲ್ಫ್ ಆಟಗಾರರಾಗಿ ತನಿಷ್‌ಗೌಡ(75 ಗ್ರಾಸ್) ಹೊರಹೊಮ್ಮಿದರೆ, ಬೆಸ್ಟ್ ಲೇಡಿ ಗಾಲ್ಫ್ ಆಟಗಾರ್ತಿ ವಿಭಾಗದಲ್ಲಿ ಸ್ಮಿತಾ ಎಸ್.ಪ್ರಭಾಕರ್ (35 ಪಾಯಿಂಟ್ಸ್) ಪ್ರಥಮ ಹಾಗೂ ಎಂ.ಪ್ರೀತಲ್(34 ಪಾಯಿಂಟ್ಸ್) ದ್ವಿತೀಯ ಸ್ಥಾನ ಪಡೆದರು. ಮುಂಬರುವ ಯುವ ಗಾಲ್ಫ್ ಆಟಗಾರರಾಗಿ ಯುಕ್ತ ಜನಾರ್ಧನ್ ಭರವಸೆ ಮೂಡಿಸಿದರು. ನಿಯರೆಸ್ಟ್ (nearest) ಟು ದ ಪಿನ್–2ನೇ ಹೋಲ್(ರಂಧ್ರ) ವಿಭಾಗದಲ್ಲಿ ಡಾ.ಆಂಥೋನಿ ಫೆರ್ನಾಂಡಿಸ್ (5 ಫಿಟ್ 9 ಇಂಚಸ್), ನಿಯರೆಸ್ಟ್ ಟು ದ ಪಿನ್–12ನೇ ಹೋಲ್(ರಂಧ್ರ) ವಿಭಾಗದಲ್ಲಿ ಎಂ.ಅರ್ಜುನ್ ರಂಗಾ(2 ಫಿಟ್ 1 ಇಂಚಸ್) ಗೆಲುವು ಪಡೆದರು.

ಬಹುಮಾನ ವಿತರಣೆ: ಭಾನುವಾರ ನಡೆದ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ವಿಜೇತರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಸಾನ್ವಿ ಟೆಕ್ನಾಲಜಿ ಮೈಸೂರು ಮುಖ್ಯಸ್ಥ ಯಶಸ್ವಿ ಶಂಕರ್ ಬಹುಮಾನ ವಿತರಣೆ ಮಾಡಿದರು. ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಅಧ್ಯಕ್ಷ ಬಿ.ಎಂ.ನಾಗೇಶ್, ಕ್ಯಾಪ್ಟನ್ ಹೆಚ್.ಎಸ್.ಅರುಣ್ ಕುಮಾರ್, ಕಾರ್ಯದರ್ಶಿ ಎಂ.ಆರ್.ಮೋಹನ್ ಕುಮಾರ್, ಖಜಾಂಚಿ ಕೀರ್ತಿ ಕುಮಾರ್, ಟೂರ್ನಮೆಂಟ್ ಮುಖ್ಯಸ್ಥ ಕೆ.ಸುಧೀರ್ ಭಟ್, ಸವಿತಾ ಯಶಸ್ವಿ ಮತ್ತಿತರರು ಉಪಸ್ಥಿತರಿದ್ದರು.

ವಾಯುಮಾಲಿನ್ಯದಿಂದ ಹೃದಯ ಸಂಬಂಧಿ ಕಾಯಿಲೆ ಹೆಚ್ಚಳ

ಡಾ.ಸಿ.ಎನ್.ಮಂಜುನಾಥ್ ಆತಂಕ



ಮೈಸೂರು, ಜು.16(ಜಿಎ)–ವಾಯುಮಾಲಿನ್ಯದಿಂದ ಭಾರತದಲ್ಲಿ ಜನರು ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಪ್ರತಿ ವರ್ಷ ಅಂದಾಜು 22 ಲಕ್ಷ ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ವಾಯುಮಾಲಿನ್ಯವು ಹೊಸ ಸಿಗರೇಟ್ ಆಗುತ್ತಿದೆ ಎಂದು ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಶಿವಯೋಗ್ ದೇಸಿ ಗೋಶಾಲೆ, ವಿದ್ಯಾವಿಕಾಸ್ ಶಿಕ್ಷಣ ಸಂಸ್ಥೆಗಳು ಹಾಗೂ ಡಾ.ಎಂ.ಎಚ್.ಮರಿಗೌಡ ಹಾರ್ಟಿಕಲ್ಚರ್ ಎಜುಕೇಶನ್ ಅಂಡ್ ರಿಸರ್ಚ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಕೆ.ಸಿ ವೆಂಕಟೇಶ್ ರಚಿಸಿರುವ ನಮ್ಮ ಆರೋಗ್ಯ, ನಮ್ಮ ಆಹಾರ, ನಮ್ಮ ಜವಾಬ್ದಾರಿ' ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಉತ್ತಮ ಆರೋಗ್ಯ ವೃದ್ಧಿಗೆ ಕೆಎಂಎಫ್ ನಂದಿನಿ ಹಾಗೂ ತೋಟಗಾರಿಕೆಯ ಹಾಪ್‌ಕಾಮ್ಸ್ ಹಣ್ಣು, ತರಕಾರಿಗಳು ಅತ್ಯವಶ್ಯಕ.ಇವು ನಮ್ಮ ಎರಡು ಕಣ್ಣುಗಳು ಇದ್ದಹಾಗೆ. ಇಂಡಿಯಾದಲ್ಲಿ ಕೇವಲ ಶೇ.11 ರಷ್ಟು ಜನರು ಮಾತ್ರ ನಿತ್ಯ ತರಕಾರಿ ಮತ್ತು ಹಣ್ಣು ಸೇವಿಸುತ್ತಾರೆ.ಇದರ ಪ್ರಮಾಣ ಹೆಚ್ಚಾಗಬೇಕು ಎಂದರೆ ಎಲ್ಲರೂ ನಿತ್ಯ ಹಣ್ಣು, ತರಕಾರಿ ಸೇವಿಸುವುದನ್ನು ರೂಢಿಸಿಕೊಳ್ಳಬೇಕು. ಜಾಗತಿಕ ಹಸಿವಿನ ಸೂಚ್ಯಾಂಕದಲ್ಲಿ ಭಾರತ ಕಳಪೆ ಸ್ಥಾನ ಪಡೆದುಕೊಂಡಿದೆ. ಪ್ರತಿ ವರ್ಷ ದೇಶದಲ್ಲಿ ನಡೆಯುವ ದೊಡ್ಡ ಸಮಾರಂಭದಲ್ಲಿ ಸುಮಾರು 90 ಸಾವಿರ ಕೋಟಿಯಷ್ಟು ಆಹಾರ ವ್ಯರ್ಥ ಮಾಡುತ್ತಿದೆ. ನಾವು ಯಾರಿಗೂ ಹಳಸಿದ ಅನ್ನ ನೀಡದೆ ಉಳಿದ ಅನ್ನ ನೀಡಬೇಕು ಎಂದು ಹೇಳಿದರು.

ದೇಶದಲ್ಲಿ ಶೇ.60 ಜನರು ತಮ್ಮ ಜೀವನ ಶೈಲಿಯಿಂದ ಮಧುಮೇಹ, ಅಧಿಕ ರಕ್ತದೊತ್ತಡದಂತಹ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಬದಲಾದ ಆಹಾರ ಮತ್ತು ಜೀವನಶೈಲಿಯಿಂದ ಇಂತಹ ಕಾಯಿಲೆಗಳು ಹೆಚ್ಚಾಗುತ್ತಿವೆ. ಪ್ರಪಂಚದ ಬೇರೆ ದೇಶಕ್ಕೆ ಹೋಲಿಕೆ ಮಾಡಿದರೆ ಭಾರತದ ಯುವಜನತೆಯಲ್ಲಿ ಮಧುಮೇಹ ಹೆಚ್ಚಾಗುತ್ತಿದೆ. ಜನರ ಅಪೇಕ್ಷೆಗಳು ಬದಲಾವಣೆಯಾದ

> ದೇಶದಲ್ಲಿ ಪ್ರತಿ 6 ಜನರಲ್ಲಿ ಒಬ್ಬರಿಗೆ ಮಧುಮೇಹ ಇರುವುದು ಕಂಡುಬಂದಿದೆ. ಬದಲಾದ ಆಹಾರ ಮತ್ತು ಜೀವನ ಶೈಲಿಯಿಂದಾಗಿ ಇಂತಹ ಕಾಯಿಲೆ ಹೆಚ್ಚಾಗುತ್ತವೆ. ನಮ್ಮ ಆಲೋಚನೆಗಳು ಸಕಾರಾತ್ಮಕವಾಗಿದ್ದರೆ, ದೇಹ ಮತ್ತು ದೇಶ ಎರಡೂ ಉತ್ತಮವಾಗಿರುತ್ತವೆ. ಯಾರು ಸಕಾರಾತ್ಮಕವಾಗಿ ಚಿಂತಿಸುತ್ತಾರೋ ಅವರು ಒಳ್ಳೆಯ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ನಕಾರಾತ್ಮಕ ಆಲೋಚನೆಯುಳ್ಳವರು ಒಂದು ರೀತಿ ಭಯೋತ್ಪಾದಕರಂತೆ. ಅವರು ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ದೇಶಕ್ಕೆ ಅಪಾಯ. ಸಕಾರಾತ್ಮಕ ಆಲೋಚನೆ ಇಲ್ಲದಿದ್ದರೆ ಸಮಾಜದಲ್ಲಿ ಉತ್ತಮ ಬೆಳವಣಿಗೆ ಕಾಣಲು ಸಾಧ್ಯವಿಲ್ಲ ಆದ್ದರಿಂದ ಪ್ರತಿಯೊಬ್ಬರು ಪಾಸಿಟಿವ್ ಜೀವನ ಶೈಲಿ ಮೈಗೂಡಿಸಿಕೊಳ್ಳಬೇಕು.
> -ಡಾ.ಸಿ.ಎನ್ ಮಂಜುನಾಥ್, ನಿರ್ದೇಶಕ, ಜಯದೇವ ಹೃದ್ರೋಗ ಆಸ್ಪತ್ರೆ

ಕಾರಣಗಳಿಂದ ಇಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತಿನಿತ್ಯ ಕನಿಷ್ಠ ಒಂದು ಗಂಟೆ ವ್ಯಾಯಾಮ ಮಾಡುವುದನ್ನು ಜನರು ರೂಢಿ ಮಾಡಿಕೊಳ್ಳಬೇಕು. ವಾಕಿಂಗ್, ಯೋಗ, ಉತ್ತಮ ನಿದ್ರೆ, ಕುಟುಂಬ ಸದಸ್ಯರ ಜೊತೆ ಊಟ, ನಗುವುದು, ಗೆಳೆತನ ಇವೆಲ್ಲವೂ ಉಚಿತವಾಗಿದ್ದು, ಇವು ಯಾವುದೇ ಅಡ್ಡ ಪರಿಣಾಮ ಬೀರುವುದಿಲ್ಲ. ಇಂತಹ ಹವ್ಯಾಸಗಳನ್ನು ಮೈಗೂಡಿಸಿಕೊಂಡರೆ ಯಾವ ಕಾಯಿಲೆಯೂ ಸುಳಿಯುವುದಿಲ್ಲ ಎಂದು ಹೇಳಿದರು.

ಕಳೆದ 6 ವರ್ಷಗಳಲ್ಲಿ ಜಯದೇವ ಆಸ್ಪತ್ರೆಯಲ್ಲಿ 6 ಸಾವಿರಕ್ಕೂ ಅಧಿಕ ಹೃದಯ ಸಂಬಂಧಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಇದರಲ್ಲಿ 35% ರಷ್ಟು ರೋಗಿಗಳು ಕೇವಲ 40 ವಯಸ್ಸಿನ ಯುವಜನರು. ಯುವಕರಲ್ಲಿ ಮತ್ತು ಮಧ್ಯ ವಯಸ್ಕರಲ್ಲಿ ಹೆಚ್ಚು ಹೃದಯ ರೋಗಗಳು ಕಂಡು ಬರುತ್ತಿವೆ. 30 ವರ್ಷದ ಮಹಿಳೆಯರಲ್ಲಿಯೂ ಅಧಿಕ ಒತ್ತಡದಿಂದ ಕಾಯಿಲೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಅತಿಯಾದ ಧೂಮಪಾನ, ಮದ್ಯಪಾನ, ಜಂಕ್ ಫುಡ್ ಸೇವನೆ ಹಾಗೂ ಅವೈಜ್ಞಾನಿಕ ಜೀವನ ಶೈಲಿಯೇ ಇಂತಹ ಗಂಭೀರ ಸಮಸ್ಯೆಗಳಿಗೆ ಕಾರಣ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿಯೂ ಇಂದು ನಗರ ಶೈಲಿಯ ಜೀವನ ಆರಂಭವಾಗಿದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ನಗರ ಶೈಲಿಯ ಆಹಾರ ಮಾರ್ಪಾಟ್ಟಾಗಿದೆ. ರಾಗಿ, ಜೋಳ, ತರಕಾರಿಯಂತಹ ಪೌಷ್ಠಿಕ ಆಹಾರ ಸೇವನೆ ಮಾಡುತ್ತಿದ್ದವರು ಇಂದು ಜಂಕ್‌ಫುಡ್ ಸೇವಿಸುತ್ತಿರುವುದರಿಂದ ಹಳ್ಳಿ ಜನರಲ್ಲಿಯೂ ಬಿಪಿ, ಶುಗರ್ ಕಾಯಿಲೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವಾಸು, ಕೃಷಿ ತಜ್ಞ ಕೆಪಿ ಸುರೇಶ್, ಪ್ರಕೃತಿ ಚಿಕಿತ್ಸಾ ಕಾರ್ಯಕರ್ತ ಕೆ.ಎಸ್.ಗಿರಿರಾಜು, ತೋಟಗಾರಿಕೆ ಇಲಾಖೆ ನಿವೃತ್ತ ನಿರ್ದೇಶಕ ಡಾ.ಎಲ್.ಹನುಮಯ್ಯ, ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕೆ.ಸಿ ವೆಂಕಟೇಶ್, ಸಹಜ ಕೃಷಿ ಪಾಸಿಟಿವ್ ತಮ್ಮಯ್ಯ, ಡಾ.ಕೆ.ಶಂಕರೇಗೌಡ, ನಿ.ಗೂ ರಮೇಶ್, ಡಾ.ಬಿ.ಸಿ ದೊಡ್ಡೇಗೌಡ ಉಪಸ್ಥಿತರಿದ್ದರು.

ಮೈಸೂರು ಮೃಗಾಲಯದಲ್ಲಿನ ಸಿಂಹದ ಮರಿಗಳಿಗೆ ನಾಮಕರಣ

● ರಾಜು, ನಿರ್ಭಯ ಜೋಡಿ ಸಿಂಹಗಳಿಗೆ ಜನಿಸಿದ್ದ ಮೂರು ಮರಿಗಳು ● ಸೂರ್ಯ, ಚಂದ್ರ, ಕಬಿನಿ ಎಂದು ನಾಮಕರಣ ಮಾಡಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ



ಮೈಸೂರು, ಜು.16(ಎಂಟಿವೈ)– ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ರಾಜು ಮತ್ತು ನಿರ್ಭಯಾ ಸಿಂಹದ ಜೋಡಿಗೆ ಜನಿಸಿದ್ದ ಮೂರು ಮರಿಗಳಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಭಾನುವಾರ ಸೂರ್ಯ, ಚಂದ್ರ, ಕಬಿನಿ ಎಂದು ನಾಮಕರಣ ಮಾಡಿದರು.

ಮೈಸೂರು ಮೃಗಾಲಯದ ಪ್ರಮುಖ ಆಕರ್ಷಣೀಯ ಕೇಂದ್ರ ಬಿಂದುವಾದ ಸಿಂಹಿಣಿ ನಿರ್ಭಯಾ ಹಾಗೂ ಗಂಡು ಸಿಂಹ ರಾಜು ಜೋಡಿಗೆ 2022ರ ಜೂ.5 ರಂದು ಒಂದು ಹೆಣ್ಣು ಹಾಗೂ ಎರಡು ಗಂಡು ಮರಿ ಜನನವಾಗಿತ್ತು. ಮೂರು ತಿಂಗಳ ಹಿಂದಷ್ಟೇ ಮರಿಗಳನ್ನು ಪ್ರವಾಸಿಗರ ವೀಕ್ಷಣೆಗೆ ಅವಕಾಶ ನೀಡಲಾಗಿತ್ತು. ಆದರೆ, ಮರಿಗಳಿಗೆ ನಾಮಕರಣ ಮಾಡಿರಲಿಲ್ಲ. ಮೈಸೂರಿನ ಪ್ರವಾಸ ಕೈಗೊಂಡಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮೈಸೂರು ಮೃಗಾಲಯಕ್ಕೆ ಆಗಮಿಸಿ ಹೆಣ್ಣು ಮರಿಗೆ ಕಬಿನಿ, ಗಂಡು ಮರಿಗಳಿಗೆ ಸೂರ್ಯ, ಚಂದ್ರ ಎಂದು ನಾಮಕರಣ ಮಾಡಿದರು.

ಮೈಸೂರು ಮೃಗಾಲಯದಲ್ಲಿ 2 ಹೆಣ್ಣು ಹಾಗೂ 3 ಗಂಡು ಸಿಂಹಗಳಿವೆ. 5 ಸಿಂಹಗಳಲ್ಲಿ 2 ಆಫ್ರಿಕನ್ ಸಿಂಹ, 2 ಏಷ್ಯಾಟಿಕ್ ಸಿಂಹ ಹಾಗೂ ಒಂದು ಆಫ್ರೋ ಏಷಿಯಾಟಿಕ್ ಸಿಂಹವಾಗಿದೆ. ಅದರೊಂದಿಗೆ 2 ಗಂಡು ಹಾಗೂ 1 ಹೆಣ್ಣು ಮರಿ ಸೇರಿ ಮೃಗಾಲಯಗಳ ಸಂಖ್ಯೆ 8ಕ್ಕೆ ಏರಿದಂತಾಗಿದೆ. ಮರಿಗಳಿಗೆ ಜನನ ನಿರ್ಭಯಾ ಆಫ್ರೋ ಏಷ್ಯಾಟಿಕ್ ಸಿಂಹಿಣಿಯಾಗಿದೆ. 5 ವರ್ಷದ ನಿರ್ಭಯಾಳನ್ನು 2021ರಲ್ಲಿ ಛತ್ತೀಸ್‌ಗಢ್‌ನ ರಾಯ್‌ಪುರ್ ನಂದನವನ್ ಜಂಗಲ್ ಸಫಾರಿ ಮೃಗಾಲಯದಿಂದ ಮೈಸೂರು ಮೃಗಾಲಯಕ್ಕೆ ತರಲಾಗಿತ್ತು. ಮೂರು ಮರಿಗಳ ಜನನಕ್ಕೆ ಕಾರಣವಾದ 6 ವರ್ಷದ ರಾಜು ಸಿಂಹ ಏಷಿಯಾಟಿಕ್ ಸಿಂಹವಾಗಿದೆ. ಇದನ್ನು 2019ರಲ್ಲಿ ಗುಜರಾತ್‌ನ ಸಕ್ಕರ್‌ಭಾಗ್ ಮೃಗಾಲಯದಿಂದ ತರಲಾಗಿತ್ತು

ಮೃಗಾಲಯದ ಅಭಿವೃದ್ಧಿಗೆ ಕ್ರಮ: ಬಳಿಕ ಮಾತನಾಡಿದ ಸಚಿವ ಈಶ್ವರ್ ಖಂಡ್ರೆ, ಮೊದಲ ಬಾರಿಗೆ ಮೃಗಾಲಯಕ್ಕೆ ಭೇಟಿ ನೀಡಿದ್ದೇನೆ. ಉತ್ತಮ ವಾತಾವರಣದಲ್ಲಿ ಪ್ರಾಣಿ–ಪಕ್ಷಿಗಳ ಪಾಲನೆ–ಪೋಷಣೆ ಮಾಡಲಾಗುತ್ತಿದೆ. ಭೂಮಿಯ ಮೇಲೆ ಕೀಟಗಳು, ಪಕ್ಷಿಗಳು ಹಾಗೂ ಪ್ರಾಣಿಗಳನ್ನು ಒಳಗೊಂಡಂತೆ ಎಲ್ಲಾ ಜೀವಿಗಳಿಗೂ ಬದುಕುವ ಹಕ್ಕಿದೆ. ಮೃಗಾಲಯದಲ್ಲಿ ಎಲ್ಲಾ ಪ್ರಾಣಿಗಳನ್ನು ಸಿಬ್ಬಂದಿಗಳು ಬಹಳ ಚೆನ್ನಾಗಿ ಪೋಷಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮುಂದಿನ ದಿನಗಳಲ್ಲಿ ಈ ಮೃಗಾಲಯವನ್ನು ಅಭಿವೃದ್ಧಿಪಡಿಸಲು ಹಾಗೂ ಭಾರತದಲ್ಲಿಯೇ ಉತ್ತಮ ಮೃಗಾಲಯವನ್ನಾಗಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸುತ್ತೇನೆ. ಮನುಷ್ಯನ ಜೀವ ಅತ್ಯಮೂಲ್ಯವಾಗಿದ್ದು, ಆನೆ ಹಾಗೂ ಚಿರತೆ ದಾಳಿ ತಪ್ಪಿಸಲು ಈಗಾಗಲೇ ರಾಜ್ಯ ಸರ್ಕಾರ ಹಲವು ಕ್ರಮ ಕೈಗೊಂಡಿದೆ. ಕಾಡಿಂದ ನಾಡಿಗೆ ಆನೆಗಳು ಬರುವುದನ್ನು ತಡೆಗಟ್ಟಲು ರೈಲ್ವೆ ಬ್ಯಾರಿಕೇಡ್‌ನ ತಡೆಗೋಡೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಮುಖ್ಯಮಂತ್ರಿಗಳು 120 ಕೋಟಿ ರೂ.ಗಳ ಅನುದಾನಕ್ಕೆ ಅನುಮೋದನೆ ನೀಡಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವಕ್ಕೆ ಇಲಾಖೆಯಿಂದ ನೀಡಬಹುದಾದ ಸೌಲಭ್ಯಗಳನ್ನು ಸಮರ್ಪಕವಾಗಿ ಪೂರೈಸಲಾಗುವುದು. ಇದಕ್ಕಾಗಿ ಪೂರ್ವಸಿದ್ಧತೆಗಳು ನಡೆಯುತ್ತಿವೆ. ಈ ಕುರಿತು ಅಧಿಕಾರಿಗಳು ಹಾಗೂ ಸಚಿವರೊಟ್ಟಿಗೆ ಸಭೆ ನಡೆಸಿ ಚರ್ಚಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ವಿ ರಂಗರಾವ್, ಬೆಂಗಳೂರು ವನ್ಯಜೀವಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್, ಉಪ ನಿರ್ದೇಶಕರಾದ ಎ.ಜೆ. ರೋಷಣಿ ಹಾಗೂ ಸಹಾಯಕ ನಿರ್ದೇಶಕ ಡಾ.ಜೆ.ಎಲ್ ಶ್ರೀನಿವಾಸ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಮೈಸೂರಿನ 6ನೇ ವಾರ್ಡ್ ಗೋಕುಲಂ ವ್ಯಾಪ್ತಿಯ ಬೃಂದಾವನ ಬಡಾವಣೆಯ ಉದ್ಯಾನದಲ್ಲಿ ಸಾರ್ವಜನಿಕರಿಗೆ ಮನರಂಜನೆ ಕಲ್ಪಿಸುವ ಉದ್ದೇಶದಿಂದ ಎಫ್‌ಎಂ ರೇಡಿಯೋ ಅಳವಡಿಸುವ ಯೋಜನೆ ಕೈಗೊಂಡಿದ್ದು, ಸ್ಥಳೀಯ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಮುಖಂಡರೊಡಗೂಡಿ ರೇಡಿಯೋ ಪೋಲ್ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು. ರಾಘು, ಕಾರ್ಯಪ್ಪ, ಪುಟ್ಟಸ್ವಾಮಿ, ಜಯಣ್ಣ, ಎಲೆಕ್ಟ್ರಿಕ್ ಇಂಜಿನಿಯರ್ ನಿವೇದಿತಾ, ಭಾಗ್ಯಮ್ಮ, ಜಯಮ್ಮ, ರೀಟಾ, ಲಕ್ಷ್ಮಮ್ಮ ಮತ್ತಿತರರಿದ್ದರು.

ಮಣಿಪುರದಲ್ಲಿ ಮತ್ತೆ ಭುಗಿಲೆದ್ದ ಹಿಂಸಾಚಾರ

ಗುಂಡೇಟಿಗೆ ಮಹಿಳೆ ಸಾವು, 3 ಟ್ರಕ್‌ಗಳಿಗೆ ಬೆಂಕಿಗಾಹುತಿ

ಇಂಫಾಲ, ಜು.16– ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಮತ್ತೆ ಗಲಭೆ ಭುಗಿಲೆದ್ದಿದ್ದು, ರಾಜಧಾನಿ ಪೂರ್ವ ಇಂಫಾಲ್‌ನಲ್ಲಿ ಮಹಿಳೆಯೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

ಇಂಫಾಲದ ಸಾವೊಂಬಂಗ್ ಪ್ರದೇಶದಲ್ಲಿ ಶನಿವಾರ ಸಂಜೆ ಈ ಘಟನೆ ನಡೆದಿದ್ದು, ದುಷ್ಕರ್ಮಿಗಳು 50 ವರ್ಷ ವಯಸ್ಸಿನ ಮಾರಿಂಗ್ ಎಂಬ ಮಹಿಳೆಯ ಮನೆಗೆ ನುಗ್ಗಿ ಅವರ ಮುಖದ ಮೇಲೆ ಗುಂಡು ಹಾರಿಸಿದ್ದಾರೆ. ದಾಳಿಕೋರರು ಮಹಿಳೆಯ ಮೇಲೆ ಗುಂಡು ಹಾರಿಸಿದ್ದರ ಜತೆಗೆ, ಘಟನಾ ಸ್ಥಳದಿಂದ ಪಲಾಯನ ಮಾಡುವ ಮೊದಲು ಆಕೆಯ ಮುಖವನ್ನು ವಿರೂಪಗೊಳಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರ ಪೊಲೀಸರು ಆರೋಪಿಗಳನ್ನು ಬಂಧಿಸಲು ಕಾರ್ಯಾಚರಣೆ ಆರಂಭಿಸಿದ್ದು, ಗುಂಡಿನ ದಾಳಿ ನಡೆದ ಪ್ರದೇಶವನ್ನು ಪೊಲೀಸರು ಸುತ್ತುವರಿದಿದ್ದು, ಸಮೀಪದ ಪ್ರದೇಶಗಳಲ್ಲಿನ ಮನೆಗಳಲ್ಲೂ ಶೋಧ ನಡೆಸಲಾಗುತ್ತಿದೆ. ಘಟನೆ ಸಂಬಂಧ ಪೊಲೀಸರು ಈಗಾಗಲೇ ಸುತ್ತಮುತ್ತಲಿನ ಜನರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಾರೆ. ಮೃತ ಮಹಿಳೆ ನಾಗಾ ಸಮುದಾಯಕ್ಕೆ ಸೇರಿದವರಾಗಿದ್ದು, ಕೆಲವು ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು ಎನ್ನಲಾಗಿದೆ.

ಹಿಂಸಾಚಾರದಿಂದಾಗಿ ಸುದೀರ್ಘ ಅವಧಿಗೆ ಮುಚ್ಚಲ್ಪಟ್ಟಿದ್ದ ಶಿಕ್ಷಣ ಸಂಸ್ಥೆಗಳು ಶುಕ್ರವಾರವಷ್ಟೇ ಮರಳಿ ಕಾರ್ಯಾರಂಭ ಮಾಡಿದ್ದವು. ಇದಾದ ನಂತರ ಒಂದು ದಿನದ ಅವಧಿಯಲ್ಲಿ ಪಶ್ಚಿಮ ಇಂಫಾಲ್ ಜಿಲ್ಲೆಯ ಶಾಲೆಯೊಂದರ ಹೊರಗೆ ಮಹಿಳೆಯೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಇದರಿಂದ ಮತ್ತೆ ಈಶಾನ್ಯ ರಾಜ್ಯದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದು, ಮೂರು ಸರಕು ಸಾಗಾಣಿಕಾ ಟ್ರಕ್‌ಗಳಿಗೆ ಬೆಂಕಿ ಹಚ್ಚಲಾಗಿದೆ. ಈಶಾನ್ಯ ರಾಜ್ಯವಾದ ಮಣಿಪುರದಲ್ಲಿ ಮೇ ತಿಂಗಳಲ್ಲಿ ಹಿಂಸಾಚಾರ ಆರಂಭಗೊಂಡಿತ್ತು.

ಅಯೋಧ್ಯೆಯ ಶ್ರೀರಾಮಮಂದಿರ ವಿಶೇಷತೆ ವರ್ಣಿಸಲಾಗದು

● ವಿಹಿಂಪ ಕ್ಷೇತ್ರಿಯ ಸಂಘಟನಾ ಕಾರ್ಯದರ್ಶಿ ಗೋಪಾಲ್ ಮಾಹಿತಿ

● ಮುಂದಿನ ವರ್ಷದ ಜನವರಿ 15ರಿಂದ 30ರೊಳಗೆ ವಿಗ್ರಹ ಪ್ರತಿಷ್ಠಾಪನೆ ಕಾರ್ಯ



ಮೈಸೂರು, ಜು.16(ಎಸ್‌ಪಿಎನ್)– ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಭವ್ಯ ಶ್ರೀರಾಮ ಮಂದಿರದ ಗರ್ಭಗುಡಿಯಲ್ಲಿ ಶ್ರೀರಾಮ ಬಾಲರೂಪದ ವಿಗ್ರಹ ಪ್ರತಿಷ್ಠಾಪನಾ ಕಾರ್ಯ 2024ರ ಜ.15ರಿಂದ 30ರೊಳಗೆ ನೆರವೇರಲಿದೆ ಎಂದು ವಿಶ್ವ ಹಿಂದೂ ಪರಿಷತ್ ಕ್ಷೇತ್ರಿಯ ಸಂಘಟನಾ ಕಾರ್ಯದರ್ಶಿ ಗೋಪಾಲ್ ಮಾಹಿತಿ ನೀಡಿದರು.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರ 36ನೇ ಚಾತುರ್ಮಾಸ್ಯ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

2000ಕ್ಕೂ ಹೆಚ್ಚು ಕಾರ್ಮಿಕರು: ಪ್ರಸ್ತುತ ಶ್ರೀರಾಮಮಂದಿರ ನಿರ್ಮಾಣ ಕಾರ್ಯದಲ್ಲಿ 1600ಕ್ಕೂ ಹೆಚ್ಚು ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದು, 100ಕ್ಕೂ ಹೆಚ್ಚು ಇಂಜಿನಿಯರ್‌ಗಳು ನಿರ್ವಹಣೆ ಮಾಡುತ್ತಿದ್ದಾರೆ. ಹೆಚ್ಚುವರಿಯಾಗಿ 350ಕ್ಕೂ ಹೆಚ್ಚು ಕಾರ್ಮಿಕರು ಸೇರ್ಪಡೆಯಾಗಿ ಮಂದಿರ ನಿರ್ಮಾಣ ಕಾರ್ಯಕ್ಕೆ ವೇಗ ಹೆಚ್ಚಿಸಲಿದ್ದಾರೆ. ಸದ್ಯಕ್ಕೆ ನೆಲಮಹಡಿ ಕೆಲಸ ಪೂರ್ಣಗೊಂಡಿದ್ದು, ಪೂರ್ಣ ಪ್ರಮಾಣದ ಮಂದಿರ ನಿರ್ಮಾಣ ಕಾರ್ಯ ಇನ್ನೂ ಎರಡೂವರೆ ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. 2020ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀರಾಮಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ್ದರು ಎಂದು ವಿವರಿಸಿದರು.

ಮುಂದಿನ ವರ್ಷ ಅಂದರೆ 2024ರ ಸಂಕ್ರಾಂತಿ ಬಳಿಕ ಶ್ರೀರಾಮನ ಬಾಲರೂಪದ ವಿಗ್ರಹ ಪ್ರತಿಷ್ಠಾಪಿಸಿ, ಭಕ್ತರ ದರ್ಶನಕ್ಕೆ

> ಜನವರಿಯಲ್ಲಿ ಬಾಲ ಶ್ರೀರಾಮ ವಿಗ್ರಹದ ಪ್ರತಿಷ್ಠಾಪನಾ ಕಾರ್ಯ ನೆರವೇರಲಿದೆ. ಈ ಕಾರ್ಯಕ್ಕೆ ಆಗಮಿಸಲು ಆಗದ ಶ್ರೀರಾಮ ಭಕ್ತರು ಇರುವ ಸ್ಥಳದಿಂದಲೇ ಶ್ರೀರಾಮನಿಗೆ ಭಕ್ತಿ ಸಮರ್ಪಣೆ ಮಾಡಿ, ಪ್ರತಿಷ್ಠಾಪನಾ ಕಾರ್ಯ ಶಾಂತಿಯುತವಾಗಿ ನಡೆಯುವಂತೆ ಸಹಕರಿಸಬೇಕು. ಶ್ರೀರಾಮಮಂದಿರ ನಿರ್ಮಾಣಗೊಳ್ಳುತ್ತಿರುವ ನಗರ, ಇನ್ನು ಚಿಕ್ಕನಗರವಾಗಿದ್ದು, ಕೋಟಿಕೋಟಿ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿದರೆ, ಎಲ್ಲರಿಗೂ ಕನಿಷ್ಠ ಸೌಕರ್ಯ ಒದಗಿಸುವುದು ಸ್ಥಳೀಯ ಆಡಳಿತಕ್ಕೆ ಕಷ್ಟವಾಗಲಿದೆ.
> -ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು, ಪೇಜಾವರ ಮಠ, ಉಡುಪಿ

ಅವಕಾಶ ಕಲ್ಪಿಸಿ ಕೊಡಲಾಗುವುದು. ಈ ಕಾರ್ಯಕ್ರಮ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈಗಾಗಲೇ ಮನವಿ ಸಲ್ಲಿಸಲಾಗಿದ್ದು, ಈ ವೇಳೆ ದೇಶದ ಪ್ರಮುಖ ಸಂತರನ್ನು ಆಹ್ವಾನಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ವಿಗ್ರಹ ಸ್ಪರ್ಶಿಸುವ ಸೂರ್ಯ ಕಿರಣ: ಶ್ರೀರಾಮಮಂದಿರ ಗರ್ಭಗುಡಿ ವಿಶೇಷ ಅಲಂಕಾರದಿಂದ ಕೆತ್ತನೆ ಮಾಡಲಾಗಿದೆ. 5 ಗುಮ್ಮಟಗಳು ಹಾಗೂ ಒಂದು ಗೋಪುರವಿದೆ. ಇದರ ಎತ್ತರ 161 ಅಡಿ. ಮೂರು ಮಹಡಿಗಳ ರೂಪದಲ್ಲಿ ನಿರ್ಮಾಣಗೊಂಡಿರುವ ದೇಗುಲದ ಮಧ್ಯಭಾಗದಲ್ಲಿ ಗರ್ಭ ಗೃಹವಿದೆ. ಸೂರ್ಯನ ಕಿರಣಗಳು ಬಾಲ ರಾಮನ ಪಾದಸ್ಪರ್ಶ ಮಾಡುವ ರೀತಿಯಲ್ಲಿ ಇದರ ವಿನ್ಯಾಸ ಮಾಡಲಾಗಿದೆ ಎಂದು ತಿಳಿಸಿದರು.

ಗರ್ಭಗುಡಿ ಸುತ್ತಲೂ ಗೃಹ, ಕೀರ್ತನಾ, ನೃತ್ಯ ಹಾಗೂ ರಂಗ ಮಂಟಪಗಳು ನಿರ್ಮಾಣಗೊಂಡಿವೆ. ಗರ್ಭ ಗೃಹದ ಒಳಗೆ ಎರಡು ಮೂರ್ತಿಗಳು ಇರಲಿವೆ. ಒಂದು ಮೂರ್ತಿ ಬಾಲ ರಾಮನದ್ದು. ಪ್ರಾಚೀನ ಪರಂಪರೆ ಶಿಲ್ಪಶಾಸ್ತ್ರ ಮತ್ತು ಆಧುನಿಕ ತಂತ್ರಜ್ಞಾನ ಬಳಸಿ ನಾಗಶೈಲಿಯಲ್ಲಿ ಮಂದಿರದ ಕಟ್ಟಡ ನಿರ್ಮಾಣಗೊಳ್ಳಲಿದೆ. 'ಎಲ್ ಅಂಡ್ ಟಿ' ಕಂಪನಿ ನಿರ್ಮಾಣದ ಉಸ್ತುವಾರಿ ವಹಿಸಿದ್ದರೆ, ಟಾಟಾ ಸಂಸ್ಥೆ ಮೇಲುಸ್ತುವಾರಿ ವಹಿಸಿದೆ ಎಂದರು.

ರಾಜಸ್ಥಾನದಲ್ಲಿ ಸಿಗುವ ಗುಲಾಬಿ ಬಣ್ಣದ ಮಾರ್ಬಲ್‌ಗಳನ್ನು ಬಳಸಿ ರಾಮಮಂದಿರ ಹೊರಾಂಗಣ ನಿರ್ಮಾಣವಾಗಿದೆ. ಇನ್ನು ಒಳಾಂಗಣದ ವಿಶೇಷತೆಗಳನ್ನು ಹೇಳಿದರೆ ಸಾಲದು, ಅದನ್ನೂ ಪ್ರತಿಯೊಬ್ಬರು ನೋಡಿ ಆನಂದಿಸಬೇಕು. 500 ವರ್ಷಗಳ ಹಿಂದೆ ಇದ್ದ ರಾಮಮಂದಿರಕ್ಕಿಂತಲೂ ಮೂರು ಪಟ್ಟು ದೊಡ್ಡ ದೇಗುಲ ನಿರ್ಮಾಣಗೊಳ್ಳುತ್ತಿದೆ. 161 ಅಡಿ ಎತ್ತರ, 235 ಅಡಿ ಅಗಲ ಹಾಗೂ 360 ಅಡಿ ಉದ್ದ ದೇಗುಲ ನಿರ್ಮಾಣವಾಗುತ್ತದೆ ಎಂದು ಶ್ರೀ ರಾಮ ಮಂದಿರ ವಿಶೇಷತೆಯನ್ನು ವರ್ಣಿಸಿದರು.

2100 ಕೆಜಿಯ ಗಂಟೆ: ಒಟ್ಟಿನಲ್ಲಿ ಪ್ರಭು ಶ್ರೀರಾಮಮಂದಿರ ನಿರ್ಮಾಣಕ್ಕೆ ವಾಸ್ತು ಶಾಸ್ತ್ರದ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಲಾಗಿದ್ದು, ಈ ದೇಗುಲದ ಮತ್ತೊಂದು ಆಕರ್ಷಣೆ ದೇಗುಲದ ಗಂಟೆ, ಈ ಗಂಟೆಯ ತೂಕ ಬರೋಬ್ಬರಿ 2,100 ಕೆ.ಜಿ. 6 ಅಡಿ ಉದ್ದ 5 ಅಡಿ ಅಗಲ ಇದೆ. ವಿನ್ಯಾಸ ಮಾಡಿರುವ ತಜ್ಞರ ಹೇಳಿಕೆ ಪ್ರಕಾರ ಈಗ ನಿರ್ಮಾಣಗೊಳ್ಳುತ್ತಿರುವ ಶ್ರೀರಾಮಮಂದಿರ ಸಾವಿರ ವರ್ಷ ಕಳೆದರೂ, ಎಂಥದ್ದೇ ಪ್ರಾಕೃತಿಕ ವಿಕೋಪ ಸಂಭವಿಸಿದರೂ ದೃಢವಾಗಿ ನಿಲ್ಲಬಲ್ಲದ್ದಾಗಿದೆ ಎಂದು ಹೇಳಿದರು.

ರಾಜ್ಯದ ಶಿಲ್ಪಕಾರರ ಕೆತ್ತನೆ: ನಾಲ್ಕೂವರೆ ಅಡಿ ಎತ್ತರದ ಶ್ರೀರಾಮನ 3 ಮೂರ್ತಿಗಳ ವಿಗ್ರಹ ಕೆತ್ತನೆ ಕಾರ್ಯ ನಡೆಯುತ್ತಿದೆ. ನಮ್ಮ ರಾಜ್ಯದ ಇಬ್ಬರು, ರಾಜಸ್ಥಾನದ ಒಬ್ಬ ಶಿಲ್ಪಕಾರರು ಸೇರಿದಂತೆ ಇತರರು ಈ ಕೆಲಸದಲ್ಲಿ ತೊಡಗಿದ್ದಾರೆ. ಅದರಲ್ಲಿ ಒಂದು ಮೂರ್ತಿಯನ್ನು ಆಯ್ಕೆ ಮಾಡಿಕೊಂಡು ಪ್ರತಿಷ್ಠಾಪನೆ ಮಾಡಲಾಗುವುದು. ಈ ಕೆತ್ತನೆ ಕೆಲಸ ಅಕ್ಟೋಬರ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸಿದ್ದರು.

ಹಿಂದೂಗಳಿಗೆ ಸೂಕ್ತ ರಕ್ಷಣೆ ಒದಗಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು,ಜು.16(ಪಿಎಂ)– ಹಿಂದೂ ಕಾರ್ಯಕರ್ತರ ಮೇಲೆ ಆಕ್ರಮಣ ನಡೆಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಹಿಂದೂಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಹಾಗೂ ದೇಶದಾದ್ಯಂತ ವಕ್ಫ್ ಬೋರ್ಡ್ ಕಾಯ್ದೆ ರದ್ದುಗೊಳಿಸಬೇಕೆಂದು ಒತ್ತಾಯಿಸಿ ಹಿಂದೂ ಜನ ಜಾಗೃತಿ ಸಮಿತಿ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪುರಭವನದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದ ಬೆನ್ನಲ್ಲೇ ಹಿಂದೂ ಕಾರ್ಯಕರ್ತರ ಮೇಲೆ ವಿವಿಧ ರೀತಿಯ ಆಕ್ರಮಣಗಳು ಹೆಚ್ಚಾಗಿವೆ. ಜೈನಮುನಿ ಆಚಾರ್ಯ ಶ್ರೀ ಕಾಮಕುಮಾರ ನಂದಿ ಮಹಾರಾಜರು ಮತ್ತು ಯುವ ಬ್ರಿಗೇಡ್‌ನ ವೇಣುಗೋಪಾಲ ಅವರ ಹತ್ಯೆ ಹಿಂದೂ ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಕ್ಫ್ ಬೋರ್ಡ್ ಕಾನೂನನ್ನು ದುರುಪಯೋಗ ಮಾಡಿಕೊಂಡು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಜಮೀನುಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದೆ. ಆ ಮೂಲಕ ದೇಶದಲ್ಲಿ 8 ಲಕ್ಷ ಎಕರೆ ಜಮೀನನ್ನು ಕಬಳಿಸಿದೆ. ಹಾಗಾಗಿ ಈ ಕಾನೂನನ್ನು ರದ್ದುಗೊಳಿಸಿ ಭೂಮಿಯನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಬೇಕು. ದೇಶದಲ್ಲಿ 'ಸಮಾನ ನಾಗರಿಕ ಕಾನೂನು' ಜಾರಿಗೆ ತರುವ ಮೂಲಕ ಅಲ್ಪಸಂಖ್ಯಾತರ ಹೆಸರಿನಲ್ಲಿ ಜಾರಿಯಲ್ಲಿರುವ ಎಲ್ಲಾ ವಿಶೇಷ ಸೌಲಭ್ಯ, ಕಾನೂನು, ಆಯೋಗ, ಮಂಡಳಿ, ಸರ್ಕಾರಿ ಇಲಾಖೆಗಳನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಸಮಿತಿ ಸಮನ್ವಯಕ ಶಿವರಾಮ್, ಬಿಜೆಪಿ ಮುಖಂಡ ಶಿವಾನಂದರಾವ್, ಮುಖಂಡರಾದ ಶಿವಶಂಕರ್, ಜಗದೀಶ್, ತಮ್ಮಯ್ಯಗೌಡ, ಶುಭಶ್ರೀ, ಸುಧಾ ರಾಮಚಂದ್ರ ಸೇರಿದಂತೆ ಸಮಿತಿ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸ್ಪೀಕರ್ ಯು.ಟಿ.ಖಾದರ್‌ಗೆ 'ದಿ ಗ್ರೇಟ್ ಸನ್ ಆಫ್ ಇಂಡಿಯಾ' ಪ್ರಶಸ್ತಿ ಪ್ರದಾನ



ಬೆಂಗಳೂರು, ಜು.16– ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ ಖಾದರ್ ಅವರಿಗೆ 'ದಿ ಗ್ರೇಟ್ ಸನ್ ಆಫ್ ಇಂಡಿಯಾ' ಪ್ರಶಸ್ತಿ ಲಭಿಸಿದೆ. ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಭಾನುವಾರ ನಡೆದ ಬುದ್ಧಿಜೀವಿಗಳ ಸಮ್ಮೇಳನದಲ್ಲಿ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಛತ್ತೀಸ್‌ಗಢ ರಾಜ್ಯಪಾಲ ಬಿಸ್ವ ಭೂಷಣ ಹರಿಚರಣ್, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಾಧೀಶ ವಿ. ಗೋಪಾಲ್ ಗೌಡ ಮತ್ತಿತರರು ಉಪಸ್ಥಿತರಿದ್ದರು.



ಜನಪದ ಸಂಪ್ರದಾಯ ಹಾಗೂ ದೇಸೀ ಹಬ್ಬಗಳನ್ನು ಪರಿಚಯಿಸುವ ಸಲುವಾಗಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ಕ್ಯಾಂಪಸ್‌ನಲ್ಲಿ ಶಾಲೆಯ ವಿದ್ಯಾರ್ಥಿಗಳಿಗಾಗಿ ಗಾಳಿಪಟ ಉತ್ಸವ ಹಮ್ಮಿಕೊಳ್ಳಲಾಗಿತ್ತು. ಗಾಳಿಪಟ ಹಾರಿಸುವ ಮೂಲಕ ಉಪಮೇಯರ್ ಡಾ.ಜಿ.ರೂಪಾ ಕಾರ್ಯಕ್ರಮ ಉದ್ಘಾಟಿಸಿದರು. ಸಂಸ್ಥೆ ಅಧ್ಯಕ್ಷ ಆರ್.ರಘು, ಪ್ರಾಂಶುಪಾಲರಾದ ಶೀಭಿತಾ ಆರಾಧ್ಯ ಉಪಸ್ಥಿತರಿದ್ದರು.

ದೊಡ್ಡ ಮೋರಿಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ: ಸಾರ್ವಜನಿಕರ ದೂರು



ಮೈಸೂರು, ಜು.16(ಎಸ್‌ಪಿಎನ್)– ಮೈಸೂರಿನ ವಿವಿಧ ದೊಡ್ಡ ಮೋರಿಗಳಲ್ಲಿ ಬೃಹತ್ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯದ ಜೊತೆಗೆ ಕಸ–ಕಡ್ಡಿಗಳ ರಾಶಿ ಶೇಖರಣೆಗೊಂಡು ಯುಜಿಡಿ ನೀರು ಸರಾಗವಾಗಿ ಹೋಗಲು ಸಾಧ್ಯವಾಗುತ್ತಿಲ್ಲ. ಈ ಕೂಡಲೇ ತ್ಯಾಜ್ಯವನ್ನು ವಿಲೇವಾರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸಾರ್ವಜನಿಕರು ಮನವಿ ಮಾಡಿದ್ದಾರೆ.

ಬಂಬೂಬಜಾರ್ ರಸ್ತೆಯಲ್ಲಿನ ರಾಜ್ಯ ಉಗ್ರಾಣ ನಿಗಮದ ಕಟ್ಟಡದ ಪಕ್ಕದಲ್ಲಿರುವ ದೊಡ್ಡ ಮೋರಿಯಲ್ಲಿ ಪ್ಲಾಸ್ಟಿಕ್, ಕಸ–ಕಡ್ಡಿ ಕಟ್ಟಿಕೊಂಡು ನೀರು ಸರಾಗವಾಗಿ ಹೋಗಲು ಸಾಧ್ಯವಾಗುತ್ತಿಲ್ಲ. ಮಳೆಗಾಲ ಸಂದರ್ಭದಲ್ಲಿ ಯುಜಿಡಿ ನೀರಿನ ಜೊತೆಗೆ ಮಳೆ ಸೇರಿಕೊಂಡು ದೊಡ್ಡ ಮೋರಿ ತುಂಬಿ ತುಳುಕುತ್ತಿದೆ. ಅಕ್ಕ–ಪಕ್ಕದ ಅಂಗಡಿಗಳಿಗೆ ನುಗ್ಗುವ ಸಾಧ್ಯತೆ ಇದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ದೊಡ್ಡ ಮೋರಿಗೆ ತಿಲಕ್‌ನಗರ, ಹಳೆ ಆರ್‌ಎಂಪಿ, ಮಿಷನ್ ರಸ್ತೆ ಸೇರಿದಂತೆ ಸುತ್ತಮುತ್ತ ಬಡಾವಣೆಗಳ ಯುಜಿಡಿ ಮತ್ತು ಮಳೆ ನೀರು ಬರುತ್ತಿದೆ. ಬಂಬೂ ಬಜಾರ್ ರಸ್ತೆಯ ಬಳಿ ಪಕ್ಕದಲ್ಲಿ ಹಾದುಹೋಗುವ ಮೋರಿಗೆ ಕಟ್ಟಿರುವ ಸೇತುವೆ ಕಿರಿದಾಗಿರುವುದರಿಂದ ನೀರು ಸರಾಗವಾಗಿ ಹೋಗಲು ಸಾಧ್ಯವಾಗುತ್ತಿಲ್ಲ. ಸುತ್ತಮುತ್ತಲಿನ ಅಂಗಡಿಯವರು, ನಿವಾಸಿಗಳು, ಪ್ಲಾಸ್ಟಿಕ್ ಸಹಿತ ಕಸವನ್ನು ಮೋರಿಗೆ ಎಸೆದು ಹೋಗುತ್ತಾರೆ. ಈ ಜಾಗದಲ್ಲಿ ದುರ್ವಾಸನೆ ಬರುವುದರಿಂದ ಈ ಮಾರ್ಗದ ವಾಹನ ಸವಾರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸವಾರರೊಬ್ಬರು ಮಾಹಿತಿ ನೀಡಿದರು.

ಸೋರುತ್ತಿದೆ ನೀರಿನ ಪೈಪ್: ಮೋರಿ ಮೇಲೆ ಹಾದುಹೋಗಿರುವ ನೀರಿನ ಪೈಪ್‌ಲೈನ್ ಸೋರಿಕೆಯಾಗಿ, ಯುಜಿಡಿ ನೀರಿಗೆ ಸೇರ್ಪಡೆಯಾಗುತ್ತಿದೆ. ಮಳೆಗಾಲದಲ್ಲಿ ಯುಜಿಡಿ ನೀರು, ಕುಡಿಯುವ ನೀರಿಗೆ ಸೇರ್ಪಡೆಯಾಗಿ, ಸಾವಿರಾರು ಜನರು ಅಸ್ವಸ್ಥಗೊಳ್ಳುವ ಸಾಧ್ಯತೆ ಇದೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಮೋರಿಯಲ್ಲಿ ಶೇಖರಣೆಗೊಂಡಿರುವ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ, ಈ ಮಾರ್ಗದ ದೊಡ್ಡ ಮೋರಿಯನ್ನು ಒಮ್ಮೆ ಸ್ವಚ್ಛಗೊಳಿಸುವಂತೆ ಮನವಿ ಮಾಡಿದ್ದಾರೆ.

ಬಿಸಿಯೂಟ ಕಾರ್ಯಕರ್ತೆಯರು ಇನ್ಮುಂದೆ ಬಳೆ ತೊಡುವಂತಿಲ್ಲ : ಆದೇಶ ರಾಜ್ಯ ಸರ್ಕಾರದ್ದಲ್ಲ



ಬೆಂಗಳೂರು, ಜು.16– ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಬಿಸಿಯೂಟ ತಯಾರಿಕೆ ಸಿಬ್ಬಂದಿ ಕೈಗೆ ಬಳೆ ತೊಡದಂತೆ ಶಿಕ್ಷಣ ಇಲಾಖೆ ಹೊಸ ಮಾರ್ಗಸೂಚಿ ಪ್ರಕಟಿಸಿದ್ದು, ವ್ಯಾಪಕ ಸುದ್ದಿಯಾಗಿದೆ. ಇದಕ್ಕೆ ಕಾರ್ಯಕರ್ತೆಯರು, ಹಿಂದು ಸಂಘಟನೆಗಳು ಟೀಕೆ ವ್ಯಕ್ತಪಡಿಸುತ್ತಿವೆ. ಮಧ್ಯಾಹ್ನದ ಬಿಸಿಯೂಟ ತಯಾರಿಕೆಯಲ್ಲಿನ ಗುಣಮಟ್ಟ ಸುರಕ್ಷತೆ, ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸಿಬ್ಬಂದಿ ಪಾಲಿಸಬೇಕಾದ ನಿಯಮಗಳು ಕುರಿತಂತೆ ನೂತನ ಮಾರ್ಗಸೂಚಿಯಲ್ಲಿ ಶಿಕ್ಷಣ ಇಲಾಖೆ ಆದೇಶಿಸಿದೆ ಎಂದು ಹೇಳಲಾಗುತ್ತಿದೆ. ಬಿಸಿಯೂಟ ತಯಾರು ಮಾಡುವ

ಮುಖ್ಯಮಂತ್ರಿ ಸ್ಪಷ್ಟನೆ



ಅಡುಗೆ ಸಿಬ್ಬಂದಿ ಬಹುತೇಕ ಮಹಿಳೆಯರು ಬಳೆ, ಬಿಂದಿಗೆ ಧರಿಸುತ್ತಾರೆ. ಆದರೆ ಇದೀಗ ಶಿಕ್ಷಣ ಇಲಾಖೆ ಆದೇಶದಿಂದ ಅನೇಕರು ವ್ಯಾಪಕ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮೂಲಕ ಸ್ಪಷ್ಟನೆ ನೀಡಿದ್ದಾರೆ. ವಾಸ್ತವದಲ್ಲಿ ಕೇಂದ್ರ ಸರ್ಕಾರ ಪೋಷಣ್ ಯೋಜನೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಹೊರಡಿಸಿ, ಬಿಸಿಯೂಟದ ಕಾರ್ಯಕರ್ತೆಯರು ಬಳೆ ತೊಡುವುದನ್ನು ನಿಷೇಧಿಸಿದೆ, ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವಲ್ಲ ಎಂದಿದ್ದಾರೆ.

ಅರಣ್ಯದಂಚಿನ ವ್ಯವಸಾಯ ಭೂಮಿ ಹಕ್ಕುಪತ್ರ ಪ್ರಕರಣ ಇತ್ಯರ್ಥಕ್ಕಾಗಿ

ಶೀಘ್ರ ಅರಣ್ಯ, ಕಂದಾಯ ಭೂಮಿಗಳ ಜಂಟಿ ಸಮೀಕ್ಷೆ

ಅರಣ್ಯಾಧಿಕಾರಿಗಳ ಸಭೆಯಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಘೋಷಣೆ

ಹೆಚ್.ಡಿ. ಕೋಟೆ, ಜು.16(ಎಂಟಿವೈ, ಮಂಜು)– ರಾಜ್ಯದ ವಿವಿಧೆಡೆ ಅರಣ್ಯದಂಚಿನಲ್ಲಿ ವ್ಯವಸಾಯ ಮಾಡುತ್ತಾ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವ ಪ್ರಕರಣ ಇತ್ಯರ್ಥಕ್ಕೆ ಶೀಘ್ರದಲ್ಲೇ ಅರಣ್ಯ ಹಾಗೂ ಕಂದಾಯ ಭೂಮಿಗಳ ಜಂಟಿ ಸಮೀಕ್ಷೆ ನಡೆಸುವುದಾಗಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಂಗಲ್ ಲಾಡ್ಜಸ್ ಸಭಾಂಗಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆಯಲ್ಲಿ ನಡೆದ ಅರಣ್ಯಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಕ್ಕುಪತ್ರ ವಿತರಣೆಗಾಗಿ ರಾಜ್ಯದ ವಿವಿಧೆಡೆಯಿಂದ ಹಲವು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅರಣ್ಯ ಪ್ರದೇಶಕ್ಕೆ ಸೇರಿದ ಪ್ರದೇಶದಲ್ಲಿ ಕೆಲವರು ಉಳುಮೆ ಮಾಡಿ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಕೆಲವೆಡೆ ಕಾನೂನು ತೊಡಕು ಇದೆ. ಇದರಿಂದ ಹಕ್ಕುಪತ್ರ ವಿತರಣೆಗೆ ಅಡಚಣೆಯುಂಟಾಗಿದೆ ಎಂದರು.



ಕಬಿನಿ ಜಂಗಲ್ ಲಾಡ್ಜಸ್ ಸಭಾಂಗಣದಲ್ಲಿ ಸಚಿವ ಈಶ್ವರ್ ಖಂಡ್ರೆ ಮಾತನಾಡುತ್ತಿರುವುದು.

ಈ ಹಿನ್ನೆಲೆಯಲ್ಲಿ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ಕಂದಾಯ ಸಚಿವರೊಂದಿಗೆ ಸಮಾಲೋಚನೆ ನಡೆಸಿ, ಅರಣ್ಯ ಮತ್ತು ಕಂದಾಯ ಭೂಮಿಯ ಜಂಟಿ ಸಮೀಕ್ಷೆ ನಡೆಸಲು ಉದ್ದೇಶಿಸಲಾಗಿದೆ. ಆ ಮೂಲಕ ಹಕ್ಕುಪತ್ರದ ವಿತರಣೆಗೆ ಎದುರಾಗಿರುವ ಸಮಸ್ಯೆಗಳ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಹೆಚ್.ಡಿ.ಕೋಟೆ ತಾಲೂಕಿನ ಡಿ.ಬಿ.ಕುಪ್ಪೆ ವ್ಯಾಪ್ತಿಯಲ್ಲಿರುವ ಅರಣ್ಯ ವಾಸಿಗಳಿಗೆ ಸಂಬಂಧಿಸಿದಂತೆ ಇರುವ ಗೊಂದಲ ಕುರಿತಂತೆ ಪರಿಶೀಲನೆ ಮಾಡಿ ಸೂಕ್ತ ಪರಿಹಾರ ಕಂಡು ಹಿಡಿಯಲು ಶೀಘ್ರವೇ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಭೆ ನಡೆಸಲಾಗುವುದು. ಇಂತಹ ಸಮಸ್ಯೆ ಉದ್ಭವಿಸಿರುವ ರಾಜ್ಯದ ಎಲ್ಲಾ ಹಾಡಿಗಳು ಹಾಗೂ ಹಿನ್ನೀರಿಗೆ ಮುಳುಗಡೆ ಆಗಿರುವ ಪ್ರದೇಶದ ಸಂತ್ರಸ್ತರ ಬಗ್ಗೆಯೂ ಚರ್ಚೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿದ್ದ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಹೆಚ್.ಡಿ.ಕೋಟೆ ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಆನೆಗಳ ಹಾವಳಿ ಹೆಚ್ಚಾಗಿದೆ. ಅದನ್ನು ನಿಯಂತ್ರಿಸಲು, ಕಾಡಂಚಿನ ಗ್ರಾಮ ವ್ಯಾಪ್ತಿಯ 72 ಕಿಮೀ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಖಂಡ್ರೆ, ಒಂದೇ ವರ್ಷದಲ್ಲಿ 72 ಕಿಮೀ ವಿಸ್ತೀರ್ಣದ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲು ಸಾಧ್ಯವಿಲ್ಲ. ಆದರೆ ಆನೆಗಳ ಹಾವಳಿ ಹೆಚ್ಚಿರುವ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಾಗರಹೊಳೆ ಅಭಯಾರಣ್ಯದ ಕಬಿನಿ ಹಿನ್ನೀರಿನ ಪ್ರದೇಶ ಹಾಗೂ ಅಂತರಸಂತೆ ವಲಯದಲ್ಲಿ ಕಾಡಂಚಿನ ಗ್ರಾಮಗಳಿಗೆ ಹೊಂದಿಕೊಂಡಂತಿರುವ ಅರಣ್ಯ ಪ್ರದೇಶದಲ್ಲಿ ಸೋಲಾರ್‌ಬೇಲಿ ಅಳವಡಿಸಿರುವುದನ್ನು ಪರಿಶೀಲಿಸಿದ್ದೇನೆ. ಅಲ್ಲದೆ, ಆ ಮೇಲೆ ಯಾವ ರೀತಿ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಖುದ್ದಾಗಿ ಪರಿಶೀಲಿಸಲಾಗಿದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ಅರಣ್ಯದಲ್ಲೇ ವಾಸಿಸುವ ಆದಿವಾಸಿಗಳ ಸಮಸ್ಯೆಯನ್ನು ಆಲಿಸಿದ್ದೇನೆ. ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಅವರಿಗೆ ಸಲ್ಲಬೇಕಾದ ಸೌಲಭ್ಯಗಳನ್ನು ನಿಯಮಾನುಸಾರ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದರು.

ಅರಣ್ಯ ಭೂಮಿಗೆ ಪರ್ಯಾಯವಾಗಿ ಹಕ್ಕುಪತ್ರ ವಿತರಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬಂದ ಅಹವಾಲುಗಳನ್ನು ಸಚಿವರು ಪರಿಶೀಲಿಸಿ 3 ಎಕರೆಗಿಂತ ಕಡಿಮೆ ಪ್ರದೇಶದಲ್ಲಿ 1980ಕ್ಕಿಂತ ಮೊದಲು ಉಳುಮೆ ಮಾಡುತ್ತಿರುವ ಮತ್ತು ಮನೆ ಕಟ್ಟಿಕೊಂಡು ಮೂರು ತಲೆಮಾರಿನಿಂದ ವಾಸಿಸುತ್ತಿರುವವರಿಗೆ ಮಾತ್ರ ಪರಿಹಾರ ಒದಗಿಸುವ ಸಂಬಂಧ ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿದ್ದರೆ ಪರಿಶೀಲಿಸಿ ಎಂದು ಸೂಚಿಸಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಿ.ವಿ.ರಂಗರಾವ್, ಬೆಂಗಳೂರು ವನ್ಯಜೀವಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ. ರಮೇಶ್ ಕುಮಾರ್, ನಾಗರಹೊಳೆ ನಿರ್ದೇಶಕ ಹರ್ಷಕುಮಾರ್, ಹೆಚ್.ಡಿ. ಕೋಟೆಯ ತಹಶೀಲ್ದಾರ್, ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಪಾಲ್ಗೊಂಡಿದ್ದರು.

ಕೊಳವೆ ಬಾವಿ ಮಣ್ಣು ಕುಸಿದು ಓರ್ವ ಸಾವು, ಇಬ್ಬರಿಗೆ ಗಾಯ

ನರಸೀಪುರದ ಬಳಿ ಕೊಳವೆ ಬಾವಿಗೆ ಕೇಸಿಂಗ್ ಪೈಪ್ ಅಳವಡಿಸುವ ವೇಳೆ ದುರಂತ





ತಿ.ನರಸೀಪುರ, ಜು.16 – ಕಬ್ಬಿನ ಗದ್ದೆಯಲ್ಲಿದ್ದ ಕೊಳವೆ ಬಾವಿಗೆ ಕೇಸಿಂಗ್ ಪೈಪ್ ಅಳವಡಿಸುವ ವೇಳೆ ಮಣ್ಣು ಕುಸಿದು ಓರ್ವ ಕಾರ್ಮಿಕ ಸಾವನ್ನಪ್ಪಿ ಮತ್ತಿಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಸುಜ್ಜಲೂರು ಗ್ರಾಮದಲ್ಲಿ ಸಂಭವಿಸಿದೆ.

ಚಾಮರಾಜನಗರ ಜಿಲ್ಲೆಯ ಬಿಎಂಕೆ ಹುಂಡಿ ಗ್ರಾಮದ ಲೇಟ್ ಮಹದೇವೇಗೌಡ ಎಂಬುವರ ಪುತ್ರ ಮಲ್ಲೇಶ್(34) ಎಂಬಾತನೇ ಕುಸಿದ ಮಣ್ಣಿನಡಿ ಸಿಲುಕಿ ಮೃತಪಟ್ಟ ದುರ್ದೈವಿ. ಜಮೀನು ಮಾಲೀಕ ನಿಂಗಪ್ಪ ಮತ್ತು ಕೂಲಿ ಕಾರ್ಮಿಕ ಮಾಧು ಅವರು ಗಾಯಗೊಂಡಿದ್ದು ಆಸ್ಪತ್ರೆಗೆ ಸೇರಿಸಲಾಗಿದೆ.

ತಿ.ನರಸೀಪುರ ತಾಲೂಕು ಸುಜ್ಜಲೂರು ಗ್ರಾಮದ ನಿಂಗಪ್ಪ ಎಂಬುವರ ಜಮೀನಿನಲ್ಲಿ ನೀರೆತ್ತುವ ಮೋಟಾರ್‌ಗೆ ಹಾಕಲಾಗಿದ್ದ ಕೇಸಿಂಗ್ ಪೈಪ್ ಶಿಥಿಲಗೊಂಡಿದ್ದ ಹಿನ್ನೆಲೆಯಲ್ಲಿ ಹೊಸ ಕೇಸಿಂಗ್ ಪೈಪ್ ಅಳವಡಿಸಲು ಕೇಸಿಂಗ್ ಪೈಪಿನ ಸುತ್ತ ಜೆಸಿಬಿ ಯಂತ್ರದ ಮೂಲಕ ಹಳ್ಳ ತೋಡಲಾಗಿತ್ತು. ಇಂದು ಬೆಳಗ್ಗೆ ಕೂಲಿ ಕಾರ್ಮಿಕ ಮಲ್ಲೇಶ್, ಮಾಧು ಹಾಗೂ ಜಮೀನಿನ ಮಾಲೀಕ ನಿಂಗಪ್ಪ ಕೇಸಿಂಗ್ ಪೈಪ್ ಹಾಕಲು ಶಿಥಿಲಗೊಂಡ ಪೈಪಿನ ಸುತ್ತ ಇದ್ದ ಮಣ್ಣನ್ನು ತೆಗೆಯಲು ಹೋದಾಗ ಹಠಾತ್ತಾಗಿ ಮಣ್ಣು ಕುಸಿತಗೊಂಡ ಹಿನ್ನೆಲೆಯಲ್ಲಿ ಮೂವರು ಮಣ್ಣಿನಡಿ ಸಿಲುಕಿಕೊಂಡರು.

ಕೂಡಲೇ ಸ್ಥಳದಲ್ಲಿದ್ದವರು ಮಣ್ಣಿನಡಿ ಸಿಲುಕಿದ್ದ ಜಮೀನು ಮಾಲೀಕ ನಿಂಗಪ್ಪ ಹಾಗೂ ಮಾಧು ಎಂಬುವರನ್ನು ಕಂದಕದಿಂದ ಮೇಲೆತ್ತಿದ್ದಾರೆ. ತೀವ್ರವಾದ ಆಳದಲ್ಲಿ ಸಿಲುಕಿ ಮಣ್ಣಿನಿಂದ ಮುಚ್ಚಿ ಹೋಗಿದ್ದ ಮಲ್ಲೇಶ್‌ನನ್ನು ಮೇಲೆತ್ತಲಾಯಿತಾದರೂ ಅಷ್ಟರಲ್ಲಾಗಲೇ ಆತ ಮೃತಪಟ್ಟಿದ್ದ. ಗಾಯಗೊಂಡ ಮಾಧು ಹಾಗೂ ನಿಂಗಪ್ಪ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮೃತ ಮಲ್ಲೇಶ್ ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದು, ಮೃತನ ಶವದ ಮುಂದೆ ತಾಯಿಯ ರೋದನ ಮುಗಿಲು ಮುಟ್ಟಿತ್ತು. ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಿದ್ದಾರೆ.

ಚಾ.ನಗರ ಲೋಕಸಭಾ ಚುನಾವಣೆಯಲ್ಲಿ ಮತ್ತೇ ಬಿಜೆಪಿ ಅಭ್ಯರ್ಥಿ ಗೆಲ್ಲಿಸಲು ಕರೆ

ನಂಜನಗೂಡು, ಜು.16– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಮತ್ತೊಮ್ಮೆ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿ ಕಳುಹಿಸುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಜನಪರ ಕಾರ್ಯಕ್ರಮ ದೇಶದಲ್ಲಿ ಮುಂದುವರೆಯುವಂತೆ ನೋಡಿಕೊಳ್ಳಬೇಕಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ಶನಿವಾರ ನಗರದ ಬಿಜೆಪಿ ಕಚೇರಿಯಲ್ಲಿ ಎಸ್‌ಸಿ ಮೋರ್ಚಾದಿಂದ ಆಯೋಜಿಸಿದ್ದ ಬಿಜೆಪಿ ದಲಿತ ಮುಖಂಡರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಕಳೆದ 2019ರ ಲೋಕಸಭಾ ಚುನಾವಣೆ ಸಂದರ್ಭ ಚಾಮರಾಜನಗರದಲ್ಲಿ ಬಿಜೆಪಿಗೆ 2 ಲಕ್ಷಕ್ಕೂ ಅಧಿಕ ಮತಗಳ ಹಿನ್ನಡೆಯಿತ್ತಾದರೂ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಹಿರಿಯ ನಾಯಕ ವಿ.ಶ್ರೀನಿವಾಸ ಪ್ರಸಾದ್ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಚಾಮರಾಜನಗರ ಬಿಜೆಪಿಯ ಭದ್ರಕೋಟೆ ಎಂದು ಸಾಬೀತು ಮಾಡಿದ್ದರು ಎಂದು ಅವರು ಹೇಳಿದರು.

ಈಗ ಶ್ರೀನಿವಾಸ ಪ್ರಸಾದ್ ಚುನಾವಣಾ ರಾಜಕೀಯದಿಂದ ನಿವೃತ್ತರಾಗುವುದಾಗಿ ಹೇಳಿದ್ದಾರೆ ಆದರೆ ಅವರು ಸಕ್ರಿಯ ರಾಜಕೀಯದಲ್ಲಿದ್ದು ಪಕ್ಷಕ್ಕೆ ಹಾಗೂ ಅಭ್ಯರ್ಥಿಯಾಗಿ ಕಣಕ್ಕಿಳಿಯುವವರಿಗೆ ಪೂರ್ಣ ಬೆಂಬಲ ನೀಡಲಿದ್ದಾರೆ ಎಂದರು.

ಸಭೆಯಲ್ಲಿ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಬಾಲರಾಜು, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಸಂಘಟನಾ ಕಾರ್ಯದರ್ಶಿ ಕುಮಾರಸ್ವಾಮಿ, ಕಾಂಪ್ರೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಜಿಪಂ ಮಾಜಿ ಸದಸ್ಯ ಡಾ.ಶಿವರಾಮ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ. ಮಹದೇವಯ್ಯ, ಮಹೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಮಂಜುನಾಥ ಬಾಬು, ಬಿಜೆಪಿ ಮಂಡಲ ಅಧ್ಯಕ್ಷ ಹೊರಳವಾಡಿ ಮಹೇಶ್, ದೇವ ಪ್ರಕಾಶ್ ಇತರರು ಭಾಗವಹಿಸಿದ್ದರು.



ದೊಡ್ಡಮುಲಗೂಡು ಗ್ರಾಮದಲ್ಲಿ ಬಿಎಂಸಿ ಕೇಂದ್ರ ಉದ್ಘಾಟನೆ

ಹೈನುಗಾರಿಕೆ ರೈತರ ಬದುಕಿನ ಬಹು ದೊಡ್ಡ ಆಸ್ತಿ



ತಿ.ನರಸೀಪುರ, ಜು.16– ಹೈನುಗಾರಿಕೆಯು ರೈತರ ಬದುಕಿನ ಬಹು ದೊಡ್ಡ ಆಸ್ತಿಯಾಗಿದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಹೇಳಿದರು.

ತಾಲೂಕಿನ ದೊಡ್ಡಮುಲಗೂಡು ಗ್ರಾಮದಲ್ಲಿ ನೂತನವಾಗಿ ಬಿಎಂಸಿ ಕೇಂದ್ರವನ್ನ ಉದ್ಘಾಟಿಸಿ ಅವರು ಮಾತನಾಡಿದರು. ಹೈನುಗಾರಿಕೆಯು ಇಂದು ಗ್ರಾಮೀಣ ಪ್ರದೇಶದ ರೈತರ ಬದುಕಿನಲ್ಲಿ ಬಹು ಮುಖ್ಯ ಪಾತ್ರವಹಿಸುತ್ತಿದ್ದು, ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಿದೆ, ನಾವಿಂದು ಹಾಲು ಬಳಸದ ಜಾಗವನ್ನು ಕಂಡುಕೊಳ್ಳಲು ಸಾಧ್ಯವಾಗದು, ರೋಗಿಗಳು, ವಯೋವೃದ್ಧರು ಸೇರಿದಂತೆ ಮಕ್ಕಳ ಆರೋಗ್ಯಕ್ಕೆ ಬಹು ಮುಖ್ಯವಾಗಿ ಹಾಲು ಬೇಕಾಗಿದ್ದು, ಹಾಲನ್ನು ಅಮೃತವೆಂದರೂ ತಪ್ಪಾಗಲಾರದು ಎಂದರು.

ರಾಜ್ಯದಲ್ಲಿಂದು ಹೈನುಗಾರಿಕೆಯಿಂದ 2 ಲಕ್ಷ ಜನರು ಪರೋಕ್ಷವಾಗಿ ಉದ್ಯೋಗ ಪಡೆದು ಜೀವನ ಮಾಡುತ್ತಿದ್ದಾರೆ. ಲಕ್ಷಾಂತರ ರೈತರ ಬದುಕು ಕಟ್ಟಿಕೊಂಡು ಆರ್ಥಿಕವಾಗಿ ಮುಂದುವರೆದಿದ್ದಾರೆ. ಡೈರಿ ಕಾರ್ಯದರ್ಶಿಗಳು, ಅಧ್ಯಕ್ಷರು ಹಾಗೂ ಒಕ್ಕೂಟದ ಅಧಿಕಾರಿಗಳು ಹಾಲಿನಷ್ಟೇ ಪರಿಶುದ್ಧವಾಗಿ ರೈತರ ಪರವಾದ ಕೆಲಸ ಮಾಡುವಂತಾಗಬೇಕು ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ಹಾಲು ಉತ್ಪಾದನೆ ಮಾಡುವುದರಲ್ಲಿ ನಾವು ಏಷ್ಯಾದಲ್ಲೇ ಮೊದಲ ಸ್ಥಾನದಲ್ಲಿದ್ದೇವೆ. ಹಾಲಿನ ಉತ್ಪಾದನೆಗೆ ದೇಶದೆಲ್ಲೆಡೆ ಬೇಡಿಕೆ ಹೆಚ್ಚಿದೆ.ಕೊರೊನಾ ಬಂದ ವೇಳೆ ಮಾರ್ಕೆಟ್ ಹಾಳಾಗುತ್ತದೆ ಎಂದುಕೊಂಡಿದ್ದೆವು. ಆದರೆ ಆಗಲೂ ನಾವು ಲಾಭದಲ್ಲಿದ್ದೆವು, ರೈತರು ನೀಡುವ ಹಾಲಿಗೆ ಒಕ್ಕೂಟದ ವತಿಯಿಂದ ಸರ್ಕಾರ ಸಹಯೋಗದಲ್ಲಿ ಪ್ರತಿ ಲೀಟರ್ ಹಾಲಿಗೆ 38 ರೂ.ಗಳನ್ನು ಕೊಡಲಾಗುತ್ತಿದೆ ಎಂದರು.

ನಿರ್ದೇಶಕರುಗಳಾದ ಕೆ.ಉಮಾಶಂಕರ್, ಕೆ.ಜಿ ಮಹೇಶ್, ಬಿ.ಎನ್ ಸದಾನಂದ, ಶ್ರೀಮತಿ ಲೀಲಾ ನಾಗರಾಜು, ಶ್ರೀಮತಿ ನೀಲಾಂಬಿಕೆ ಮಹೇಶ್, ಅಧಿಕಾರಿಗಳಾದ ಡಾ. ಸಿ.ದಿವಾಕರ್, ಜಿ.ಎನ್.ಸಂತೋಷ್, ಆರ್.ಪ್ರಮೋದ ಹಾಗೂ ಶ್ರೀಮತಿ ಎನ್.ದಿವ್ಯಶ್ರೀ, ಡೈರಿ ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ಗುರುಪ್ರಸಾದ್ ಹಾಗೂ ನಿರ್ದೇಶಕರು, ಸಿಬ್ಬಂದಿ ಉಪಸ್ಥಿತರಿದ್ದರು.



ಮೂಗೂರಿನ ಶ್ರೀರಾಮ ಕಾಲೋನಿಯಲ್ಲಿ ಡಾ.ಬಾಬು ಜಗಜೀವನರಾಂ 37ನೇ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ಮಾದಿಗ ಯುವಕ ಸಂಘದ ಅಧ್ಯಕ್ಷ ಗಿರೀಶ್, ಎ.ನಾರಾಯಣಸ್ವಾಮಿ, ಸೇವಾ ಟ್ರಸ್ಟ್ ಅಧ್ಯಕ್ಷ ಸುನಿಲ್ ಕುಮಾರ್, ಶಂಕರ್‌ಮೂರ್ತಿ, ಪರಶಿವಮೂರ್ತಿ, ನಾಗರಾಜು, ಸಿದ್ದರಾಜು, ಕಿರಣ್, ನಿಂಗರಾಜು, ಟ್ರಸ್ಟ್ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಾಸಕ ಅನಿಲ್ ಚಿಕ್ಕಮಾದು ಅವರ ಶ್ರಮದ ಫಲ

ಹೆಚ್.ಡಿ.ಕೋಟೆಯ ಟೈಗರ್ ಬ್ಲಾಕ್‌ಗೆ ಆಫ್ರಿಕಾದಲ್ಲಿ ಸಾವನ್ನಪ್ಪಿದ ಯುವಕನ ಮೃತದೇಹ

ಹೆಚ್.ಡಿ.ಕೋಟೆ, ಜು.16– ಆಫ್ರಿಕಾದ ಐವರಿಕೋಸ್ಟ್‌ನಲ್ಲಿ ಅನಾರೋಗ್ಯದಿಂದ ಮೃತಪಟ್ಟಿದ್ದ ತಾಲೂಕಿನ ಟೈಗರ್ ಬ್ಲಾಕ್ ನಿವಾಸಿ ಎಫ್ರಾಯಿಂ (19) ಮೃತದೇಹವನ್ನು ಶಾಸಕ ಅನಿಲ್ ಚಿಕ್ಕಮಾದು ಅವರ ಪರಿಶ್ರಮದಿಂದ ಭಾನುವಾರ ಗ್ರಾಮಕ್ಕೆ ತರಲಾಯಿತು.



ಎಫ್ರಾಯಿಂ ಆಫ್ರಿಕಾಕ್ಕೆ ಕಳೆದ ಆರು ತಿಂಗಳ ಹಿಂದೆ ಸಂಬಂಧಿಕರ ಜೊತೆ ವ್ಯಾಪಾರಕ್ಕೆ ತೆರಳಿದ್ದರು. ಡೆಂಗ್ಯೂ ಜ್ವರದಿಂದ ಬಳಲುತ್ತಿದ್ದ ಎಫ್ರಾಯಿಂನನ್ನು ಸಂಬಂಧಿಕರು ಆಫ್ರಿಕಾದ ಐವರಿಕೋಸ್ಟ್‌ನ ಆಸ್ಪತ್ರೆಗೆ ದಾಖಲು ಮಾಡಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಕಳೆದ 15 ದಿನಗಳ ಹಿಂದೆ ಮೃತಪಟ್ಟಿದ್ದರು.

ಗ್ರಾಮಕ್ಕೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿದ್ದ ಸಂದರ್ಭದಲ್ಲಿ ಮೃತನ ಸಂಬಂಧಿಕರು ಮೃತದೇಹವನ್ನು ಗ್ರಾಮಕ್ಕೆ ತರಿಸಿ ಕೊಡುವಂತೆ ಮನವಿ ಮಾಡಿದ್ದರು. ಮೃತದೇಹವನ್ನು ಗ್ರಾಮಕ್ಕೆ ತರುವ ಸಂಬಂಧ ಶಾಸಕರು ಜಿಲ್ಲಾಡಳಿತದ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಮೃತದೇಹವನ್ನು ತರಲು ಸಹಕಾರ ನೀಡಿದ್ದಾರೆ ಎಂದು ಮೃತರ ಕುಟುಂಬದವರು ತಿಳಿಸಿ, ಶಾಸಕರನ್ನು ಅಭಿನಂದಿಸಿದ್ದಾರೆ.

ಆಫ್ರಿಕಾದ ಜೊತೆ ಸಂಪರ್ಕ ಇಟ್ಟುಕೊಂಡು ದೇಶದ ರಾಯಭಾರಿ ಕಚೇರಿ ಅಧಿಕಾರಿಗಳು ಮೃತ ಎಫ್ರಾಯಿಂ ಕುಟುಂಬದವರ ಹತ್ತಿರ ಒಂದು ಲಕ್ಷ ಹಣ ಕಟ್ಟಿಸಿಕೊಂಡು ಶನಿವಾರ ರಾತ್ರಿ ಬೆಂಗಳೂರಿಗೆ ವಿಮಾನದ ಮೂಲಕ ಮೃತದೇಹವನ್ನು ಕಳುಹಿಸಿಕೊಟ್ಟರು. ನಂತರ ಆಂಬುಲೆನ್ಸ್ ಮೂಲಕ ಬೆಳಗಿನ ಜಾವ ಗ್ರಾಮಕ್ಕೆ ಮೃತದೇಹವನ್ನು ತರಲಾಯಿತು.

ಗ್ರಾಮಕ್ಕೆ ಮೃತದೇಹ ತರುತ್ತಿದಂತೆ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಗ್ರಾಮಕ್ಕೆ ತಹಶಿಲ್ದಾರ್ ಸಣ್ಣರಾಮಪ್ಪ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ನಾರಾಯಣ ಸ್ವಾಮಿ ಭೇಟಿ ನೀಡಿ ಸರ್ಕಾರದ ವತಿಯಿಂದ ಮೃತನ ಕುಟುಂಬಕ್ಕೆ ಸಿಗುವ ಸೌಲಭ್ಯ ಕೊಡಿಸುವ ಭರವಸೆ ನೀಡಿದರು. ನಂತರ ವಿಧಿ–ವಿಧಾನಗಳ ಮೂಲಕ ಗ್ರಾಮದ ಹೊರವಲಯದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ನೀರು ಕುಡಿಯಲು ಹೋದ ಬಾಲಕಿ ನದಿಯಲ್ಲಿ ಕಾಲು ಜಾರಿ ಬಿದ್ದು ಸಾವು

ಕೆ.ಆರ್.ನಗರ ತಾಲೂಕಿನ ಕಪ್ಪಡಿ ಕ್ಷೇತ್ರದ ಬಳಿ ದುರಂತ

ಭೇರ್ಯ, ಜು.16– ಕಾವೇರಿ ನದಿ ವೀಕ್ಷಿಸಿ ನೀರು ಕುಡಿಯಲು ಹೋದ ಬಾಲಕಿಯೊಬ್ಬಳು ಕಾಲು ಜಾರಿ ನದಿಗೆ ಬಿದ್ದು ಸಾವನ್ನಪ್ಪಿರುವ ಘಟನೆ ಕೆ.ಆರ್.ನಗರ ತಾಲೂಕಿನ ಕಪ್ಪಡಿ ಕ್ಷೇತ್ರದ ಬಳಿ ಸಂಭವಿಸಿದೆ.



ಗಂಧನಹಳ್ಳಿ ಗ್ರಾಮದ ಲೋಕೇಶ್ ಎಂಬುವರ ಪುತ್ರಿ ಸ್ಫೂರ್ತಿ(13) ಮೃತ ಬಾಲಕಿ. ಬಾಲಕಿಯ ಮೃತದೇಹಕ್ಕಾಗಿ ಅಗ್ನಿಶಾಮಕ ದಳದವರು ಬೋಟ್ ಮೂಲಕ ಹುಡುಕಾಟ ನಡೆಸಿದ್ದು, ಸಂಜೆಯಾದರೂ ಮೃತದೇಹ ಸಿಕ್ಕಿರಲಿಲ್ಲ. ಭಾನುವಾರ ತಂದೆ, ತಾಯಿ ಜೊತೆಯಲ್ಲಿ ಕಪ್ಪಡಿ ಕ್ಷೇತ್ರದ ಕಾವೇರಿ ನದಿಯನ್ನು ವೀಕ್ಷಿಸಿ ಬರೋಣವೆಂದು ತೆರಳಿದ್ದಾರೆ. ಗಂಧನಹಳ್ಳಿ ಮಾರ್ಗವಾಗಿ ಕಾವೇರಿ ನದಿಯ ಎಡದಂಡೆ ಭಾಗದ ಕಡೆ ವೀಕ್ಷಿಸಿ ಪಕ್ಕದಲ್ಲಿರುವ ಗದ್ದೆಯಲ್ಲಿ ಊಟ ಮಾಡಿ ನಂತರ ನದಿಯುಲ್ಲಿ ನೀರು ಕುಡಿದು ಬರುತ್ತೇನೆ ಎಂದು ನದಿಗೆ ಇಳಿದಾಗ ಕಾಲು ಜಾರಿ ನದಿಗೆ ಬಿದ್ದಿದ್ದು, ನದಿಯಲ್ಲಿನ ನೀರಿನ ರಭಸಕ್ಕೆ ಕೊಚ್ಚಿ ಹೋಗಿದ್ದಾಳೆ.

ಇತ್ತ ತಂದೆ ಲೋಕೇಶ್ ಪುತ್ರಿ ಕಾಣುತ್ತಿಲ್ಲ ಎಂದು ಗಾಬರಿಯಿಂದ ನದಿಯ ಪಕ್ಕದಲ್ಲಿ ಹುಡುಕಿದರೂ ಪುತ್ರಿ ಪತ್ತೆಯಾಗದ ಕಾರಣ ಕೂಡಲೇ ಕೆ.ಆರ್.ನಗರ ಪೊಲೀಸ್ ಠಾಣೆಗೆ ಕರೆ ಮಾಡಿ ತಿಳಿಸಲಾಗಿ, ಅಗ್ನಿಶಾಮಕ ಠಾಣಾಧಿಕಾರಿ ಲಕ್ಷ್ಮಿಕಾಂತ್ ಅವರು ಕೂಡಲೇ ತಮ್ಮ ಸಿಬ್ಬಂದಿಗಳೊಡನೆ ಆಗಮಿಸಿ ಬೋಟ್ ಮೂಲಕ ಬಾಲಕಿ ಬಿದ್ದ ಸ್ಥಳದಿಂದ ವ್ಯಾಪಕವಾಗಿ ಶೋಧ ನಡೆಸಿದರೂ ಇದುವರೆಗೂ ಬಾಲಕಿ ಶವ ಪತ್ತೆಯಾಗಿಲ್ಲ. ಈ ಸಂಬಂಧ ಕೆ.ಆರ್.ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಬಾಲಕಿ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತು.

ಒಕ್ಕಲಿಗ ಸಮಾಜದಲ್ಲಿ ಒಗ್ಗಟ್ಟು ಮೂಡಿಸುವ ಅನಿವಾರ್ಯತೆ ಇದೆ

ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಜಿಟಿಡಿ

ಹುಣಸೂರು.ಜು.16– ಒಕ್ಕಲಿಗ ಸಮುದಾಯ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಮುಂದುವರೆದಿದ್ದರೂ ಸಮಾಜದಲ್ಲಿ ಒಗ್ಗಟ್ಟು ಮೂಡಿಸುವ ಅನಿವಾರ್ಯತೆ ಎದುರಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ನಾಡಪ್ರಭು ಕೆಂಪೇಗೌಡರ 514ನೇ ಜಯಂತಿ, ಪ್ರತಿಭಾ ಪುರಸ್ಕಾರ ಮತ್ತು ನೂತನ ಶಾಸಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಒಕ್ಕಲಿಗ ಸಮಾಜ ಒಂದಾಗಿ ಹೋರಾಟ ನಡೆಸುವುದರಿಂದ ಹಲವು ಸಾಧನೆಗಳನ್ನು ಮಾಡಲು ಸಾಧ್ಯವಿದೆ ಈ ದೃಷ್ಟಿಯಿಂದ ನಾವೆಲ್ಲರೂ ಒಂದೇ ಧ್ವನಿಯಾಗಿ ನಮ್ಮ ಸಮಸ್ಯೆಗಳನ್ನು ಸರ್ಕಾರಕ್ಕೆ ತಲುಪಿಸುವ ಕೆಲಸ ಮಾಡಬೇಕಾಗಿದೆ ಎಂದರು. ಮೈಸೂರು ಒಕ್ಕಲಿಗರ ಸಂಘ 2015ರಲ್ಲಿ ಬೆಂಗಳೂರು ಸ್ಥಾಪಕ ಕೆಂಪೇಗೌಡರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಬೇಕು ಎಂಬ ಬೇಡಿಕೆಗೆ ಅಂದಿನ ಸರ್ಕಾರ ಸ್ಪಂದಿಸಿ ಸರ್ಕಾರದಿಂದ ಇಂದು ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಲು ನಿರ್ಧರಿಸಿತು. ಇದರಿಂದ ಕೆಂಪೇಗೌಡರ ಸ್ಮರಣೆ ನಡೆದಿದೆ. ಇದೇ ರೀತಿ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭುಗಳ ನಾಮಕರಣ ಮಾಡುವಂತೆ ಮಾಡಿದ ಮನವಿಗೆ ಸರ್ಕಾರ ಸಮ್ಮತಿಸಿ ಬೃಹತ್ ಪ್ರತಿಮೆ ಸ್ಥಾಪಿಸಿ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಡಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಸಂಸ್ಥಾನ ಅಂದು ಕೈಗೊಂಡ ಅನೇಕ ಸಾಮಾಜಿಕ ಸುಧಾರಣೆ ಕಾರ್ಯಕ್ರಮಗಳ ಮಾದರಿಯಲ್ಲೇ ನಾಡಪ್ರಭು ಕೆಂಪೇಗೌಡರು ಕೈಗೊಂಡು ಉದ್ಯೋಗ ಸೃಷ್ಟಿಸಲು ವರ್ಗವಾರು ಮಾರುಕಟ್ಟೆ ಸ್ಥಾಪಿಸಿ ಬೆಂಗಳೂರನ್ನು ವಾಣಿಜ್ಯ ನಗರಿಯಾಗಿಸಿದರು ಎಂದರು.



ಶಾಸಕ ಹರೀಶ್‌ಗೌಡ ಮಾತನಾಡಿ, ಹುಣಸೂರು ತಾಲೂಕು ಒಕ್ಕಲಿಗರ ಸಂಘದ ಸಮುದಾಯ ಭವನ ನಿರ್ಮಾಣಕ್ಕೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಂಸದ ಪ್ರತಾಪಸಿಂಹ ಸಹಕಾರದಿಂದ 2 ಎಕರೆ ಸರ್ಕಾರಿ ನಿವೇಶನ ಮಂಜೂರಾಗಿದ್ದು, ಸಂಸದರ ನಿಧಿಯಿಂದ 55 ಲಕ್ಷ ಅನುದಾನ ನೀಡಿದ್ದಾರೆ. ಕಟ್ಟಡ ನಿರ್ಮಾಣದ ಜವಾಬ್ದಾರಿ ವೈಯಕ್ತಿಕವಾಗಿ ಹೊರುತ್ತೇನೆ ಎಂದರು.

ಕ್ಷೇತ್ರದಲ್ಲಿ 15 ವರ್ಷದಿಂದ ಒಕ್ಕಲಿಗ ಸಮುದಾಯದ ಜನಪ್ರತಿನಿಧಿ ಇಲ್ಲದೆ ಸಮಾಜದವರು ಹಲವು ಸಮಸ್ಯೆ ಎದುರಿಸಿದ್ದಾರೆ. ಈಗ ನಿಮ್ಮ ಸಮಾಜದವರನ್ನೇ ಆಯ್ಕೆ ಮಾಡಿದ್ದು, ಭವಿಷ್ಯದಲ್ಲಿ ಸಮಾಜದ ಏಳಿಗೆಗೆ ಸಹಾಯ ಪಡೆಯಬಹುದಾಗಿದೆ. ಹುಣಸೂರು ನಾಗರಿಕರು ನೀಡಿದ ಮತದಿಂದಾಗಿ ಇಂದು ಶಾಸಕನಾಗಿದ್ದು, ಒಕ್ಕಲಿಗರೊಂದಿಗೆ ಇತರೆ ಸಮಾಜದವರನ್ನು ಒಗ್ಗೂಡಿಸಿ ಕ್ಷೇತ್ರದಲ್ಲಿ ಶಾಂತಿ ಸೌಹಾರ್ದ ಸ್ಥಾಪಿಸಿ ಅಭಿವೃದ್ಧಿಯತ್ತ ಹೆಜ್ಜೆ ಹಾಕುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕದೊಂದಿಗೆ ತೇರ್ಗಡೆಯಾದ ಒಕ್ಕಲಿಗ ಸಮಾಜದ ವಿದ್ಯಾರ್ಥಿಗಳನ್ನು ಮತ್ತು ಶಾಸಕ ಹರೀಶ್‌ಗೌಡರನ್ನು ಗೌರವಿಸಲಾಯಿತು. ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ಒಕ್ಕಲಿಗ ಸಂಘದ ಅಧ್ಯಕ್ಷ ಗಣೇಶ್‌ಗೌಡ, ಗೌರಿಶಂಕರ್, ಜಯರಾಮ್, ಯೋಗಾನಂದ ಕುಮಾರ್, ಕಿರಂಗೂರು ಬಸವರಾಜ್, ರುದ್ರೇಗೌಡ, ಬಾಲಕೃಷ್ಣ, ಸುರೇಶ್, ಚಂದ್ರಶೇಖರ್, ಸತೀಶ್ ಪಾಪಣ್ಣ, ವೆಂಕಟೇಶ್ ಸೇರಿದಂತೆ ಸಮಾಜದ ಮುಖಂಡರಿದ್ದರು.


ತಾಯಿ ಚಾಮುಂಡೇಶ್ವರಿ ಆಯಸ್ಸು, ಆರೋಗ್ಯ, ಉನ್ನತಸ್ಥಾನಮಾನ ಕೊಟ್ಟು ಕಾಪಾಡಲಿ
ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರು, ಸರಳತೆಯ ನಾಯಕ, ಯುವಕರ ಮುತ್ತಿನ ಕಣ್ಮಣಿ
ಸನ್ಮಾನ್ಯ ಶ್ರೀ ಕೆ.ಹರೀಶ್‌ಗೌಡರವರಿಗೆ
ಜನ್ಮದಿನದ ಹಾರ್ಧಿಕ ಶುಭಾಶಯಗಳು
ಶುಭಕೋರುವವರು
ಬಿ. ಸಂದೀಪ್
ಅಧ್ಯಕ್ಷರು,
ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್